
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

06 ಮೇ 2015 ಪುಟ 20 ರೂ. 15/-



ಬಸವಣ್ಣ ಅಧಿಕಾರವೆಂಬ ನಾಯಿತೇಜ




ನಿವೃತ್ತ ಅಧಿಕಾರಿಯ ಪುತ್ರಿ

ಯಾವ ತಪ್ಪಿಗೆ ಅತ್ಯಾಚಾರದ ಶಿಕ್ಷೆ

0 ಸಾವಿರ ಕೋಟಿ ಗುಳುಂ

ಬಿಜೆಪಿಯ ಬೆಂಗಳೂರುದ್ಧಾರ!






ಆಡಿದ್ದು ಒಂದು ಮಾಡಿದ್ದು ಮತ್ತೊಂದು

ಸಿಗಂದೂರು ದೇವಾಲಯ

ಸ್ವಾಹಕ್ಕೆ ಸ್ಕೆಚ್!



ಸುಸ್ಥಿರ ಬದುಕು ಸಮಾವೇಶ: ಹೊಸದೇನು?



ನಂಜನಗೂಡು ತಾಲೂಕಿನ ಬದನವಾಳಿನಲ್ಲಿ ನಡೆದ 'ಸುಸ್ಥಿರ ಬದುಕಿನ ಸಮಾವೇಶ' ಹಲವು ಕಾರಣಗಳಿಂದ ಗಮನ ಸೆಳೆಯಿತು. ಇದಕ್ಕೂ ಮುಂಚೆ ಪ್ರಸನ್ನರವರು ಕೈಮಗ್ಗ ನೇಕಾರರ ಸಮಸ್ಯೆಗಳ ಗಮನ ಸೆಳೆಯಲು ಸತ್ಯಾಗ್ರಹಗಳನ್ನು ನಡೆಸಿದ್ದರು. ಸ್ವಾತಂತ್ರ್ಯಪೂರ್ವದ ಖಾದಿ ಗ್ರಾಮೋದ್ಯೋಗ ಕೇಂದ್ರವಿರುವ ಬದನವಾಳುವಿನಲ್ಲೇ ಈ ಸಮಾವೇಶವೂ ಆಯೋಜನೆಯಾಗಿದ್ದರಿಂದ, ಇದು ಕೈಮಗ್ಗ ಹೋರಾಟದ ಮುಂದುವರಿಕೆ ಎಂದೇ ಅನಿಸಿತ್ತು. ಆದರೆ, ಕೈಮಗ್ಗದ ಹೋರಾಟದಲ್ಲಿ ತೊಡಗಿಕೊಂಡವರು ಮಾತ್ರವಲ್ಲದೇ, ಇನ್ನೂ ಹಲವರು ಸೇರಿಕೊಂಡು ಅಂತಿಮವಾಗಿ ಅದು 'ಬದನವಾಳು ಸತ್ಯಾಗ್ರಹ'ದ ರೂಪ ಪಡೆದಿದೆ.

ಕೈಮಗ್ಗವನ್ನು ಒಂದು ಜೀವನೋಪಾಯದ ಸಾಧನವಾಗಿ ಮಾತ್ರವಲ್ಲದೇ ಬದುಕಿನ ತಾತ್ವಿಕತೆಯಾಗಿ ನೋಡುತ್ತಿರುವವರು ಆ ಹೋರಾಟದ ಜೊತೆಗಿದ್ದರು. ಹಾಗಾಗಿ ಕೈಮಗ್ಗದ ಹೋರಾಟದ ಮುಂದುವರಿಕೆ, 'ಸುಸ್ಥಿರ ಬದುಕಿನ' ಚಳವಳಿಯಾಗಿ ವಿಸ್ತರಣೆಯಾಯಿತು. ಇದನ್ನೇ ಇನ್ನೊಂದು ರೀತಿಯಲ್ಲಿ 'ಶ್ರಮಸಹಿತ ಸರಳ ಜೀವನ'ಕ್ರಮದ ಪ್ರತಿಪಾದನೆಯಾಗಿಯೂ ಮುಂದಿಡಲಾಯಿತು. ಈ ವಿಚಾರವನ್ನು ಪ್ರತಿಪಾದಿಸುತ್ತಿರುವವರು ವ್ಯಕ್ತಿಗತವಾಗಿ ನೈತಿಕ ಮೌಲ್ಯಗಳನ್ನು ಉಳಿಸಿಕೊಂಡಿರುವವರು, ತಮ್ಮ ಬದುಕಿನಲ್ಲೂ ಇದನ್ನು ಅಳವಡಿಸಿಕೊಂಡಿರುವವರು, ವಿವಿಧ ರಂಗಗಳಲ್ಲಿ ತಮ್ಮ ಕ್ರಿಯಾಶೀಲತೆಯನ್ನು



ಸಾಬೀತುಪಡಿಸುವವರು ಇದರಲ್ಲಿ ಮುಂಚೂಣಿಯಲ್ಲಿದ್ದಾರೆ. ಇವತ್ತಿನ ಸಾರ್ವಜನಿಕ ಬದುಕಿನಲ್ಲಿ ಮಾತಿಗೂ ಕ್ರಿಯೆಗೂ ಅಂತಹ ತಾಳಮೇಳವಿಲ್ಲದವರ ಪ್ರಮಾಣ ಸಾಕಷ್ಟಿರುವುದರಿಂದಲೂ ಈ ಗುಂಪು ಗಮನ ಸೆಳೆದಿರಬಹುದು.

ಈ ಸಮಾವೇಶದ ಪ್ರಕ್ರಿಯೆಯನ್ನು ಮುನ್ನಡೆಸಿದ ಪ್ರಸನ್ನ ಒಬ್ಬ ಪರಿಣಿತ ರಂಗನಿರ್ದೇಶಕರೂ ಆಗಿದ್ದಾರೆ. ಪ್ರೇಕ್ಷಕರನ್ನು ತಲುಪಲು ಬೇಕಾದ ಭಾಷೆ, ಇಮೇಜ್, ಚೌಕಟ್ಟು ಅವರಿಗೆ ಕರಗತವಾಗಿದೆ. ಯಾವುದೇ ಕಲೆ ಅಥವಾ ಚಳವಳಿಯು ಯಶಸ್ವಿಯಾಗುವುದರಲ್ಲಿ 'ಟೈಮಿಂಗ್' ಸಹ ಮುಖ್ಯ. ಬದನವಾಳು ಸತ್ಯಾಗ್ರಹ ರೂಪುತಳೆದ ಪ್ರಕ್ರಿಯೆಗೆ ಅದೂ ಒದಗಿಬಂತು. ಸರಿಯಾದ ಟೈಮಿಗೆ ಇರ್ಫಾನ್‌ಖಾನ್, ಮೇಧಾ ಪಾಟ್ಕರ್, ದೇವನೂರು ಮಹಾದೇವರು ಅಲ್ಲಿ ಎಂಟ್ರಿ ಕೊಟ್ಟಿದ್ದೂ ಪರಿಣಾಮವನ್ನು ಹೆಚ್ಚಿಸಿತು. ಕನ್ನಡದ ಪತ್ರಿಕೆಗಳು ಮತ್ತು ಬಾಲಿವುಡ್ಡಿನ ಗ್ಲಾಮರ್‌ನ ನಂತರ ಇಂಗ್ಲಿಷ್ ಪತ್ರಿಕೆಗಳೂ ವರದಿ ಮಾಡಬೇಕಾದ್ದನ್ನೇ ದಿನಂಪ್ರತಿ ವರದಿ ಮಾಡಿದವು. ಇದೇ ಹೊತ್ತಿಗೆ ತೆರೆದುಕೊಂಡ ಸಿಜಿಕೆ ರಂಗೋತ್ಸವವೂ, ರಂಗಾಯಣದ ಚಟುವಟಿಕೆಗಳೂ ಸಹ ಪೂರಕ ಪಾತ್ರ ವಹಿಸಿವೆ.

ಯಾವುದೂ ಅತಿಯೆನಿಸದಂತೆ, ತಾವು ಪ್ರತಿಪಾದಿಸುತ್ತಿರುವ ವಿಚಾರಧಾರೆಯ ಚೌಕಟ್ಟು, ಒಪ್ಪ ಓರಣಕ್ಕೆ ಮುಕ್ಕಾಗದಂತೆ ಇವೆಲ್ಲವನ್ನೂ ದುಡಿಸಿಕೊಂಡ ವಿಧಾನವೂ ಅನನ್ಯವಾಗಿತ್ತು. ಇಂದಿನ ಸಾಮಾಜಿಕ, ರಾಜಕೀಯಾರ್ಥಿಕ ಸನ್ನಿವೇಶಕ್ಕೆ ತಕ್ಕಂತೆ ಒದಗಿ ಬಂದ ಮೇಲಿನ ಎಲ್ಲಾ ಅಂಶಗಳೂ 'ಬದನವಾಳು ಸತ್ಯಾಗ್ರಹ'ಕ್ಕೆ ಸಾವಿರಾರು ಜನರನ್ನು ಕರೆತಂದಿತು. ಆ ದಿನದ ಕಾರ್ಯಕ್ರಮದ ಉಳಿದ ಸಿದ್ಧತೆಗಳನ್ನೂ ಎಷ್ಟು ಅಚ್ಚುಕಟ್ಟಾಗಿ ಮಾಡಲು ಸಾಧ್ಯವಿತ್ತೋ, ಅದಕ್ಕಿಂತ ಅಚ್ಚುಕಟ್ಟಾಗಿ ಮಾಡಲಾಗಿತ್ತು.

ಬದನವಾಳು ಸತ್ಯಾಗ್ರಹದ ಹಿನ್ನೆಲೆಯಲ್ಲಿ ಇನ್ನೊಮ್ಮೆ ಗಾಂಧಿಯವರ (ಅಲ್ಲಿದ್ದ ಗಾಂಧಿ ಪ್ರತಿಮೆಯ ಮುಂದೆ 'ರಘುಪತಿ ರಾಘವ ರಾಜಾರಾಂ' ಪ್ರಾರ್ಥನೆಯನ್ನು ನಡೆಸಿದ್ದು ಬಿಟ್ಟರೆ ಫೋಟೋ, ಹೆಸರಿನ ಸ್ಮರಣೆಗಳ ಗೈರುಹಾಜರಿ ಎದ್ದು ಕಾಣುವಂತಿತ್ತು) ಚಿಂತನೆ ಹಾಗೂ ಬದುಕಿನಿಂದ ನಾವೆಲ್ಲರೂ, ಇಂದೂ ಕಲಿಯಬೇಕಾದ್ದು ಏನಿದೆ ಎಂಬುದನ್ನು ಆಲೋಚಿಸಬೇಕಿದೆ. ವ್ಯಕ್ತಿಗತವಾಗಿ ಅಂತಹದೊಂದು ಚಿಂತನೆ ನಡೆಸಲು ಈ ಕಾರ್ಯಕ್ರಮವು ನನ್ನನ್ನು ಪ್ರೇರೇಪಿಸಿದೆ. ಅಲ್ಲಿ ಬೋಧಿಸಲಾದ ಪ್ರತಿಜ್ಞೆಗಳಲ್ಲಿ ನಿಜಕ್ಕೂ ನಾನು ಮುಂದಿನ ದಿನಗಳಲ್ಲಿ ಪಾಲಿಸುವ ಖಾತರಿ ಇರುವಂಥವನ್ನು ಮಾತ್ರ ಪುನರುಚ್ಚರಿಸಿದೆ ಹಾಗೂ ಅಂದಿನ ದಿನದ ನಂತರ ಸಾಧ್ಯವಿದ್ದಷ್ಟೂ ಪಾಲಿಸುವ ಪ್ರಯತ್ನವನ್ನೂ ಮಾಡುತ್ತಿದ್ದೇನೆ.


ಇದಕ್ಕೆ ಒಂದು ಕಾರಣವಿದೆ. ನಾನು ವ್ಯಕ್ತಿಗತವಾಗಿ ಗಾಂಧಿಯವರ ಒಟ್ಟಾರೆ ಚಿಂತನೆಯ ಎಲ್ಲವನ್ನೂ ಒಪ್ಪದ ವಿಚಾರಧಾರೆಗೆ ಸೇರಿದವನಾಗಿದ್ದರೂ, ಈ ಜಗತ್ತಿನ ಎಲ್ಲಾ ಪ್ರಗತಿಪರ ಮಾನವೀಯ ಚಿಂತನೆಗಳಿಂದಲೂ ಏನೇನನ್ನು ತೆಗೆದುಕೊಳ್ಳಬೇಕಿದೆ ಎಂಬುದನ್ನು ಆಲೋಚಿಸುವ ಕಾಲದಲ್ಲಿ ನಾವೆಲ್ಲರೂ ಇದ್ದೇವೆ. ಇದು 'ಎಲ್ಲರೂ ಒಂದಾಗಲೇಬೇಕಾದ ತುರ್ತನ್ನು ಫ್ಯಾಸಿಸಂ' ಸೃಷ್ಟಿಸಿರುವುದರಿಂದ ಮಾತ್ರವೇ ಅಲ್ಲ, 21ನೇ ಶತಮಾನದ ಬದಲಾವಣೆಯ ಚಿಂತನೆಯು, 20ನೇ ಶತಮಾನದ ಎಲ್ಲಾ ಪ್ರಗತಿಪರ ಚಳವಳಿ/ಚಿಂತನೆಗಳ ಪಾಠಗಳನ್ನು, ಪುನರಾವಲೋಕನದೊಂದಿಗೆ ಸ್ವೀಕರಿಸುವ ಅಗತ್ಯವಿರುವುದರಿಂದಲೂ ಅದರ ಅಗತ್ಯವಿದೆ.


ಇಷ್ಟೆಲ್ಲಾ ಹೇಳಿದ ಮೇಲೂ 'ಬದನವಾಳು ಸತ್ಯಾಗ್ರಹ'ದಲ್ಲಿ ಹೊಸದೇನಿತ್ತು ಎಂದು ಕೇಳಿಕೊಂಡರೆ, ಹೆಚ್ಚೇನೂ ಹೊಸದಿದ್ದಂತೆ ತೋರುತ್ತಿಲ್ಲ, ಒಟ್ಟಾರೆ ಪ್ಯಾಕೇಜ್ ಹೊಸದಾಗಿತ್ತು. ಆದರೆ ಆಧುನಿಕತೆ (ಲಾಭಕೋರ ಬಂಡವಾಳಶಾಹಿಯನ್ನು ಈ ಪದದೊಂದಿಗೆ ಸಮೀಕರಿಸುವುದು ಸರಿಯಲ್ಲದಿದ್ದರೂ)ಯ ಕುರಿತಾದ ಗಾಂಧೀ ಮಾರ್ಗದ ಆಲೋಚನೆಯ ಪುನರಾವರ್ತನೆಯ ಹೊರತಾಗಿ, 21ನೇ ಶತಮಾನದಲ್ಲಿ ಸೇರ್ಪಡೆಯಾದ ಹೊಸ ಅಂಶಗಳು ಬದನವಾಳುವಿನಲ್ಲಿ ಗೋಚರವಾಗಲಿಲ್ಲ.

ಬಹುಶಃ ಸುಸ್ಥಿರ ಬದುಕು ಎಂಬ ಪದವು ಈ ಪಾಟ ಬಳಕೆಯಾಗಿದ್ದು ಹೊಸದು. **Sustainable living** ಎಂಬುದನ್ನು ಎನ್‌ಜಿಓಗಳು ಗುತ್ತಿಗೆ ಹಿಡಿದು ಸಾಕಷ್ಟು ಸವಕಲಾಗಿಸಿದ್ದವು. ಈ ಪರಿಕಲ್ಪನೆಯನ್ನು ಅಲ್ಲಿಂದ ವಿಮೋಚನೆಗೊಳಿಸಿ ಈ ರೀತಿಯ ಸತ್ಯಾಗ್ರಹದ ಕೇಂದ್ರವಾಗಿಸಿದ್ದು ಒಳ್ಳೆಯದು. ಜಾಗತೀಕರಣದ ಪರಿಣಾಮಗಳನ್ನು ಈ ಜಗತ್ತು ಎರಡು ದಶಕಗಳ ಕಾಲ ಅನುಭವಿಸಿರುವುದರಿಂದ ಹೊಸ ವಿವರಗಳು ಇದಕ್ಕೆ ಸೇರ್ಪಡೆಯಾಗಿರಬಹುದು. ಈ ಪ್ರಮಾಣದ ಮಧ್ಯಮ ವರ್ಗ ಗಾಂಧಿಯವರ ಕಾಲದಲ್ಲಿ ಇರಲಿಲ್ಲವಾದ್ದರಿಂದ, ಆಧುನಿಕತೆಯ ಕೇಡಿಗೆ ಅಸಹ್ಯ ಪಟ್ಟುಕೊಂಡು ಗಣನೀಯ ಸಂಖ್ಯೆಯ ಜನ ಈಗ ಲಭ್ಯರಾಗಿದ್ದಾರೆ. ಜಾಗತೀಕರಣವು ಪರಿಸರ ನಾಶವನ್ನು, ಮನುಷ್ಯ ಸಂಬಂಧಗಳಲ್ಲಿ ಹಿಂದಿನ ಮೌಲ್ಯಗಳ ನಾಶವನ್ನು ಸಾಧಿಸಿರುವ ಸಂದರ್ಭವು ಹಲವರನ್ನು ಗಾಬರಿಗೊಳಿಸಿದೆ. ಹಾಗಾಗಿಯೂ 'ಹಿಂದ್ ಸ್ವರಾಜ್'ನ ಪುನರ್‌ಪಠಣವು ಹೊಸದಾಗಿ ಕೇಳಿಸುವ ಸಾಧ್ಯತೆಯಿದೆ.

ಆದರೆ ಆಧುನಿಕ ಬಂಡವಾಳಶಾಹಿ ರಾಜಕೀಯಾರ್ಥಿಕತೆಯ ಕುರಿತ ಸಂಪ್ರದಾಯವಾದಿ ವಿಮರ್ಶೆಗೂ, ಸಮಾಜವಾದೀ ವಿಮರ್ಶೆಗೂ ಇರುವ ವ್ಯತ್ಯಾಸದ ಬಗೆಗಿನ ಚರ್ಚೆಗೆ ಕನಿಷ್ಠ 75 ವರ್ಷವಾಗಿದೆ. ಅಲ್ಲಿಂದ ಮುಂದಕ್ಕೆ, ಮಾರ್ಕ್ಸ್‌ವಾದವು 'ಎಕೋ ಮಾರ್ಕ್ಸಿಸಂ, ಮಾರ್ಕ್ಸಿಸ್ಟ್ ಫೆಮಿನಿಸಂ' ಇತ್ಯಾದಿ ಮಜಲುಗಳನ್ನು ಹಾಯ್ದು ಬಂದಿದೆ. ದೇಶವಿದೇಶಗಳ ಮಾರ್ಕ್ಸಿಸ್ಟರು ತಾವು ಹೊಸ ಕಾಲದ ಐಡೆಂಟಿಟಿ ಚಳವಳಿಗಳಿಂದ ಕಲಿಯಬೇಕಾಗಿದ್ದೇನು, ಸೋವಿಯತ್ ರಷ್ಯಾದ ಅಭಿವೃದ್ಧಿಯ ಮಾದರಿಯಲ್ಲಿದ್ದ ಸಮಸ್ಯೆಗಳೇನು ಎಂಬುದನ್ನು ಸಾಕಷ್ಟು ಚರ್ಚಿಸಿದ್ದಾರೆ. ಆದರೆ ಗಾಂಧಿವಾದವು ಮಿಕ್ಕ, ಇನ್ನಿತರ 'ವಾದ'ಗಳಿಂದ ತೆಗೆದುಕೊಳ್ಳಬೇಕಾಗಿರುವುದು ಏನೂ ಇಲ್ಲ ಎಂಬಂತೆ ಬದನವಾಳು ಚಿಂತನೆಯು ನಡೆದದ್ದು ಆಶ್ಚರ್ಯಕರವಾಗಿತ್ತು.

ಮನುಷ್ಯ ಲೋಭಿ, ಮನುಷ್ಯ ಸ್ವಾರ್ಥಿ, ಮನುಷ್ಯನ ಲಾಭಕೋರತನ ಎಂಬ ಮಾತು ಎರಡು ಹೆಜ್ಜೆಯೂ





ಮುಂದಕ್ಕೆ ಬಂದಿಲ್ಲವೇಕೆ? ಅಂಬಾನಿಯೂ, ಆದಿವಾಸಿಗಳೂ ಒಂದೇ ರೀತಿಯ ಮನುಷ್ಯರಾ? ಇಬ್ಬರೂ ಆಸೆ ಪಡುತ್ತಿರುವುದರಲ್ಲಿ ಇರುವ ವ್ಯತ್ಯಾಸ ಕೇವಲ ಪ್ರಮಾಣಾತ್ಮಕವಾದದ್ದಾ ಅಥವಾ ಗುಣಾತ್ಮಕವಾದದ್ದಾ? ಇತ್ಯಾದಿ ಇತ್ಯಾದಿ ಪ್ರಶ್ನೆಗಳು ಬದನವಾಳು ಸತ್ಯಾಗ್ರಹದ ಆಯೋಜಕರಿಗೆ ಬಂದೇ ಇಲ್ಲ ಎಂದು ಹೇಳಲಾಗುವುದಿಲ್ಲ. ಆದರೆ ಅದಕ್ಕೆ ಇರಬೇಕಾದ ಒತ್ತಿನ ಕಾಲಂಶವೂ ಇರಲಿಲ್ಲ. ಹಾಗಾಗಿಯೇ ಅಮೂರ್ತವಾದ ಮನುಷ್ಯರ ಬಗ್ಗೆ ಅಲ್ಲಿ ಹೆಚ್ಚಿನ ಚರ್ಚೆಯಾಯಿತು. ಭೀಕರ ಪರಿಣಾಮಗಳನ್ನುಂಟುಮಾಡುತ್ತಿರುವ 'ಅಭಿವೃದ್ಧಿಯ ಮಾದರಿ'ಯ ವಿರುದ್ಧ ಮಾತುಗಳು ಬಂದವು. ಆದರೆ ಬದಲಾವಣೆ ವ್ಯಕ್ತಿಗತವಾಗಿ ಮನುಷ್ಯನಲ್ಲಿ ಮಾತ್ರ ಬರಬೇಕೆಂಬಂತೆ ಪ್ರತಿಜ್ಞಾವಿಧಿಯನ್ನು ಬರೆಯಲಾಗಿತ್ತು.

ಅಸ್ಥಿರ ಬದುಕನ್ನು ಸೃಷ್ಟಿಸುತ್ತಿರುವ ಶಕ್ತಿಗಳನ್ನು ಎದುರಿಸದೇ, ಅವರನ್ನು ಮಣಿಸದೇ ಸುಸ್ಥಿರ ಬದುಕನ್ನು ನಡೆಸುವುದು ಸಾಧ್ಯವೇ? ಹೌದು ಸಾಧ್ಯ, ನಾವು ವ್ಯಕ್ತಿಗತವಾಗಿ ಶ್ರಮಸಹಿತ ಸರಳ ಜೀವನವನ್ನು ಅಪ್ಪಿಕೊಳ್ಳುವುದರಿಂದ ಸಾಧ್ಯ ಎಂಬ ವಾದ ಇದರದ್ದು. ಇಲ್ಲಿ ನಾವು ಎಂದರೆ ಯಾರು? ಅಂದರೆ ಯಾವ ವರ್ಗಗಳಿಗೆ ಸೇರಿದವರು, ಯಾವ ಜಾತಿಗಳಿಗೆ ಸೇರಿದವರು?

ಯಾರ್ಯಾರಿಗೆ ಇದು ಸಾಧ್ಯ? ಈ ಪ್ರಶ್ನೆ ಅಷ್ಟೊಂದು ಅಸಂಗತವೇ? ಮಾರ್ಕ್ಸ್‌ವಾದಿಗಳು ಮತ್ತು ಅಂಬೇಡ್ಕರ್ ವಾದಿಗಳು ಅಂದಿನಿಂದ ಕೇಳುತ್ತಿರುವ ಈ ಪ್ರಶ್ನೆಗಳು 21ನೇ ಶತಮಾನದ ಗಾಂಧಿ ಚಿಂತನೆಯಲ್ಲಿ ಯಾವ ಮಾರ್ಪಾಡನ್ನು ತಂದಿವೆ? ಚಿಂತನೆಯಲ್ಲಿ ಮಾರ್ಪಾಡಿಲ್ಲ, ಪ್ಯಾಕೇಜ್‌ನಲ್ಲಿ ಮಾತ್ರ ಮಾರ್ಪಾಡಿದೆ.

ಅಂಬೇಡ್ಕರ್ ವೇದಿಕೆ, ಬಸವ ವೇದಿಕೆ ಮತ್ತು ಕಸ್ತೂರಬಾ ವೇದಿಕೆ ಎಂಬ ಹೆಸರುಗಳು ಮೂರು ಬೇರೆ ಬೇರೆ ಬ್ಯಾನರ್‌ಗಳಲ್ಲಿ ಇದ್ದವು. ಬ್ಯಾನರ್ ನೋಡಿದ ಕಂಡ ಒಂದು ಸಂಗತಿಯೆಂದರೆ, ಬಸವ ವೇದಿಕೆ ಬ್ಯಾನರ್ ಮಾತ್ರ ಪೂರ್ತಿ ಒರಿಜಿನಲ್ ಆಗಿತ್ತು. ಉಳಿದೆರಡು ಬ್ಯಾನರ್‌ಗಳಲ್ಲಿ ಹಿಂದೆ ಬೇರೆ ಹೆಸರು ಬರೆದು, ಅದರ ಮೇಲೆ ಬಿಳಿ ಬಣ್ಣ ಹಾಕಿ, ಅಂಬೇಡ್ಕರ್ ಮತ್ತು ಕಸ್ತೂರಬಾ ಅವರ ಹೆಸರುಗಳನ್ನು ಬರೆಯಲಾಗಿದ್ದಂತೆ ಕಾಣುತ್ತಿತ್ತು. ಇದು ಬೇರೆ ಇನ್ನಾವ ಕಾರಣಕ್ಕೂ ಇದ್ದಿರಬಹುದು. ಆದರೆ ಗಾಂಧಿಯವರ ಚಿಂತನೆಗಳಿಂದ ಹೊರತಾದ ಚಿಂತನೆಗಳನ್ನು ಇಲ್ಲಿ ಒಳಗೊಂಡ ಪರಿ ಮಾತ್ರ ಇದೇ ರೀತಿಯದ್ದಾಗಿತ್ತು, ಮೇಲ್ತೋರಿಕೆಯದ್ದು.

ಮಾರ್ಕ್ಸ್‌ರ ಚಿಂತನೆಗೆ ಈ ಬಗೆಯ ಸ್ಥಾನವೂ ಇರಲಿಲ್ಲ. ಮಾರ್ಕ್ಸ್‌ವಾದಿಗಳು ಎಲ್ಲ ಬಗೆಯ ಚಿಂತನೆಗಳಿಂದ ಕಲಿಯಲೇಬೇಕಾದ ದರ್ದು, ಮಾರ್ಕ್ಸ್‌ವಾದಿಗಳಾಗಿರುವುದರಿಂದಲೇ ಹುಟ್ಟಿಕೊಳ್ಳುತ್ತದೆ. ಒಂದಲ್ಲ ಒಂದು ದಿನ ಆ ಚಿಂತನೆಯ ಧಾರೆಯೊಳಗಿನಿಂದಲೇ ಅದನ್ನು ಪ್ರಶ್ನಿಸುವ ಧಾರೆ ಹುಟ್ಟಿಯೇ ಹುಟ್ಟಿಕೊಳ್ಳುತ್ತದೆ. ಏಕೆಂದರೆ, ಅದು ಪ್ರಶ್ನಿಸುವ ಮನೋಭಾವವನ್ನು ಹುಟ್ಟಿ ಹಾಕುವ ವೈಜ್ಞಾನಿಕ ತರ್ಕದ ಮೇಲೆ ನಿಂತಿದೆ. ಅಂಥದ್ದನ್ನೂ ಬೈಬಲ್ಲಾಗಿಸಿದ ಕೀರ್ತಿ ಮಾರ್ಕ್ಸ್‌ವಾದಿಗಳಿಗೆ ಸಲ್ಲುತ್ತದೆ. ಆದರೆ ಅದು ಶತಮಾನಗಳ ಕಾಲ ಬಾಳುವುದು ಸಾಧ್ಯವಿಲ್ಲ, ಹಾಗಾಗಿಯೇ ಇಂದು ಭಾರತದ ಬಹುತೇಕ ಮಾರ್ಕ್ಸ್‌ವಾದಿಗಳು ಅಂಬೇಡ್ಕರರನ್ನು ಗಂಭೀರವಾಗಿ ಓದುತ್ತಿದ್ದಾರೆ. ಅಂಬೇಡ್ಕರರ ಚಿಂತನೆಗಳಿಂದ ಕೆಲವು ಬ್ರ್ಯಾಂಡ್‌ನ ಮಾರ್ಕ್ಸ್‌ವಾದಿಗಳು ಕಲಿಯುತ್ತಲೂ ಇದ್ದಾರೆ.

ಗಾಂಧಿಯವರಿಂದಲೂ ಕಲಿಯುವುದಿದೆ. ವ್ಯಕ್ತಿಗತ ನೈತಿಕತೆ, ನಿಷ್ಠೆ, ಸರಳ ಜೀವನ, ನಂಬಿದ್ದಕ್ಕೆ ಬದ್ಧವಾಗುವುದು, ಪರಿಸರದೊಂದಿಗೆ ಒಂದಾಗಿ ಬದುಕುವ ಬದುಕಿನ ದೃಷ್ಟಿ ಇವೆಲ್ಲವೂ ಗಾಂಧಿ ಚಿಂತನೆ ಹಾಗೂ ಬದುಕಿನಿಂದ ಮಿಕ್ಕವರು ಕಲಿಯಲೇಬೇಕಿರುವ ಸಂಗತಿಗಳು. ಮಾರ್ಕ್ಸ್ ಹಾಗೂ ಅಂಬೇಡ್ಕರ್ ಈ ಎರಡೂ ವಾದಗಳ ಪ್ರಭಾವಕ್ಕೆ ಸಿಕ್ಕಿದವರು ಸಾಮಾಜಿಕ ಕಾರ್ಯಕರ್ತರಾಗಿ ತೊಡಗಿಕೊಂಡು ನಂತರದ ಕಾಲದಲ್ಲಿ ಅದರಿಂದ ವಿಮುಖರಾದವರು... ನೋಡಿದರೆ ಇದರ ಪ್ರಾಮುಖ್ಯತೆ ಅರಿವಾಗುತ್ತ... ಚಳವಳಿಯಲ್ಲಿ ಗಂಭೀರವಾಗಿ ಇದ್ದ ಸರಳತೆ, ನೈತಿ... ಎಲ್ಲವೂ ಕಣ್ಮರೆಯಾಗಿಬಿಡುತ್ತವೆ. ಅಂಥವರು ಸಿಕ್ಕಾಪ... ಕೆಡಲೂ ಸಾಧ್ಯ. ಚಳವಳಿಗಳಿಂದ ಹೊರಬಂದು ವ್ಯಕ್ತಿಗತವ... ಸದರಿ ವಿಚಾರಗಳನ್ನು ಪ್ರತಿಪಾದಿಸುತ್ತಾ, ಭ್ರಷ್ಟರಾಗಿರಲ... ಸಾಧ್ಯ. ಗಾಂಧಿವಾದಿಗಳೂ ಸಹಾ ಕೆಟ್ಟಿರಬಹುದಾದರ... (ಗಾಂಧಿವಾದವನ್ನು ಪ್ರಾಕ್ಟೀಸ್ ಮಾಡುವವರೇ ಬಹ... ಕಡಿಮೆ), ವ್ಯಕ್ತಿಗತ ನೈತಿಕತೆಯೂ ಅದರ ಒಂದು ಮು... ಅಂಶವಾಗಿರುತ್ತದಾದ್ದರಿಂದ, ಹೆಚ್ಚಿನವರು ಹೆಚ್ಚು ಕೆಡಲಾರ... ಹಾಗಾಗಿ ಚಳವಳಿಗಾರರು, ಸಕ್ರಿಯವಾಗಿರಲಿ, ಇಲ್ಲದಿರ... ವ್ಯಕ್ತಿಗತ ನೈತಿಕತೆ, ಶ್ರಮ ಸಹಿತ ಸರಳ ಜೀವನ ಅ... ಬದುಕಿನ ಶಾಶ್ವತ ಧ್ಯೇಯವಾಗಿರುವ ಅಗತ್ಯವಿದ್ದೇ ಇ... ಗಾಂಧಿ ಇಂತಹ ಇನ್ನೂ ಹಲವು ಸಂಗತಿಗಳನ್ನು ನಮ... ಕಲಿಸುವ ಸಾಧ್ಯತೆ ಇದೆ.

ಗಾಂಧಿವಾದಿಗಳು ಮಾರ್ಕ್ಸ್‌ರಿಂದ ತೆಗೆದುಕೊಳ್ಳುವು... ಏನೂ ಇಲ್ಲವೇ? ಒಂದು ವೇಳೆ ಇದೆ ಎನ್ನುವುದಾದ... ಯಾಕಾಗಿ ಮಾರ್ಕ್ಸ್‌ವಾದದ ಪ್ರಸ್ತಾಪವೇ ಎಲ... ಇರುವುದಿಲ್ಲ? ಬದನವಾಳು ಸತ್ಯಾಗ್ರಹದ ಮುಂಚೂ... ಪಟುಗಳಲ್ಲಿ ಕೆಲವು ಮಾಜಿ (?) ಮಾರ್ಕ್ಸ್‌ವಾದಿಗ... ಇದ್ದಾಗಲೂ?


ಹಾಗೆಂದು, ಭಿನ್ನ ಸೈದ್ಧಾಂತಿಕ ಧಾರೆಯವ... ಮತ್ತೊಂದು ಸೈದ್ಧಾಂತಿಕ ಧಾರೆಯಲ್ಲಿ ತೆಗೆದುಕೊಳ್ಳಬೇಕಾದ... ಕೇವಲ ಸ್ಟ್ರಾಟೆಜಿಯ ಕಾರಣಕ್ಕೆ 'ಒಳಗೊಳ್ಳು'ವ ಕಾರಣ... ಮಾಡುವುದೂ ಎಷ್ಟು ಸರಿಯಾದದ್ದು? ಇದು ಬ್ಯಾನರ್‌ನ... ಹೆಸರನ್ನು ತಿದ್ದಿದಂತೆ ಅಷ್ಟೇ. ತೆರೆದ ಮನಸ್ಸಿನಿಂದ ನೋ... ವೈಜ್ಞಾನಿಕವಾದ, ತರ್ಕಕ್ಕೆ ನಿಲುಕುವ ಕಾರಣಗಳಿಗ... ಪ್ರಾಮಾಣಿಕವಾಗಿ ಒಳಗೆ ತೆಗೆದುಕೊಳ್ಳುವುದು ಹೆ... ಮುಖ್ಯವಾದುದು.

ಜಾಗತೀಕರಣವು ವ್ಯಕ್ತಿಯನ್ನು ಹೆಚ್ಚೆಚ್ಚು 'ಬ... ವ್ಯಕ್ತಿ'ಯನ್ನಾಗಿಸುತ್ತಿದೆ. ಅದನ್ನೇ ಸುಸ್ಥಿರ ಬದುಕಿನ ಚಿಂ... ಸಹ ಮಾಡಬಾರದಲ್ಲವೇ? ಇವೆರಡೂ ಬೇರೆ ಬೇ... ನೆಲೆಯಿಂದ ಎಂಬುದೇನೋ ಸರಿ. ಆದರೆ ಇದು ಸಮ... ಪ್ರಯತ್ನವೂ ಆಗಬೇಕಲ್ಲವೇ? ಆಗಲು ಬೇಕಾದ ರೀತಿಯ... ನಮ್ಮಲ್ಲಿ 'ಒಳಗೊಳ್ಳುವಿಕೆಯ ಮನೋಭಾವ' ಇದೆಯ... ಎಂಬ ಪ್ರಶ್ನೆಯನ್ನೂ ಹಾಕಿಕೊಳ್ಳಬೇಕಾಗುತ್ತದೆ. ಸಮ... ಚಿಂತನೆ ಹಾಗೂ ಸಮಷ್ಟಿ ಬದುಕು ಇಲ್ಲದೇ ಸು... ಬದುಕು ಸಾಧ್ಯವಿಲ್ಲ.

ಇಲ್ಲದಿದ್ದರೆ, ಸುಸ್ಥಿರ ಬದುಕೆಂಬುದು ಗಣನೀ... ಪ್ರಮಾಣಕ್ಕೆ ಬೆಳೆದು ನಿಂತಿರುವ ಮಧ್ಯಮ ವರ್ಗದ ಒಂ... ಸಣ್ಣ ವಿಭಾಗದ ವಿರಾಮ ಕಾಲದ ಚಟುವಟಿಕೆಯಾಗಿಬಿಡ... ಅಪಾಯವಿದ್ದೇ ಇದೆ. 'ಇದರಿಂದ ಬಡವರಿಗಲ್ಲದಿದ್ದರ... ನಿಜಕ್ಕೂ ಯಾರು ಸರಳವಾಗಿ ಬದುಕಬೇಕಿದೆಯ... ಅವರಿಗಾದರೂ ಒಳ್ಳೆಯ ಮೆಸೇಜ್ ಹೋಗುತ್ತೆ ಬಿ... ಎಂದು ಒಬ್ಬರು ಹಿರಿಯರು ಹೇಳಿದರು. ಹೌದು, ಇ... ಉದ್ದೇಶ, ಪ್ರಭಾವ ಕೇವಲ ಅಷ್ಟು ಮಾತ್ರವೇ ಆಗಿಬಿಟ್ಟ... ಅದರಿಂದ ಅಷ್ಟು ಮಾತ್ರದ ಪ್ರಯೋಜನ ಇದ್ದೇ ಇರುತ್ತ... ಅದರಿಂದಾಚೆಗೆ ಈ ಭೂಮಿಯನ್ನೂ, ಮಾನವೀಯತೆಯನ... ಮನುಷ್ಯರನ್ನೂ, ಪ್ರಕೃತಿಯನ್ನೂ, ಶಿವನನ್ನೂ ಹಿಂಡುತ್ತಿರು... ಪ್ರಪಂಚದ ಬಂಡವಾಳಶಾಹಿ ಆರ್ಥಿಕತೆಗೆ ಪೆ... ಕೊಡುವುದು ಇದರಿಂದ ಸಾಧ್ಯವಿಲ್ಲ. ಅದಕ್ಕೆ ಮಾರ್ಕ್ಸ್... ಅಂಬೇಡ್ಕರ್, ಗಾಂಧಿ, ಫುಕುವೋಕಾ, ಮದರ್ ಥೆರ... ಎಲ್ಲರೂ ಬೇಕಾಗುತ್ತಾರೆ. ಇವೆಲ್ಲದರ ಸೂಕ್ತ ರೀತಿ... ಅನುಸಂಧಾನ ನಡೆಯುವ ಅಗತ್ಯವಿದೆ. ಒಂದು ಪ್ರಮಾಣ... ಯಶಸ್ಸಿನ ಆಚೆಗೆ ಬದನವಾಳು ಸತ್ಯಾಗ್ರಹವು ಅಂತ... ಒಂದು ಅನುಸಂಧಾನ ನಡೆಸುವ ಅವಕಾಶವ... ಕಳೆದುಕೊಂಡಿತು ಎಂಬ ಕೊರಗಿನಲ್ಲಷ್ಟೇ ಈ ಮಾತುಗಳ... ಬರೆದಿದ್ದೇನೆ. ತಪ್ಪಾಗಿದ್ದರೆ ಹೇಳಿ, ತಿದ್ದಿಕೊಳ್ಳೋಣ.

‘ದೆಹಲಿಯಲ್ಲಿ ಭಾರತ ಆತ್ಮಹತ್ಯೆ ಮಾಡಿಕೊಂಡಿತು’

...ನ್ನೆ ದೆಹಲಿಯ ಜಂತರ್‌ಮಂತರ್‌ನಲ್ಲಿ ಎಲ್ಲರ ...ದೆ ಗಜೇಂದ್ರ ಸಿಂಗ್ ಎಂಬ ರಾಜಸ್ಥಾನದ ರೈತ ...ಹತ್ಯೆ ಮಾಡಿಕೊಂಡಿದ್ದರ ಬಗ್ಗೆ ಸಮರ್ ...ಯುವವರು “ದೆಹಲಿಯಲ್ಲಿ ಭಾರತ ಆತ್ಮಹತ್ಯೆ ...ಡಿಕೊಂಡಿತು” ಎಂದು ಬರೆದಿದ್ದಾರೆ. ಅದು ನಿಜ ...ೕ. ಯಾಕೆಂದರೆ ಅಲ್ಲಿ ನಡೆದದ್ದು ಬರೀ ಸಿಂಗ್ ...ಂ ರೈತನ ಸಾವಲ್ಲ, ಅದರ ಜೊತೆಗೆ ನಮ್ಮ



...ಜಕೀಯ ಪಕ್ಷಗಳ ನಿಯತ್ತು ಮತ್ತು ಜನಸಾಮಾನ್ಯರ ...ಮಾಜಿಕ ಕಾಳಜಿಗಳೂ ಸಾವನ್ನಪ್ಪಿದವು.

... ಗಜೇಂದ್ರ ಸಿಂಗ್ ನಿಜವಾಗಲೂ ಆತ್ಮಹತ್ಯೆ ...ಡಿಕೊಂಡರೋ, ಪ್ರಚಾರಕ್ಕಾಗಿ ಮಾಡಿದ ಅವಘಡ ...ಕ್ಕಾಗಿ ಸಾವು ಸಂಭವಿಸಿತೋ ಎಂಬುದರ ಬಗ್ಗೆ ಈಗ ...ರ್ಚೆಯಾಗುತ್ತಿದೆ. ಆದರೆ ಒಂದಂತೂ ಸ್ಪಷ್ಟವಾಗಿದೆ. ...ದೇನೆಂದರೆ ಸಿಂಗ್ ದೇಶದ ರಾಜಧಾನಿಯಲ್ಲಿ ...ಾಧ್ಯಮಗಳ ಮುಂದೆ ಆತ್ಮಹತ್ಯೆಯನ್ನು ...ಡಿಕೊಂಡಿದ್ದರಿಂದ ಇವತ್ತು ರೈತರ ಪರಿಸ್ಥಿತಿಯತ್ತ ...ಜಕೀಯ ಪಕ್ಷಗಳಲ್ಲದಿದ್ದರೂ, ಜನಸಾಮಾನ್ಯರು ...ೋಡುವಂತೆ ಮಾಡಿದ್ದಾರೆ.

ಇವತ್ತಿಗೂ ನಮ್ಮ ದೇಶದ ಶೇ. 70ರಷ್ಟು ಜನ ...ದಲ್ಲ ಒಂದು ರೀತಿಯಲ್ಲಿ ಕೃಷಿಯನ್ನೇ ಆಧರಿಸಿ ...ದುಕುತ್ತಿದ್ದಾರೆ. ಅಂತಹವರ ಬದುಕಿನಲ್ಲಿ ಸಾಲ, ಬೆಳೆ ...ಷ್ಟ, ಸೂಕ್ತ ಬೆಲೆ ಸಿಗದಿರುವುದು ಎಂಬುದೆಲ್ಲ ...ಮ್ಮಾಟವಾಡುತ್ತಿವೆ. ಪ್ರತಿದಿನ ದೇಶದ ವಿವಿಧ ಕಡೆ ...ರಾರು ರೈತರು ಆರ್ಥಿಕ ಹೊಡೆತವನ್ನು ...ಸಲಾಗದೆ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ...ದಾಹರಣೆಗೆ, ನ್ಯಾಷನಲ್ ಕ್ರೈಮ್ ರೆಕಾರ್ಡ್ಸ್ ...್ಯೂರೋದ ಪ್ರಕಾರ, 2012ರಲ್ಲಿ 14,000 ರೈತರು, ...13ರಲ್ಲಿ 13,000 ರೈತರು ಮತ್ತು 2014ರಲ್ಲಿ ...,000ಕ್ಕಿಂತಲೂ ಹೆಚ್ಚು ರೈತರು ಆತ್ಮಹತ್ಯೆ ...ಡಿಕೊಂಡಿದ್ದಾರೆ. ಆದರೆ ಇದು ಯಾವತ್ತೂ ನಮ್ಮ ...ಾಧ್ಯಮಗಳಿಗೆ ಮುಖ್ಯವಾಗಿಲ್ಲ, ಹಲವು ಪತ್ರಿಕೆಗಳು ...ಕ್ಕಿದರೆ ಎಲ್ಲೋ ಒಂದು ಮೂಲೆಯಲ್ಲಿ ಒಂದು ...ಷ್ಟ ವರದಿ ಪ್ರಕಟ ಮಾಡಬಹುದು. ಇನ್ನು ಟಿವಿ ...ನಲ್‌ಗಳಂತೂ ಇಂತಹ ವಿಷಯಗಳತ್ತ ಗಮನ ...ಿಸುವುದೇ ಇಲ್ಲ.

ರಾಜಕೀಯ ಪಕ್ಷಗಳು ರೈತರ ಆತ್ಮಹತ್ಯೆಗಳ ಬಗ್ಗೆ ...ನ್ನುತ್ತವೆ? ಅಧಿಕಾರದಲ್ಲಿ ಯಾವುದೇ ಪಕ್ಷವಿದ್ದರೂ ...ರ್ಕಾರದ ನಿಲುವು “ರೈತರು ಬೇರೆಬೇರೆ ಸಮಸ್ಯೆಗಳಿಗೆ ...ತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆಯೇ ಹೊರತು ಆರ್ಥಿಕ ...ಷ್ಟದಿಂದಲ್ಲ” ಎಂಬುದೇ ಆಗಿರುತ್ತದೆ.

... ಗಜೇಂದ್ರ ಸಿಂಗ್ ಸಾವಿನ ಬಗ್ಗೆಯೂ ಎಲ್ಲ ...ಜಕೀಯ ಪಕ್ಷಗಳು ತಮ್ಮ ನೈತಿಕ ...ದೋಗತಿಯನ್ನು ಬಹಿರಂಗಪಡಿಸಿವೆ. ಅವತ್ತು ...ಹಲಿಯಲ್ಲಿ ನಡೆಯುತ್ತಿದ್ದದ್ದು ವಿವಾದಾಸ್ಪದ ...ೂಸ್ವಾಧೀನ ಮಸೂದೆಯ ವಿರುದ್ಧ ಆಪ್ ಪಕ್ಷ ...ದಿದ್ದ ಪ್ರತಿಭಟನೆ. ಅದರಲ್ಲಿ ಭಾಗವಹಿಸಲೆಂದೇ ...ಗ್ ರಾಜಸ್ಥಾನದ ತನ್ನ ಹಳ್ಳಿಯಿಂದ ಬಂದಿದ್ದ. ...ವು ಬಡವರ ಪರ, ದಮನಿತರ ಪರ ಎಂದೆಲ್ಲ ...ಳುವ ಕೊಡುವ ಆಪ್ ಪಕ್ಷ ಸಿಂಗ್ ಸಾವಿನ ...ತರವೂ ತನ್ನ ‘ರೈತ ಪರ’ ಪ್ರತಿಭಟನೆಯನ್ನು ...ಂದುವರೆಸುವಷ್ಟು ಅಸೂಕ್ಷ್ಮತೆಯನ್ನು ...ರ್ಶಿಸಿತು. ಅಷ್ಟೇ ಅಲ್ಲ, ದೆಹಲಿ ಆಪ್ ...ರ್ಕಾರದಲ್ಲಿ ಕಾನೂನು ಮಂತ್ರಿ ಆಗಿರುವ ...ೋಮನಾಥ್ ಭಾರತಿ ಎಂಬಾತ “ಸಿಂಗ್ ಸಾವಿನ ...ದೆ ವಿರೋಧ ಪಕ್ಷಗಳ ಷಡ್ಯಂತ್ರವಿದೆ” ಎಂಬ ...ಳಿಕೆ ಕೊಟ್ಟು, ಅಂದರೆ ರೈತರ ಸ್ಥಿತಿಗತಿಯತ್ತ

ಗಮನಹರಿಸುವ ಬದಲು ಸಿಂಗ್ ಸಾವನ್ನೇ ರಾಜಕೀಯ ಬಂಡವಾಳ ಮಾಡಿಕೊಳ್ಳಲು ಆಪ್ ನಾಯಕರು ಯತ್ನಿಸಿದರು.

ಬಿಜೆಪಿಯ ನಾಯಕರು ಆಪ್ ನಾಯಕರಿಗಿಂತ ಉತ್ತಮರೇನಲ್ಲ. ಸಿಂಗ್ ಆತ್ಮಹತ್ಯೆ ಸುದ್ದಿ ಹಬ್ಬುತ್ತಿದ್ದಂತೆ ರಾಜಸ್ಥಾನದ ಮುಖ್ಯಮಂತ್ರಿ ವಸುಂಧರ ರಾಜೆ “ದೆಹಲಿ ಸರ್ಕಾರ ತುರ್ತಾಗಿ ಪ್ರತಿಕ್ರಿಯಿಸದಿದ್ದರಿಂದ ಸಿಂಗ್ ಸಾವು ಸಂಭವಿಸಿತು” ಎಂದು ಆರೋಪಿಸಿದರು. ತನ್ನ ರಾಜ್ಯದಲ್ಲಿ ಹೋದ ತಿಂಗಳು ಸಂಭವಿಸಿದ ಅಕಾಲಿಕ ಮಳೆಯಿಂದಾಗಿ ಸಿಂಗ್ ತರಹದ ರೈತರು ನಷ್ಟ ಅನುಭವಿಸಿದ್ದು ಮತ್ತು ತನ್ನ ಸರ್ಕಾರ ಅದಕ್ಕೆ ಸರಿಯಾಗಿ ಸ್ಪಂದಿಸದಿದ್ದರಿಂದ ಸಿಂಗ್ ಆತ್ಮಹತ್ಯೆ ಮಾಡಿಕೊಂಡದ್ದು ಎಂಬ ಸರಳ ಸತ್ಯವನ್ನೇ ಆ ಜನನಾಯಕಿ ಮರೆತುಹೋದರು.

ಕಾಂಗ್ರೆಸ್ ಕೂಡ ಈ ರಾಜಕೀಯ ಪೈಪೋಟಿಯಲ್ಲಿ ಹಿಂದೆ ಬೀಳಲಿಲ್ಲ. ಸಿಂಗ್ ಸಾವಿಗೆ ಮೋದಿ ಸರ್ಕಾರದ ನೀತಿಗಳೇ ಕಾರಣ ಎಂದು ಕಾಂಗ್ರೆಸ್ಸಿಗರು ಬೊಬ್ಬೆ ಹಾಕಿದರು. ಯುಪಿಎ-2 ಅವಧಿಯಲ್ಲಿ ತಮ್ಮದೇ ಕಾಂಗ್ರೆಸ್ ನೇತೃತ್ವದ ಸರ್ಕಾರದ ರೈತ ವಿರೋಧಿ ಧೋರಣೆಯಿಂದಾಗಿ ದೇಶದಾದ್ಯಂತ ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರು ಎಂಬ ಅಂಶವನ್ನೇ ಅವರೆಲ್ಲ ಮರೆತಿದ್ದರು. ಅಂದಹಾಗೆ ಅಟಲ್‌ಬಿಹಾರಿ ವಾಜಪೇಯಿ ಅಧಿಕಾರಾವಧಿಯಲ್ಲೂ ರೈತರ ಆತ್ಮಹತ್ಯೆಗಳು ಅವ್ಯಾಹತವಾಗಿ ಸಂಭವಿಸಿದ್ದವು.

ಇನ್ನು ಸುಶಿಕ್ಷಿತ, ನಗರವಾಸಿ ಜನಸಾಮಾನ್ಯರು ಎಂದಾದರೂ ರೈತರ ಬಗ್ಗೆ ಯೋಚಿಸಿದ್ದಾರೆಯೇ? ತರಕಾರಿ ಬೆಳೆ ಏರಿದರೆ ಗೋಳಾಡುವ ನಗರವಾಸಿಗಳು ಟೊಮಾಟೋ ಬೆಳೆ ಪಾತಾಳಕ್ಕೆ ಬಿದ್ದಾಗ ಇಲ್ಲೂ ‘ಟೊಮಾಟೋ ಆಟ’ ಎಂಬ ಹುಚ್ಚಾಟದ ಸ್ಪರ್ಧೆಯನ್ನು ಏರ್ಪಡಿಸಲು ಮುಂದಾಗುತ್ತಾರೆ. ವಿದೇಶಗಳು ನಮ್ಮ ಮಾವಿನ ವಿರುದ್ಧ ನಿಲುವು ತೆಗೆದುಕೊಂಡಾಗ, ಮಾವು ಬೆಳೆದ ರೈತರ ಕಷ್ಟದ ಬಗ್ಗೆ ಯೋಚಿಸದ ನಗರವಾಸಿಗಳು “ಸದ್ಯ ನಮಗೇ ಒಳ್ಳೊಳ್ಳೆ ಮಾವು ಸಿಗುತ್ತದೆ” ಎಂದು ಹರ್ಷಿತರಾಗುತ್ತಾರೆ! ಅದಕ್ಕೆ ಸಮರ್ ಅವರು ಜನಸಾಮಾನ್ಯರ ಸಾಮಾಜಿಕ ಕಾಳಜಿಯೂ ಸತ್ತುಹೋಗಿದೆ ಎಂದದ್ದು.

ಈಗ ಅಧಿಕಾರದ ಅಮಲನ್ನೇರಿಸಿಕೊಂಡಿರುವ ಮೋದಿ ಸರ್ಕಾರ ಭಾರತೀಯ ರೈತರ ವಿರುದ್ಧವೇ ಯುದ್ಧ ಸಾರಿದೆ. ಈ ಹಿಂದೆ ನಮ್ಮ ಪತ್ರಿಕೆಯಲ್ಲಿ ಈ ಭೂಸ್ವಾಧೀನ ಮಸೂದೆಯ ಬಗ್ಗೆ ಎಚ್.ವಿ.ವಾಸು ತನ್ನ ‘ಅಂಚಿನಿಂದ’ ಅಂಕಣದಲ್ಲಿ ವಿವರವಾಗಿ ಬರೆದಿದ್ದರಿಂದ ನಾನು ಮತ್ತೊಮ್ಮೆ ಅವುಗಳನ್ನು ಇಲ್ಲಿ ವಿವರಿಸುವುದಿಲ್ಲ. ಒಟ್ಟಾರೆಯಾಗಿ ಆ ಭೂಸ್ವಾಧೀನ ಮಸೂದೆ ಬಂಡವಾಳಿಗರ ಅಭಿವೃದ್ಧಿಗಾಗಿ ಬಡ ರೈತರ ಭೂಮಿಯನ್ನು ದೋಚುವ ಅಸ್ತ್ರ ಎಂಬುದಂತೂ ಈಗ ಎಲ್ಲರಿಗೂ ಸ್ಪಷ್ಟವಾಗಿದೆ.

ಅಷ್ಟು ಮಾತ್ರವಲ್ಲದೆ ಮೋದಿ ಸರ್ಕಾರ ರೈತಾಪಿಗಳಿಗೆ ವಿವಿಧ ರೀತಿಯಲ್ಲಿ ಕಿರುಕುಳ ನೀಡಲು ಶುರುಮಾಡಿದೆ. ಒಂದು ಉದಾಹರಣೆ ಕೊಡುವುದಾದರೆ, ಈಗ ರೈತರು ಒಂದು ಚೀಲ ಯೂರಿಯಾ ಕೊಳ್ಳುವಾಗ ಅದರ ಜೊತೆಗೆ ಕಡ್ಡಾಯವಾಗಿ ಕೀಟನಾಶಕವನ್ನೂ ಖರೀದಿಸಲೇಬೇಕು. ಕೀಟನಾಶಕಗಳನ್ನು ತಯಾರಿಸುವವರು ದೊಡ್ಡ ಕಾರ್ಪೊರೇಟ್ ಕಂಪನಿಗಳೇ! ಇನ್ನು ಗ್ರಾಮೀಣ ಕೂಲಿಕಾರರಿಗೆ ಒಂದಿಷ್ಟು ನೆಮ್ಮದಿ ತಂದಿದ್ದ ನರೇಗಾ ಯೋಜನೆಯನ್ನೇ ಮೋದಿ ನಿಷ್ಕ್ರಿಯಗೊಳಿಸಿದ್ದಾನೆ. ಮೋದಿ ಈ ಯೋಜನೆಗೆ ಈಗ ಕೊಟ್ಟಿರುವುದು ಕೇವಲ 34,000 ಕೋಟಿ ರೂಪಾಯಿಗಳನ್ನು. ಆ ಯೋಜನೆ ನಿಜಕ್ಕೂ ಗ್ರಾಮೀಣ ಜನರಿಗೆ ಉಪಯೋಗ ಆಗಬೇಕಾದರೆ ಇದಕ್ಕಿಂತಲೂ ಐದು ಪಟ್ಟು ಹೆಚ್ಚು ಹಣ ಅಗತ್ಯವಾಗಿ ಬೇಕಿದೆ. ನಮ್ಮ ದೇಶದ ಒಟ್ಟು ಜನಸಂಖ್ಯೆಯಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಹಳ್ಳಿಗಳಲ್ಲಿ ವಾಸ ಮಾಡುತ್ತಿದ್ದರೂ ಮೋದಿ ಗ್ರಾಮೀಣ ಅಭಿವೃದ್ಧಿಗೆ ಕೇವಲ 44,000 ಕೋಟಿ ರೂಪಾಯಿಗಳನ್ನು ನಿಗದಿಪಡಿಸಿದ್ದಾನೆ. ಇದರಿಂದ ಯಾವ ಹಳ್ಳಿಯೂ ಉದ್ಧಾರವಾಗುವ ಸಾಧ್ಯತೆಗಳು ಇಲ್ಲ.

ಮೋದಿಯ ‘ಅಭಿವೃದ್ಧಿ’ ಮಂತ್ರವನ್ನು ನಂಬಿ ಹೋದ ವರ್ಷ ನಮ್ಮ ಹಳ್ಳಿಗರೂ ಆತನನ್ನು ಬೆಂಬಲಿಸಿದ್ದರು. ಆದರೆ ಮೋದಿ ಈಗ ಅವರ ಬೆನ್ನಿಗೇ ಚೂರಿ ಹಾಕುತ್ತಿದ್ದಾನೆ. ಈಗ ಎಲ್ಲರೂ ಪಕ್ಷ, ಎಡ-ಬಲ ಎಂದೆಲ್ಲ ನೋಡದೆ ಜೊತೆಗೂಡಿ ಈ ಜನದ್ರೋಹಿಯ ವಿರುದ್ಧ ಸಮರ ಸಾರಲೇಬೇಕಿದೆ...

****

ಒಬ್ಬ ನಿಜವಾದ ಜನಪರ ನಾಯಕ ಹೇಗಿರಬೇಕೆಂದು ಉರುಗ್ವೆ ಅಧ್ಯಕ್ಷ ಹೊಸೆ ಮುಯಿಕ ತೋರಿಸಿಕೊಟ್ಟಿದ್ದಾರೆ. ನಮ್ಮ ದೇಶದ ಪ್ರಧಾನಿ ಮೋದಿ ಕಾರ್ಪೊರೇಟ್ ಕಂಪನಿಗಳ ಗುಲಾಮನಂತೆ ವರ್ತಿಸುತ್ತಿರುವಾಗಲೇ ಉರುಗ್ವೆ ನಾಯಕ ಮುಯಿಕ “ರಾಜಕಾರಣದಿಂದ ಶ್ರೀಮಂತರನ್ನು ಒದ್ದೋಡಿಸಬೇಕು” ಎಂದು ಕರೆ ಕೊಟ್ಟಿದ್ದಾರೆ.

‘ಜಗತ್ತಿನ ಅತಿಬಡ ಅಧ್ಯಕ್ಷ’ ಎಂದೇ ಖ್ಯಾತಿ ಪಡೆದಿರುವ ಈ ಮುಯಿಕ ಇತ್ತೀಚೆಗೆ ಒಂದು ಸಂದರ್ಶನದಲ್ಲಿ ರಾಜಕಾರಣದಲ್ಲಿ ಶ್ರೀಮಂತರಿಗೆ ಸ್ಥಾನವಿರಬಾರದು ಎಂದಿದ್ದಾರೆ. “ಯಾಕೆ?” ಅಂತ ಪ್ರಶ್ನಿಸಿದರೆ “ಹಣ ಮಾಡುವವರ, ಹಣವನ್ನು ಇಷ್ಟಪಡುವವರ, ಹಣದ ಹುಚ್ಚನ್ನು ಹತ್ತಿಸಿಕೊಂಡಿರುವವರ ವಿರುದ್ಧ ನನಗೆ ವಿಶೇಷವಾದ





ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ರಗಳೆ ಇಲ್ಲ. ಆದರೆ ಅವರು ರಾಜಕಾರಣದಲ್ಲಿ ಇರಬಾರದು. ಯಾಕೆಂದರೆ ಅಂಥವರಿಂದ ಅನಾಹುತ ಆಗುತ್ತದೆ. ಅಂತಹ ಜನ ಉದ್ಯಮಗಳನ್ನು ನಡೆಸಲಿ, ಬಿಸಿನೆಸ್ ಮಾಡಲಿ, ತಮ್ಮ ಸಂಪತ್ತನ್ನು ದ್ವಿಗುಣಗೊಳಿಸಿಕೊಳ್ಳಲಿ. ರಾಜಕೀಯ ಎಂಬುದು ಎಲ್ಲರಿಗೂ ಸಂತೋಷ ಮತ್ತು ನೆಮ್ಮದಿ ತರುವ ಹೋರಾಟವಾದ್ದರಿಂದ ಅವರಿಗೆ ಇಲ್ಲಿ ಪಾತ್ರ ಇರಕೂಡದು” ಎಂದಿದ್ದಾರೆ.

“ಆದರೆ ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಸಮಾನ ಹಕ್ಕು ಇರುತ್ತದಲ್ಲವೆ?”ಎಂಬ ಪ್ರಶ್ನೆಗೆ ಮುಯಿಕ ಕೊಟ್ಟಿರುವ ಉತ್ತರ “ಹೌದು, ನಾವು ಪ್ರಾತಿನಿಧಿಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಇಲ್ಲಿ ಬಹುಸಂಖ್ಯಾತರ ಕಾಳಜಿಗಳೇ ಮುಖ್ಯವಾಗಬೇಕು. ನಮ್ಮ ದೇಶದಲ್ಲಿ ಬಹುಸಂಖ್ಯಾತರು ಬಡವರಾಗಿದ್ದು, ಶ್ರೀಮಂತರು ಅಲ್ಪಸಂಖ್ಯಾತರಾಗಿದ್ದಾರೆ. ಜೊತೆಗೆ ಶ್ರೀಮಂತರು ತಮ್ಮ ಹಿತಾಸಕ್ತಿಯ ದೃಷ್ಟಿಕೋನದಿಂದಲೇ ಜಗತ್ತನ್ನು ನೋಡುತ್ತಾರೆ. ಆದ್ದರಿಂದ ಬಹುಸಂಖ್ಯಾತರಿಗೆ ತೊಂದರೆ ಆಗುತ್ತದೆ. ಆ ಕಾರಣಕ್ಕೇ ಅವರು ರಾಜಕಾರಣದಲ್ಲಿರಕೂಡದು” ಎಂಬುದಾಗಿದೆ.

ಈ ಹೊಸೆ ಮುಯಿಕ ನಮ್ಮ ಜನರಿಗೆ ವಿಚಿತ್ರ ಜನನಾಯಕರಂತೆ ಕಾಣುತ್ತಾರೆ. ಯಾಕೆಂದರೆ ಒಂದು ದೇಶದ ಅಧ್ಯಕ್ಷನಾದ ಈತ ತನಗೆ ಬರುವ ಸಂಭಾವನೆಯಲ್ಲಿ ಶೇ.90 ಭಾಗವನ್ನು ವಿವಿಧ ಸಂಸ್ಥೆಗಳಿಗೆ ದಾನ ಮಾಡುತ್ತಾರೆ. ಮಾತ್ರವಲ್ಲ, ಸರ್ಕಾರ ನೀಡುವ ಐಷಾರಾಮಿ ಮನೆ ಮತ್ತು ವಿಶೇಷ ವಾಹನಗಳನ್ನೂ ತಿರಸ್ಕರಿಸುವ ಮುಯಿಕ ರಾಜಧಾನಿಯ ಹೊರವಲಯದಲ್ಲಿರುವ ತನ್ನ ಸ್ವಂತ ಆದರೆ ಪುಟ್ಟ ತೋಟದ ಮನೆಯಲ್ಲಿ ವಾಸಿಸುತ್ತಾರೆ. ತಮ್ಮ ಹಳೇ ಕಾರನ್ನೇ ಇವತ್ತಿಗೂ ಬಳಸುತ್ತಿದ್ದಾರೆ.

ಅಧಿಕಾರದೊಂದಿಗೆ ಬರುವ ಎಲ್ಲವನ್ನೂ ತಿರಸ್ಕರಿಸುವ ಮುಯಿಕ “ಕೆಂಪುಹಾಸು, ನೌಕರರು, ಸೇವಕರು ಇತ್ಯಾದಿಗಳೆಲ್ಲವೂ ಊಳಿಗಮಾನ ವ್ಯವಸ್ಥೆಯನ್ನು ಪ್ರತಿನಿಧಿಸುವಂತಹದ್ದು. ಬೇರೆ ದೇಶಗಳ ಅಧ್ಯಕ್ಷರನ್ನು ಸುತ್ತುವರೆದಿರುವವರೆಲ್ಲರೂ ರಾಜಾಡಳಿತ ಕಾಲದಲ್ಲಿನ ಸೇವಕರಂತೆ ಕಾಣಿಸುತ್ತಾರೆ. ಅವನ್ನೆಲ್ಲ ಪ್ರಜಾಪ್ರಭುತ್ವದಲ್ಲಿ ನಿಲ್ಲಿಸಬೇಕು” ಎಂದೇ ವಾದಿಸುವವರಾಗಿದ್ದಾರೆ. ಪಾಶ್ಚಿಮಾತ್ಯ ದೇಶಗಳಲ್ಲಿ ಪುರುಷರು ಧರಿಸುವ ಟೈ ಅನ್ನು ದ್ವೇಷಿಸುವ ಮುಯಿಕ “ಅದು ಕತ್ತಿಗೆ ತಾಪತ್ರಯ ಕೊಡುವ ನಿರುಪಯುಕ್ತ ವಸ್ತ್ರ. ಜನ ಅದನ್ನು ಯಾಕೆ ಧರಿಸುತ್ತಾರೆ ಎಂಬುದೇ ಅರ್ಥವಾಗುವುದಿಲ್ಲ. ಮನುಷ್ಯರು ತಮ್ಮ ಮೂಲ ಅಗತ್ಯಗಳನ್ನೇ ಮರೆತಿರುವುದರಿಂದ ಇಂತಹದಕ್ಕೆಲ್ಲ ಮಾರು ಹೋಗುತ್ತಾರೆ. ಕೊಂಡುಕೊಳ್ಳುಬಾಕ ಸಂಸ್ಕೃತಿಯನ್ನು ತೀವ್ರವಾಗಿ ವಿರೋಧಿಸಬೇಕಿದೆ” ಎಂಬುದು ಅವರ ದೃಢವಾದ ನಿಲುವು.

ಇವತ್ತಿಗೂ ತಮ್ಮ ಹೂದೋಟದಲ್ಲಿ ಕೆಲಸ ಮಾಡುವುದನ್ನು ತುಂಬಾ ಇಷ್ಟಪಡುವ ಮುಯಿಕ “ನನ್ನ ಹಸ್ತಗಳು ಇತರೆ ಅಧ್ಯಕ್ಷರ ಹಸ್ತಗಳಂತೆ ಇಲ್ಲ, ನೋಡಿ, ಇವೆಷ್ಟು ಒರಟಾಗಿವೆ” ಎಂದು ನಗುತ್ತಾರೆ.

ಈ ಮುಯಿಕ ಎಷ್ಟು ಚಂದದ ಮನುಷ್ಯ!

ಕಪ್ಪುಹಣದ ಕರಾಳ ರಾಜಕೀಯ


ಮೋದಿ ಸರ್ಕಾರಕ್ಕೆ ಇನ್ನೇನು ವರ್ಷ ತುಂಬಲಿದೆ. ದೆಹಲಿಯಲ್ಲಿ ಮೋದಿ ಸರ್ಕಾರ ಬಹಳ ಬಿರುಸಿನಲ್ಲಿ ಕೆಲಸ ಮಾಡುತ್ತಿರುವುದಂತೂ ಸತ್ಯ. ಈ ಬಿರುಸಿನ ಚಟುವಟಿಕೆಗಳ ನಡುವೆಯೂ ಮೋದಿಯವರು ಅರ್ಧ ಜಗತ್ತನ್ನೇ ಸುತ್ತಿ ಬಂದಿದ್ದಾರೆ. ಇದಕ್ಕಾಗಿ ಪ್ರಧಾನಿಯ ಅರ್ಧ ಸಮಯ ವ್ಯಯವಾಗಿದೆ. ಮುಂದಿನ ಉಳಿದ ಅವಧಿಯಲ್ಲಿ ಅವರು ಭಾರತದ ಪ್ರತಿನಿಧಿಯಾಗಿ ಜಗತ್ತಿನ ಎಲ್ಲ ಮೂಲೆಗಳನ್ನೂ ಸುತ್ತಿ ಹೊಸದೊಂದು ದಾಖಲೆ ನಿರ್ಮಿಸುತ್ತಾರೆಂಬುದರಲ್ಲಿ ಯಾರಿಗೂ ಸಂಶಯವಿಲ್ಲ. ಕಾರ್ಪೊರೇಟ್ ಮಾಧ್ಯಮಗಳು ಈ ಪ್ರವಾಸಗಳ ಮಹಾಸಾಧನೆಯನ್ನು ಮಾಮೂಲಿ ನಿಯತ್ತಿನೊಂದಿಗೆ ಪ್ರಸಾರಪಡಿಸುತ್ತಿವೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಅಭ್ಯರ್ಥಿ ಮೋದಿಯವರು ಎಲ್ಲ ದೇಶಗಳನ್ನು ಸುತ್ತಿಬರುವ ಆಶ್ವಾಸನೆಯನ್ನೇನೂ ಕೊಟ್ಟಿರಲಿಲ್ಲ ಅಥವ ಜನರು ಅದನ್ನು ಅಪೇಕ್ಷಿಸಿರಲೂ ಇಲ್ಲ. ಮೋದಿಯ ವಿದೇಶಿ ಪ್ರವಾಸದ ವಿಷಯದಲ್ಲಿ ಜನರಿಗಿದ್ದ ನಿರೀಕ್ಷೆ ಒಂದೇ: ಅವರು ಪ್ರಧಾನಿಯಾದ ಶೀಘ್ರದಲ್ಲೇ ಸ್ವಿಟ್ಜರ್‌ಲ್ಯಾಂಡ್‌ಗೆ ಹೋಗಿ ಅಲ್ಲಿನ ಬ್ಯಾಂಕುಗಳಲ್ಲಿರುವ 'ಅಪಾರ' ಪ್ರಮಾಣದ ಕಪ್ಪುಹಣವನ್ನು ಭಾರತಕ್ಕೆ ವಾಪಸ್ ತರುತ್ತಾರೆ ಎಂಬುದು.

ಹಾಗೆ ನಿರೀಕ್ಷೆಯಲ್ಲಿದ್ದ ಜನರು ಈಗ ನಿರಾಶರಾಗಿದ್ದಾರೆ. ಯಾಕೆಂದರೆ ಮೋದಿ ಸ್ವಿಸ್ ಬ್ಯಾಂಕ್ ಕಡೆಗೆ ಹೋಗುವುದೊಂದನ್ನು ಬಿಟ್ಟು ಉಳಿದೆಲ್ಲವನ್ನೂ ಮಾಡುತ್ತಿದ್ದಾರೆ ಎಂಬ ವಾಸ್ತವ ಸತ್ಯ ಕಣ್ಣೆದುರಿನಲ್ಲೇ ಇದೆ. ಹೀಗಾಗಿ ಮೋದಿ ಮೇನಿಯಾಕ್ಕೆ ಒಳಗಾಗಿದ್ದ ಮಂದಿ ಪ್ರಶ್ನೆ ಎತ್ತಲು ಪ್ರಾರಂಭಿಸಿದ್ದಾರೆ. ಮೋದಿ ಚುನಾವಣಾ ಪ್ರಚಾರಕ್ಕಾಗಿ ಯಶಸ್ವಿಯಾಗಿ ಬಳಸಿಕೊಂಡಿದ್ದ ಸಾಮಾಜಿಕ ತಾಣಗಳಲ್ಲಿ ಇಂಥಾ ಪ್ರಶ್ನೆ ಇನ್ನೂ ಹೆಚ್ಚು.


ಕೆಲ ತಿಂಗಳುಗಳ ಹಿಂದೆ ಟರ್ಕಿ ದೇಶದ ರಾಷ್ಟ್ರೀಯ ದಿನಾಚರಣೆಗೆ ಶುಭಾಶಯ ಕೋರಿ ಮೋದಿ ಟ್ವೀಟ್




ಬಾಬಾ ರಾಮ್‌ದೇವ್

ಮಾಡಿದ್ದರು. ಟರ್ಕಿ ವಿಷಯಕ್ಕೆ ಯಾವುದೇ ಸಂಬಂಧವಿಲ್ಲದ ಟ್ವೀಟ್‌ಗಳ ಉತ್ತರ ಅಲ್ಲಿಯೂ ಶುರುವಾಯ್ತು. "ಅದೆಲ್ಲಾ ಹಾಗಿರಲಿ, ನನ್ನ 15 ಲಕ್ಷ ರೂಪಾಯಿ ಯಾವಾಗ ಕೊಡ್ತೀರಾ ಹೇಳಿ?" ಅಂತಾ ಕೇಶವ ಎಂಬ ವ್ಯಕ್ತಿ ಪ್ರಶ್ನೆ ಎಸೆದ. "ನರೇಂದ್ರಮೋದಿ ಬೇಟಾ, ಅಗರ್ ಮೇರೆ 15 ಲಾಕ್ ನಹಿ ಮಿಲೆ, ತೊ ತುಜ್ಹೆ ಟರ್ಕಿ ಯೀ ಭೇಜ್ ದೇಂಗೆ ... ಧ್ಯಾನ್ ರಕ್‌ನಾ!!" (ತಮ್ಮಾ ... ನರೇಂದ್ರ ಮೋದಿ, ನನ್ನ ಪಾಲಿನ 15 ಲಕ್ಷ ನನಗೆ ಸಿಗದೆ ಹೋದರೆ ನಿನ್ನನ್ನು ಟರ್ಕಿಗೆ ಕಳಿಸಿಬಿಡ್ತೀವಿ, ನೆನಪಿಟ್ಟುಕೋ) ಅಂತಾ ಶುಭ್ ಇಂಡ್ ಎಂಬ ಹೆಸರಿನ ವ್ಯಕ್ತಿ ಎಚ್ಚರಿಕೆ ಕೊಟ್ಟರು. "ಮೋದಿ ಸರ್, ಕಪ್ಪುಹಣದ 15 ಲಕ್ಷ ಪಾಲನ್ನು ಜನ್‌ಧನ್ ಯೋಜನೆಯಡಿ ಓಪನ್ ಮಾಡುತ್ತಿರುವ ಅಕೌಂಟ್‌ಗೆ ಕಳಿಸುತ್ತೀರಾ? ಅಯ್ಯೋ... ನಾನಿನ್ನೂ ಆ ಅಕೌಂಟೇ ಓಪನ್ ಮಾಡಿಲ್ಲವಲ್ಲಾ ಏನು ಮಾಡಲಿ" ಅಂತ ಮತ್ತೊಬ್ಬರು ಕಿಚಾಯಿಸಿದರು. "ನಿಮಗೆ ಎಷ್ಟು ಸಮಯ ಬೇಕೋ ತೆಗೆದುಕೊಳ್ಳಿ ಪರವಾಗಿಲ್ಲ, ಆದರೆ ನನ್ನ ಅಕೌಂಟ್‌ಗೆ 15 ಲಕ್ಷ 2019ಕ್ಕೆ ಮುಂಚೆಯೇ ಬಂದುಬೀಳಬೇಕಷ್ಟೆ" ಎಂದು ಮಗದೊಬ್ಬರು ಅಂತಿಮ ಗಡುವು ನಿಗದಿಗೊಳಿಸಿದ್ದಾರೆ.


ಆದರೆ ಮಾನ್ಯ ನರೇಂದ್ರ ಮೋದಿಯವರಿಗಾಗಲಿ, ಅವರ ಪ್ರಚಾರ ಮಾಧ್ಯಮದ ಮ್ಯಾನೇಜರ್‌ಗಳಿಗಾಗಲಿ ಈ ಪ್ರಶ್ನೆಗಳಿಗೆ ನೇರವಾಗಿ ಉತ್ತರಿಸುವ ಧೈರ್ಯವಿಲ್ಲವಾಗಿದೆ. ಯಾಕೆಂದರೆ ತಮ್ಮ ಚುನಾವಣಾ ಪ್ರಚಾರದುದ್ದಕ್ಕೂ ನರೇಂದ್ರಮೋದಿ ಬಳಸಿದ್ದು 'ಕಪ್ಪುಹಣವನ್ನು ವಾಪಸ್ ತರುವ' ಅಸ್ತ್ರವನ್ನು. "ಕಪ್ಪು ಹಣ ವಾಪಸ್ ತಂದರೆ ಈ ದೇಶದ ಪ್ರತಿಯೊಬ್ಬ ಪ್ರಜೆಗೂ 15 - 20 ಲಕ್ಷ ಹಣ ಪುಕ್ಕಟ್ಟೆ ಸಿಗುತ್ತದೆ. ಆದರೆ ಕಾಂಗ್ರೆಸ್‌ನವರು ಯಾವುದೇ ತನಿಖೆ ಮಾಡದೆ ಕಾಲಹರಣ ಮಾಡುತ್ತಿದ್ದಾರೆ" ಎಂದು


ರಾಜನಾಥ್ ಸಿಂಗ್

ಮೋದಿ ಅಬ್ಬರಿಸಿದ್ದರು. "ಸ್ವಿಸ್ ಬ್ಯಾಂಕ್‌ನಲ್ಲಿರುವುದು ಬಡವರ ಬೆವರಿನ ಹಣ. ಅಷ್ಟನ್ನೂ ವಾಪಸ್ ತಂದರೆ ಪ್ರತಿ ಬಡವನಿಗೆ 3 ಲಕ್ಷ ಬರುತ್ತದೆ; 5 ಮಂದಿಯ ಕುಟುಂಬವೊಂದಕ್ಕೆ 15 ಲಕ್ಷ ಅವರ ಮನೆಗೆ ಬರುತ್ತದೆ. ಈ ಬಾರಿ ನೀವು ಬಿಜೆಪಿಗೆ ಆಶೀರ್ವಾದ ಮಾಡಿ ದೆಹಲಿಗೆ ಕಳಿಸಿದರೆ ನಿಮ್ಮ ಹಣವನ್ನು ನಿಮಗೆ ಖಂಡಿತಾ ವಾಪಸ್ ತಂದುಕೊಡುತ್ತೇನೆ" ಅಂತ ಭಾರೀ ಆಶ್ವಾಸನೆ ನೀಡಿದ್ದರು.

ಕಪ್ಪುಹಣದ ವಿಷಯವನ್ನು ಬಿಜೆಪಿ ಪಕ್ಷ ಕಳೆದ ಎರಡು ಮೂರು ದಶಕಗಳಿಂದಲೂ ಚುನಾವಣಾ ವಿಷಯವನ್ನಾಗಿ ಮಾಡಲು ಪ್ರಯತ್ನಿಸಿದೆ. ಬಿಜೆಪಿಯ ವಾದದ ಪ್ರಕಾರ ಕಾಂಗ್ರೆಸ್ ಪಕ್ಷವೇ ಕಪ್ಪುಹಣದ ಮೂಲ. ಆದ್ದರಿಂದ ಕಾಂಗ್ರೆಸ್ ತೊಲಗಿಸಿ ಬಿಜೆಪಿಯನ್ನು ಅಧಿಕಾರಕ್ಕೆ ತಂದರೆ ಈ ಸಮಸ್ಯೆ ಬಗೆಹರಿಯುತ್ತದೆ ಎಂಬುದು ಅವರ ವಾದ ಸರಣಿ. ಈ ಸಲದ ಚುನಾವಣೆಯಲ್ಲಿ ಈ ವಿಷಯವನ್ನು ಒಂದು ವ್ಯೂಹಾತ್ಮಕ ವಿಷಯವನ್ನಾಗಿ ತೆಗೆದುಕೊಂಡಿದ್ದ ಬಿಜೆಪಿ ಪಕ್ಷ ಕಪ್ಪುಹಣದ ಬಗ್ಗೆ ತನಿಖೆ ನಡೆಸಿ ವರದಿ ಕೊಡಲು ತಮ್ಮದೇ ಆದ ಒಂದು ಟಾಸ್ಕ್ ಫೋರ್ಸ್ ನೇಮಿಸಿತ್ತು.

ಬೇಹುಗಾರಿಕಾ ದಳದ ಮಾಜಿ ನಿರ್ದೇಶಕ ಅಜಿತ್ ದೋವಲ್ (ಈತನನ್ನು ಹಾಲಿ ರಾಷ್ಟ್ರೀಯ ಭದ್ರತಾ ಸಲಹೆಗಾರನನ್ನಾಗಿ ನೇಮಕ ಮಾಡಲಾಗಿದೆ), ಸ್ವದೇಶಿ ಜಾಗರಣ ಮಂಚ್‌ನ ನಾಯಕ ಎಸ್.ಗುರುಮೂರ್ತಿ, ಬೆಂಗಳೂರಿನ ಐಐಎಮ್‌ನ ಪ್ರೊಫೆಸರ್ ವೈದ್ಯನಾಥನ್ ಮತ್ತು ಬಿಜೆಪಿಯ ಮಾಜಿ ಮಂತ್ರಿ ವಕೀಲ ರಾಮ್‌ಜೇಠ್ಮಲಾನಿಯ ಸುಪುತ್ರ ವಕೀಲ ಮಹೇಶ್ ಜೇಠ್ಮಲಾನಿ ಈ ನಾಲ್ವರು ಪ್ರಭೃತಿಗಳು ಈ ಟಾಸ್ಕ್‌ಫೋರ್ಸ್‌ನ ಸದಸ್ಯರಾಗಿದ್ದರು.


ಮೋದಿ

"ನಮ್ಮ ದೇಶ ಬಂದಿಯಾಗಿದೆ, ನಮ್ಮ ರಾಜಕಾ[...] ಅಪಾಯಕಾರಿಯಾಗಿದೆ" ಎಂಬ ಘೋಷವಾಕ್ಯಗಳ[...] ಆರಂಭವಾಗುವ ಈ ಟಾಸ್ಕ್‌ಫೋರ್ಸ್‌ನ ಕಪೋಲಕ[...] ವರದಿ ದೇಶಭಕ್ತಿಯ ಹೊಳೆಯನ್ನೇ ಹರಿಸಿತ್ತು. ತನ್ನ ವಿ[...] 'ತನಿಖಾ ಸಾಮರ್ಥ್ಯ' ಹಾಗೂ ನಾನಾ ತ[...] ಕುತರ್ಕಗಳನ್ನೆಲ್ಲಾ ಬಳಸಿ ವಿದೇಶೀ ಬ್ಯಾಂಕುಗ[...] ಜಮೆಯಾಗಿರುವ ಭಾರತೀಯರ ಕಪ್ಪುಹಣ ಸುಮ[...] 25,00,000 ಕೋಟಿಗಳೆಂದು (ಇಪ್ಪತ್ತೈದು ಲಕ್ಷ ಕೋ[...] ಘೋಷಿಸಿತ್ತು.

ಅಷ್ಟು ಮಾತ್ರವಲ್ಲದೆ, ಸೋನಿಯಾ ಗಾಂಧಿ ಮ[...] ಆಕೆಯ ಗಂಡ ದಿವಂಗತ ರಾಜೀವಗಾಂಧಿ ಸ್ವಿಸ್ ಬ್ಯಾಂಕ್[...] ಅಕೌಂಟ್ ಹೊಂದಿದ್ದಾರೆಂದೂ ಉಲ್ಲೇಖಿಸಲಾಗಿತ್ತು. ಮೋ[...] ಅಲೆ ಸೃಷ್ಟಿಸಬಯಸಿದ್ದ ಕಾರ್ಪೊರೇಟ್ ಮಾಧ್ಯಮ[...] ಕೈಯಲ್ಲಿ ಈ ವರದಿ ಒಂದು ಪ್ರಬಲ ಅಸ್ತ್ರವಾಗಿದ್ದು [...] ಇತಿಹಾಸ. ಇಂಥಾ ಮಾಧ್ಯಮ ವರದಿಗಳನ್ನು ಉಲ್ಲೇ[...] ಸೋನಿಯಾ ಗಾಂಧಿ ಅಡ್ವಾಣಿಗೆ ಪತ್ರ ಬರೆದಿದ್ದು, [...] ನಂತರ ಅಡ್ವಾಣಿ ಆ ಪತ್ರಕ್ಕೆ ಉತ್ತರ ಬರೆದು ಕ್ಷ[...] ಯಾಚಿಸಿ, ಮೊದಲೇ ಈ ವಿಷಯ ಗೊತ್ತಾಗಿದ್ದಿದ್ದರೆ [...] ಅಂಶಗಳನ್ನು ವರದಿಯಿಂದ ತೆಗೆದುಹಾಕುತ್ತಿದ್ದೆವು ಎಂ[...] ಸಮಜಾಯಿಷಿ ನೀಡಿದ್ದು ಮಾಧ್ಯಮಗಳಿಗೆ ಒಂದು ದೊ[...] ಸುದ್ದಿ ಎನಿಸಿಕೊಳ್ಳಲೇ ಇಲ್ಲ.

ಅದೆಲ್ಲಾ ಹಳೆಯ ಕತೆ, ಗೆದ್ದ ನಂತರ ಮೋದಿ ಕ[...] ಮಾಡಿದ್ದೇ ಬೇರೆ. ರೈತರನ್ನು ಸರ್ವನಾಶ ಮಾಡ[...] ಭೂಸ್ವಾಧೀನ ಸುಗ್ರೀವಾಜ್ಞೆ ತಂದಿದ್ದು, ಕಾರ್ಪೊರೇ[...] ಖದೀಮರಿಗೆ ಅನುಕೂಲ ಮಾಡಿಕೊಡಲು ಕಾಮಿ[...] ಹಕ್ಕುಗಳನ್ನು ಕಸಿದುಕೊಂಡಿದ್ದು, ತಮ್ಮ ಮಿತ್ರ ಮುಖೇ[...]

ಅಡಿಕೆಯ ಮಾನ ಹಾಗೂ ಆನೆಯ ಗಾತ್ರ!

'ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬರೋದಿಲ್ಲ' ಎಂಬ ಗಾದೆ ಮಾತೊಂದಿದೆ. ಗೋಲಿ ಗಾತ್ರದ ಅಡಿಕೆಯೊಂದು ತನ್ನ ಮಾನ ಉಳಿಸಿಕೊಳ್ಳಲು ಹೋಗಿ, ಮದದಲ್ಲಿ ಮೆರೆಯುತ್ತಿರುವ ದೈತ್ಯ ಆನೆಗಳ ಮಾನವನ್ನು ಹರಾಜು ಹಾಕಿದ್ದು ಮಾತ್ರವಲ್ಲದೆ, ಕಪ್ಪುಹಣದ ಬಗ್ಗೆ ಪ್ರಬಲ ಸಾಂದರ್ಭಿಕ ಸಾಕ್ಷ್ಯವನ್ನೂ ಒದಗಿಸಿದ ಕುತೂಹಲಕರ ವಿದ್ಯಮಾನವಿದು.

ಹಣ ಸಂಗ್ರಹ ಸಾಮರ್ಥ್ಯದಲ್ಲಿ ಎಎಪಿಗಿಂತ ಹತ್ತಾರು ಪಟ್ಟು ಹೆಚ್ಚಿನ ಸಾಮರ್ಥ್ಯ ಬಿಜೆಪಿಗಿದೆ ಎಂಬುದು ತಿಳಿದ ವಿಚಾರವೇ. ಅದರಲ್ಲೂ ಹಣವನ್ನು ನೀರಿನಂತೆ ಖರ್ಚು ಮಾಡುವ ವಿಷಯದಲ್ಲಿ ಬಿಜೆಪಿಗೆ ಕಾಂಗ್ರೆಸ್‌ನವರೂ ಸಾಟಿಯಲ್ಲ ಎಂಬುದು ಈಗ ಜಗಜ್ಜಾಹೀರು.

2013ರ ದೆಹಲಿ ಚುನಾವಣೆಯ ಖರ್ಚುವೆಚ್ಚದ ಲೆಕ್ಕಪತ್ರಗಳನ್ನು ಚುನಾವಣಾ ಆಯೋಗಕ್ಕೆ ಇತ್ತೀಚೆಗೆ ಸಲ್ಲಿಸಲಾಗಿದೆ. ಅದರ ಪ್ರಮುಖ ಅಂಶಗಳು ಹೀಗಿವೆ. ಎಲ್ಲ ಪಕ್ಷಗಳ ಒಟ್ಟು ದೇಣಿಗೆ ಸಂಗ್ರಹ 22 ಕೋಟಿ 72 ಲಕ್ಷ. ಅದರಲ್ಲಿ ಶೇಕಡ 91ರಷ್ಟು ಅಂದರೆ 20 ಕೋಟಿ 75 ಲಕ್ಷ ಎಎಪಿ ಪಕ್ಷವೊಂದೇ ಸಂಗ್ರಹಿಸಿದೆ! ಒಟ್ಟು ಸಂಗ್ರಹದ ಕೇವಲ ಶೇಕಡ 1.22 ರಷ್ಟನ್ನು ಅಂದರೆ 27.7 ಲಕ್ಷವನ್ನು ಬಿಜೆಪಿ ಸಂಗ್ರಹಿಸಿದ್ದಂತೆ!!

ಸಂಗ್ರಹದ ಕತೆ ಹೀಗಾಯ್ತು, ಇನ್ನು ವೆಚ್ಚದ ಸಂಗತಿ ನೋಡೋಣ. ಎಎಪಿ ಪಕ್ಷ ಒಟ್ಟು 9 ಕೋಟಿ 51 ಲಕ್ಷ ವೆಚ್ಚ ಮಾಡಿದ್ದರೆ, ಪಾಪ ಬಿಜೆಪಿ ಪಕ್ಷ ವ್ಯಯಿಸಿದ್ದು ಕೇವಲ 3 ಕೋಟಿ 15 ಲಕ್ಷ ಮಾತ್ರವಂತೆ!!

ಎಎಪಿ ಇನ್ನೊಂದು ಭಾರೀ ಬಜೆಟ್‌ನ ಪಕ್ಷವಾಗಿಬಿಟ್ಟಿತೆ ಎಂದು ಹೌಹಾರಬೇಡಿ. ವಿಷಯ ಏನೆಂದರೆ ಅದು ಸಂಗ್ರಹಿಸುವ ಮತ್ತು ವೆಚ್ಚ ಮಾಡುವ ಎಲ್ಲ ಹಣವನ್ನೂ ಚೆಕ್ ಮತ್ತು ಬ್ಯಾಂಕ್ ಮೂಲಕವೇ ಮಾಡಬೇಕೆಂಬ ಕಠಿಣ ನೀತಿಯನ್ನು ಅನುಸರಿಸುತ್ತಿದೆ. ಆದ್ದರಿಂದ ಅವರ ಒಟ್ಟಾರೆ ಲೆಕ್ಕಪತ್ರ ನಮಗೆ ನಿಖರವಾಗಿ ಲಭ್ಯವಾಗಿದೆ.

ಅದರಲ್ಲಿ ಎಎಪಿ ಪಕ್ಷ ಮಾಧ್ಯಮಗಳಿಗೆ 4 ಕೋಟಿ 84 ಲಕ್ಷ ವೆಚ್ಚ ಮಾಡಿದ್ದರೆ ಬಿಜೆಪಿಯ ವೆಚ್ಚ ಕೇವಲ 84 ಲಕ್ಷ ಎಂದು ದಾಖಲೆಗಳು ಹೇಳುತ್ತವೆ. ಇನ್ನು ಬ್ಯಾನರ್, ಬಂಟಿಂಗ್, ಕರಪತ್ರ ಇತ್ಯಾದಿ ಪ್ರಚಾರ ಸಾಮಗ್ರಿಗಳಿಗೆ ಬಿಜೆಪಿ ವೆಚ್ಚ ಮಾಡಿದ್ದು ಎಎಪಿ ಪಕ್ಷದ ವೆಚ್ಚದ ಕೇವಲ 27% ಮಾತ್ರವಂತೆ, ಅಂದರೆ ಎಎಪಿ 2 ಕೋಟಿ 20 ಲಕ್ಷ ವೆಚ್ಚ ಮಾಡಿದ್ದರೆ ಬಿಜೆಪಿಯ ವೆಚ್ಚ ಕೇವಲ 61 ಲಕ್ಷ!

ಈ ಮೇಲಿನ ಲೆಕ್ಕಪತ್ರಗಳನ್ನು ತಲೆಯಲ್ಲಿ ಮೆದುಳು ಕೆಲಸ ಮಾಡುತ್ತಿರುವ ಯಾರೇ ಪ್ರಜೆಗಳು ನಂಬುತ್ತಾರೆಯೇ? ಆದರೆ ನಮ್ಮ ಚುನಾವಣಾ ಆಯೋಗ ನಂಬಿ ಕೂತಿದೆ.

ಈಗ ಒಂದು ಕಾಮನ್‌ಸೆನ್ಸ್‌ನ ಲೆಕ್ಕಾಚಾರ ಮಾಡೋಣ.

ದೊಡ್ಡ ದೊಡ್ಡ ನಗರಗಳಲ್ಲಿ ಬಿಜೆಪಿ ಪಕ್ಷ ತಮ್ಮ ಅಭ್ಯರ್ಥಿಗಳ ಮೇಲೆ ಕನಿಷ್ಠ 2 ಕೋಟಿಯನ್ನಾದರೂ ವೆಚ್ಚ ಮಾಡುತ್ತದೆ ಎಂಬುದು ಈಗ ಗುಟ್ಟಿನ ಸಂಗತಿಯಲ್ಲ. ಹಾಗಾದರೆ 70 ಅಸೆಂಬ್ಲಿ ಕ್ಷೇತ್ರಗಳಿಗೆ ಕನಿಷ್ಠ 140 ಕೋಟಿಯಾಯ್ತು, ಇಲ್ಲಿ ಲೆಕ್ಕಪತ್ರ ತೋರಿಸಿರುವುದು ಕೇವಲ 3 ಕೋಟಿ 15 ಲಕ್ಷ ಮಾತ್ರ. ಹಾಗಾದರೆ ಇನ್ನು ಉಳಿದ ಭಾರೀ ಮೊತ್ತ ಎಲ್ಲಿಂದ ಬಂತು?

ಅದರಲ್ಲಿ ಹೆಚ್ಚಿನ ಗೊಂದಲವೇನೂ ಇಲ್ಲ, ಮೋದಿ ಮತ್ತು ಬಿಜೆಪಿ ಪಕ್ಷ ನಿಂತಿರುವುದೇ ಕಪ್ಪುಹಣದ ಮೇಲೆ.

ಈ ಪುಟ್ಟ ಎಎಪಿ ಪಕ್ಷ ತನ್ನ ಮಾನ ಕಾಪಾಡಿಕೊಳ್ಳಲು ಹೋಗಿ ಬಿಜೆಪಿಯ ಮಾನವನ್ನು ಈ ರೀತಿ ಬಹಿರಂಗ ಹರಾಜು ಹಾಕುತ್ತದೆ ಎಂದು ಯಾರೂ ನಿರೀಕ್ಷಿಸಿರಲಿಲ್ಲ.

ಮುಗ್ಧ ಮೋದಿಗೆ ಮಾಹಿತಿ ಕೊರತೆ

ಮೋದಿ ಕಪ್ಪುಹಣವನ್ನು ಇಷ್ಟರಲ್ಲಾಗಲೇ ಸರ್ಕಾರದ ವಶ ಮಾಡಿಕೊಂಡು ಬಿಡುತ್ತಿದ್ದರು. ಆದರೆ ಅಯ್ಯೋ ಪಾಪ! ಅವರಿಗೆ ಸರಿಯಾದ ಮಾಹಿತಿ ಕೊಡುವವರೇ ಇಲ್ಲ. ಹಾಗಾಗಿ ನಮ್ಮ ಅಂದಾಜಿನಲ್ಲಿರುವ ಕೆಲವು ಅಂಶಗಳನ್ನು ಅವರ ಗಮನಕ್ಕೆ ತಂದು ಈ ಮಹತ್ಕಾರ್ಯದಲ್ಲಿ ಸ್ವಲ್ಪವಾದರೂ ಸಹಾಯ ಮಾಡೋಣ.

–ತಮ್ಮ ಪಕ್ಷ ದೇಶಾದ್ಯಂತ ನಡೆಸಿದ ಆಪರೇಷನ್ ಕ-ಮಲದಲ್ಲಿ ಭಾರೀ ಹಣ ಚಲಾವಣೆಯಾಗಿದೆ, ಆಗುತ್ತಿದೆ. ಇಂಥಾ ಆಪರೇಷನ್ ಕರ್ನಾಟಕದಲ್ಲೂ ನಡೆದಿತ್ತು, ಆ ಹಣದ ಬಣ್ಣ ನೀವು ಹುಡುಕುತ್ತಿರುವ ಬಣ್ಣಕ್ಕೆ ಸರಿಯಾಗಿ ಮ್ಯಾಚ್ ಆಗುತ್ತದೆ.

–ಕರ್ನಾಟಕದಲ್ಲಿ ತಮ್ಮ ಪಕ್ಷ ಅಧಿಕಾರದಲ್ಲಿದ್ದಾಗ ತಮ್ಮದೇ ಪಕ್ಷದ ಮಂತ್ರಿಗಳು ಬಳ್ಳಾರಿ ರಿಪಬ್ಲಿಕ್ ರಚಿಸಿಕೊಂಡು ನಡೆಸಿದ ಗಣಿಗಾರಿಕೆ ದಂಧೆಯಲ್ಲಿ ಇದೇ ಬಣ್ಣ ವ್ಯವಹಾರ ನಡೆದಿದ್ದು ಈ ಬಗ್ಗೆ ತಾವೂ ತನಿಖೆ ಕೈಗೊಳ್ಳಬಹುದು.

–ದೇಶಾದ್ಯಂತ ವಿರ್‌ಟೂರ್ ಮಾಡಿದ್ದು

–ದೇಶಾದ್ಯಂತ ಪರ್ಯಾಯ ಬ್ಯಾಂಕಿಂಗ್ ವ್ಯವಸ್ಥೆಯನ್ನು ನಡೆಸುತ್ತಿರುವ ಹವಾಲಾ ದಂಧೆಯಲ್ಲಿ ಹೆಚ್ಚಿನ ಮಂದಿ ಗುಜರಾತ್ ಮೂಲದ ಬ್ಯುಸಿನೆಸ್ ಮಂದಿ ಇದ್ದಾರೆ ಎಂಬ ಗುಸುಗುಸು ಎಲ್ಲೆಡೆ ಕೇಳಿಬರುತ್ತಿದೆ.

–ಕಪ್ಪುಹಣದ ಭಾರೀ ಚಲಾವಣೆ ಬಂಗಾರ ಮತ್ತು ವಜ್ರದ ವ್ಯಾಪಾರದಲ್ಲಿ ಆಮದು-ರಫ್ತಿನಲ್ಲಿದೆ ಎಂದು ಹಲವಾರು ವರದಿಗಳು ಹೇಳುತ್ತವೆ. ಬಂಗಾರ ಮತ್ತು ವಜ್ರದ ವ್ಯಾಪಾರದಲ್ಲಿ ಗುಜರಾತಿಗಳದೇ ಅಧಿಪತ್ಯವಿದೆಯೆಂಬುದು ತಮಗೂ ಗೊತ್ತಿರುವುದರಿಂದ ಅವರನ್ನು ನಿಯಂತ್ರಣಕ್ಕೆ ತರುತ್ತೀರೆಂದು ನಾವು ನಂಬಬಹುದೆ?


–ತಮ್ಮ ಪಕ್ಷದ ಹಿಂದಿನ ಅಧ್ಯಕ್ಷ ನಿತಿನ್ ಗಡ್ಕರಿಯ[...] ಸ್ಥಾನಚ್ಯುತಿ ಮಾಡಿದ್ದು ಇಂಥದೇ ಅವ್ಯವಹಾರದ ಹಿನ್ನೆಲೆಯ[...] ಅವರ ಬೇನಾಮಿ ಕಂಪನಿಗಳು ಇನ್ನೂ ಚಾಲ್ತಿಯಲ್[...] ಅವರು ನಿಮ್ಮದೇ ಸಂಪುಟದಲ್ಲಿರುವುದರಿಂದ ನಿಮ್ಮ [...] ಸುಲಭವಾಗಿ ಸಿಕ್ಕಿಬೀಳಬಹುದು ಪ್ರಯತ್ನಿಸಿ.

–ಇನ್ನು ನೀವು ಪ್ರಚಾರದ ಟಾರ್ಗೆಟ್ ಮಾ[...] ಶರದ್‌ಪವಾರ್, ಚಿದಂಬರಂ, ಜಯಲಲಿತಾ ಮುಂತಾದ[...] ಹಣದ ಬಣ್ಣದ ಬಗ್ಗೆ ನಮಗೂ ತೀವ್ರ ಗುಮಾನಿಯ[...] ಅಂಥವರನ್ನು ಜೈಲಿಗೆ ಅಟ್ಟಿ.

–ಎಲ್ಲಕ್ಕಿಂತ ಮುಖ್ಯವಾಗಿ ನಿಮ್ಮದೇ [...] ಬಳಗದಲ್ಲಿರುವ ಅದಾನಿ ಅಂಬಾನಿ ಮುಂತಾದವ[...] ಸರ್ಕಾರದ ಬೊಕ್ಕಸಕ್ಕೆ ಕನ್ನ ಕೊರೆದು ಭಾರೀ ಮೊ[...] ಬಣ್ಣವನ್ನೇ ಬದಲಾಯಿಸುತ್ತಿದ್ದಾರೆ. ಟಾಸ್ಕ್‌ಫೋರ್ಸ[...] ನೇಮಿಸಲು ಸಾಧ್ಯವೇ?

–ಹೀಗೆ ಹೇಳುತ್ತಾ ಹೋದರೆ ದೊಡ್ಡ ಗ್ರಂಥ[...] ಆಗುವುದರಿಂದ ಇಲ್ಲಿಗೆ ನಿಲ್ಲಿಸೋಣ. ಅದಕ್ಕೆ ಮು[...] ಮತ್ತೊಂದು ಸಲಹೆ, ಗಣರಾಜ್ಯೋತ್ಸವದ ದಿನ ತಾ[...] ಧರಿಸಿದ್ದ ಆ ನಾಲ್ಕು ಸೂಟುಗಳು ತಲಾ 10 [...] ಬೆಲೆಯವು ಎಂದು ಹೇಳಲಾಗಿದೆ. ನಿಮ್ಮಲ್ಲಿ ಪಾಪ! ಅ[...] ಹಣ ಎಲ್ಲಿಂದ ಬರಬೇಕು? ಆದ್ದರಿಂದ ಅದ[...] ವ್ಯಯಿಸಿದವರು ಕಪ್ಪುಹಣ ಬಳಸಿಲ್ಲ ಎಂಬುದನ್ನು ತಾ[...] ಖಾತ್ರಿ ಮಾಡಿಕೊಳ್ಳುವುದು ಈ ದೇಶದ ಹಿತದೃಷ್ಟಿಯಿ[...] ಒಳ್ಳೆಯದು.

ಕಪ್ಪುಹಣವನ್ನು ಮಟ್ಟ ಹಾಕುವ ತಮ್ಮ [...] ಕಾರ್ಯಗಳಿಗೆ ನಮ್ಮ ಬೆಂಬಲವಿರುತ್ತದೆ. ತ[...] ಶ್ರೀರಾಮಚಂದ್ರ ಸನ್ಮಂಗಳವನ್ನುಂಟು ಮಾಡಲಿ!



ಗಾಗಿ ನೈಸರ್ಗಿಕ ಅನಿಲದ ದರವನ್ನು ಸದ್ದಿಲ್ಲದೆ ಏರಿಸಿ ಶ್ರೀಸಾಮಾನ್ಯನಿಗೆ
ಕಿದ್ದು. ಮತಗಳ ಧ್ರುವೀಕರಣಕ್ಕಾಗಿ ಕೋಮು ಕಿಚ್ಚನ್ನು ಹಚ್ಚಿ ಮೈ
ಕೊಂಡಿದ್ದು ... ಹೀಗೆ ಹೇಳುತ್ತಾ ಹೋದರೆ ಪಟ್ಟಿ ಉದ್ದವಾಗುತ್ತದೆ.
ೀದಿಯ ದುರಾಡಳಿತದ ಸ್ಯಾಂಪಲ್ ಕಂಡ ಜನರು ಈಗಾಗಲೇ ದೇಶಾದ್ಯಂತ
ದಿದ್ದಾರೆ. ಈ ಕಪ್ಪುಹಣದ ಆಶ್ವಾಸನೆಯ ಬಗ್ಗೆಯೂ ಪ್ರಶ್ನಿಸುತ್ತಿದ್ದಾರೆ.
ಈ ಕಪ್ಪುಹಣದ ವಿಷಯ ಕೇವಲ ಮತಗಳಿಕೆಗಾಗಿ ಮಾತ್ರ ಮಾಡಿದ್ದು
ಸಂಗತಿ ಈಗ ನಿಚ್ಚಳವಾಗುತ್ತಿದೆ.

ನಾವಣಾ ಪ್ರಚಾರದಲ್ಲಿ ಮೋದಿಯ ಜೊತೆಜೊತೆಗೆ ಸಾಗಿದ್ದ ಬಾಬಾ
ೀವ್ ಎಂಬ ಯೋಗಗುರು 'ಕಪ್ಪು ಹಣವನ್ನು ರಾಷ್ಟ್ರೀಯ ಸಂಪತ್ತು
ಘೋಷಿಸಬೇಕು' ಎಂದು ಕರೆಕೊಟ್ಟಿದ್ದರು. ಮೋದಿ ಪ್ರಧಾನಿಯಾದರೆ
ದಿನಗಳಲ್ಲೇ ಕಪ್ಪುಹಣ ವಾಪಸ್ ತರುತ್ತೇವೆ ಎಂದು ಘೋಷಿಸಿದ್ದರು.
ಥ್‌ಸಿಂಗ್ ಇಂಥದೇ ಮಾತುಗಳನ್ನು ಆಡಿದ್ದರು. ಆದರೆ ಈಗ '100
ಆ ಪ್ರಕ್ರಿಯೆ ಶುರು ಮಾಡುತ್ತೇವೆ ಎಂದಷ್ಟೆ ಹೇಳಿದ್ದೆವು' ಎಂದು
ಹೊಡೆಯುತ್ತಿದ್ದಾರೆ.

ರು ಶುರು ಮಾಡಿರುವ ಪ್ರಕ್ರಿಯೆಯಾದರೂ ಎಂಥದ್ದು?! ಕಪ್ಪುಹಣ
ತಿಯ ಬಗ್ಗೆ ಸುಪ್ರೀಂಕೋರ್ಟಿನಲ್ಲಿ ಪಿಐಎಲ್‌ಗಳು ದಾಖಲಾಗಿವೆ.
ಲ್‌ಗಳು ದಾಖಲಾದ ನಂತರ ಸುಪ್ರೀಂಕೋರ್ಟ್ ಕೇಂದ್ರಕ್ಕೆ ನೋಟಿಸ್
ಮಾಡಿ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಕೇಳಿದೆ. ಇದಾದ ನಂತರ
ನಾಟಕ ಶುರು ಮಾಡಿದ ಮೋದಿ ಕೂಟ ಸರ್ಕಾರದ ಬಳಿಯಿದ್ದ
ಬ್ಯಾಂಕ್ ಖಾತೆದಾರರ ಪಟ್ಟಿಯಿಂದ ಆಯ್ದ 3 ಹೆಸರುಗಳನ್ನು
ಗಮಾಡಿ ಸುದ್ದಿ ಮಾಡಿತು. ಮತ್ತೆ ಕೆಲ ದಿನಗಳ ನಂತರ ಒಟ್ಟು 8
ಗಳನ್ನು ಬಹಿರಂಗಪಡಿಸಿ ರಾಜಕೀಯ ಮಾಡತೊಡಗಿತು. ಇಂಥಾ ಹೀನ
ಕೆಯ ಬಗ್ಗೆ ಛೀಮಾರಿ ಹಾಕಿದ ಸುಪ್ರೀಂಕೋರ್ಟ್ ಎಲ್ಲರ ಹೆಸರುಗಳನ್ನು
ಲಕೋಟೆಯಲ್ಲಿ 24 ಗಂಟೆಗಳ ಒಳಗಾಗಿ ಕೋರ್ಟ್‌ಗೆ ಸಲ್ಲಿಸಬೇಕೆಂದೂ
ಮುಂದೆ ಯಾವುದೇ ಮಾಹಿತಿಯನ್ನೂ ಹೀಗೆ ಬಹಿರಂಗಗೊಳಿಸುವ
ಮಾಡಬಾರದೆಂದೂ ಕಟ್ಟಪ್ಪಣೆ ಮಾಡಿತು.

ಲ ಸುಟ್ಟ ಬೆಕ್ಕಿನಂತಾದ ಮೋದಿ ಸರ್ಕಾರ ವಿಧಿಯಿಲ್ಲದೇ 627
ಯ ಪಟ್ಟಿಯಿದ್ದ ದಾಖಲೆಯನ್ನು ಸುಪ್ರೀಂಕೋರ್ಟಿಗೆ ಸಲ್ಲಿಸಿದೆ. ಸುಪ್ರೀಂ
ಯಂತೆ ಒಂದು ವಿಶೇಷ ತನಿಖಾ ತಂಡವನ್ನು ರಚಿಸಲಾಗಿದೆ. ಹೀಗೆ
ಸರ್ಕಾರಕ್ಕೆ ಕಪ್ಪುಹಣದ ವಿಷಯ ಎಷ್ಟು ಮುಂದೆ ಹೋದರೆ ಅಷ್ಟು
ದು.. ಯಾಕೆಂದರೆ ಕಪ್ಪುಹಣ ಹಾಗೂ ಕರಾಳದಂಧೆಗಳ ಬಗ್ಗೆ ತನಿಖೆ
ಸಿದರೆ ಅದು ತನ್ನ ಸುತ್ತಲೇ ಸುತ್ತಿಕೊಳ್ಳುತ್ತದೆ ಎಂಬುದು ಆ
ದಲ್ಲಿರುವ ಬಹಳ ಮಂದಿಗೆ ಚೆನ್ನಾಗಿ ಗೊತ್ತಿರುವ ವಿಷಯ.

ನ್ನು ಕೊನೆಯದಾಗಿ ಒಂದು ಮಾತು. ಕಪ್ಪೋ ಬಿಳುಪೋ, ಕೋಟಿಗಟ್ಟಲೆ
ಇಟ್ಟುಕೊಂಡಿರುವ ಯಾರೇ ಆಗಲಿ, ಲಾಭದಾಯಕ ವ್ಯವಹಾರಗಳಲ್ಲಿ
ಸದೇ ಹೋದರೆ ಆ ಕರೆನ್ಸಿಗೆ ಬೆಲೆ ಎಲ್ಲಿ ಬರುತ್ತದೆ? ಹತ್ತು ವರ್ಷಗಳ
ಇದ್ದ ಚಿನ್ನದ ಬೆಲೆ ಇವತ್ತು 10 ಪಟ್ಟು ಹೆಚ್ಚಾಗಿಲ್ಲವೆ? ನಿವೇಶನ
ಗಳ ಬೆಲೆಗಳು ಎಷ್ಟುಪಟ್ಟು ಹೆಚ್ಚಾಗಿವೆ? ಹೀಗಾಗಿ, ವಿದೇಶಗಳಲ್ಲಿ
ಯಾರೂ ನೆಮ್ಮದಿಯಾಗಿರಲು ಸಾಧ್ಯವಿಲ್ಲ, ಅಂಥಾ ಮೂರ್ಖರು
ಇಲ್ಲ, ಆದ್ದರಿಂದಲೇ ಹಣವನ್ನು ಮರುಹೂಡಿಕೆ ಮಾಡಲಾಗುತ್ತಿದೆ.
ನಮ್ಮದೇ ದೇಶದಲ್ಲಿ ಚಲಾವಣೆಯಲ್ಲಿರುವ ಭಾರೀ ಪ್ರಮಾಣದ ಕಪ್ಪು
ತೆಯೊಂದಿಗೆ ಮಿಳಿತವಾಗಿಹೋಗಿದೆ. ಕಪ್ಪುಹಣ ಎಂಬುದು ಅದರ
ಸಣ್ಣ ಭಾಗ ಮಾತ್ರ. (ಮುಂದಿನ ವಾರದಲ್ಲಿ ಕಪ್ಪು ಆರ್ಥಿಕತೆಯ
ರಗಳ ಬಗ್ಗೆ ವಿವರವಾದ ಲೇಖನ ಪ್ರಕಟವಾಗಲಿದೆ)

ೀಗಾಗಿಯೂ ಕೆಲ ಮಂದಿ ವಿದೇಶಿ ಬ್ಯಾಂಕ್ ಅಕೌಂಟ್‌ನಲ್ಲಿ ಹಣ
ನೆಮ್ಮದಿಯಾಗಿದ್ದಾರೆ ಎಂದಿಟ್ಟುಕೊಳ್ಳೋಣ. ಈಗ ಅದರ ಪರಿಸ್ಥಿತಿ
ರಬಹುದು? ಕ್ಷಿಪ್ರ ಕಾರ್ಯಾಚರಣೆ ನಡೆಸಿದರೂ ಕೂಡ ಕೈಗೆ ಸಿಗದೆ
ಳ್ಳುವ ಚಾಣಾಕ್ಷ ಕ್ರಿಮಿನಲ್‌ಗಳು ಹೇರಳವಾಗಿರುವಾಗ, ವರ್ಷವಿಡೀ
ಣ ವಾಪಸ್ ತರುತ್ತೇವೆಂದು ರಾಜಕೀಯ ಪ್ರಚಾರ ಮಾಡಿ ಅಧಿಕಾರ
ರೆ ಆ ಮಂದಿ ಕಡಲೆಬೀಜ ತಿನ್ನುತ್ತಾ ಕೂರ್‍ತಾರಾ? ಆ ಹಣವನ್ನು ತೆಗೆದು
ಗೆ ಸಾಗಿಸಿ ನಾಪತ್ತೆ ಮಾಡುವುದಿಲ್ಲವೆ? ಆ ಬ್ಯಾಂಕುಗಳ ಸುತ್ತ ಮೋದಿ
ಗಾರರನ್ನೇನಾದರೂ ನೇಮಿಸಿದ್ದಾರೆಯೆ?


ನ್ನು ಆ ವಿದೇಶಿ ಬ್ಯಾಂಕುಗಳೇ ಸ್ವತಃ ನಮ್ಮ ಸರ್ಕಾರಕ್ಕೆ ಸಹಕರಿಸಿ ಆ
ಹಿಡಿದುಕೊಡಬಹುದು ಎಂದು ನೀವು ಊಹಿಸಬಹುದು. ಆದರೆ
ಹೇಗಿದೆ ಎಂದರೆ 'ಖಾಸಗಿತನದ ರಕ್ಷಣೆ'ಯ ಹೆಸರಿನಲ್ಲಿ ಸ್ವಿಸ್
ನ ಅಧಿಕಾರಿಗಳು ಖಾತೆದಾರರ ಬಗೆಗಿನ ರಹಸ್ಯ ಮಾಹಿತಿಯನ್ನು
ೂ ನಿರಾಕರಿಸುತ್ತಿವೆ. ಹೀಗಿರುವಾಗ ಕಪ್ಪುಹಣ ಎಲ್ಲಿಂದ, ಹೇಗೆ ಮತ್ತು
ಯಾರು ತರುತ್ತಾರೆ ಎಂಬುದು ಯಕ್ಷ ಪ್ರಶ್ನೆ.

ಂದು ವಿಷಯ ಮಾತ್ರ ಸ್ಪಷ್ಟ. 2019ರ ಲೋಕಸಭಾ ಚುನಾವಣೆಯ
ಮೋದಿ ಕೂಟದಿಂದ ಈ ಬಗ್ಗೆ ಹೊಸ ಯೋಜನೆಯೊಂದು ಸಿದ್ಧವಾದರೂ
ಹುದು.

• ದೊಡ್ಡಿಪಾಳ್ಯ ನರಸಿಂಹಮೂರ್ತಿ


ಜಾತಿ ಕ್ರೌರ್ಯದಿಂದ ನರಳುತ್ತಿರುವ ಚಾಮರಾಜನಗರ ಜಿಲ್ಲೆ

ಹೊಸವರ್ಷವೆಂಬುದು ಎಲ್ಲರಿಗೂ ಹರುಷ ತಂದರೆ, ದಲಿತರಿಗಂತೂ ಪ್ರತಿ ವರ್ಷವೂ ದುಃಖಮಯ ದಿನಗಳಾಗಿವೆ. ಚಾಮರಾಜನಗರ ಜಿಲ್ಲೆಯ ದಲಿತರಿಗಂತೂ ಈ ವರ್ಷದ ನಾಲ್ಕು ತಿಂಗಳು ಅಕ್ಷರಶಃ ಭಯಾನಕ ದಿನಗಳಾಗಿವೆ. ಅದಕ್ಕೆ ಕಾರಣ ಅಲ್ಲಿ ನಡೆದಿರುವ ಮೂರು ಭಯಂಕರ ಕೊಲೆ ಪ್ರಕರಣಗಳು. ಆದರೆ ಎಂದಿನಂತೆ ಮಾಧ್ಯಮಗಳು ಈ ಘಟನೆಗಳನ್ನು ಬೇಕೆಂದೇ ಮರೆಮಾಚಿವೆ. ಸರ್ಕಾರಗಳು ಮಾಮೂಲಿ ಘಟನೆಯಂತೆ ನೋಡಿ ಸುಮ್ಮನಾಗಿವೆ. ದಲಿತ ಸಂಘಟನೆಗಳು 'ನಮಗೆ ಬೆಂಬಲ ನೀಡುವ ಒಂದೂ ಸವರ್ಣೀಯ ಸಂಘಟನೆಗಳಿಲ್ಲವಲ್ಲ' ಎಂದು ಒಂಟಿ ಕೂಗು ಕೂಗುತ್ತಿವೆ. ದಲಿತ ಜನಪ್ರತಿನಿಧಿಗಳು ನಮಗೂ ಇದಕ್ಕೂ ಸಂಬಂಧವೇ ಇಲ್ಲವೆಂದು ಸುಮ್ಮನಿದ್ದಾರೆ. ಸವರ್ಣೀಯ ಜನಪ್ರತಿನಿಧಿಗಳು ತಮ್ಮವರನ್ನು ಶಿಕ್ಷೆಯಿಂದ ಬಚಾವು ಮಾಡಲು ಶತಾಯ ಗತಾಯ ಪ್ರಯತ್ನಿಸುತ್ತಿದ್ದಾರೆ. ಹೀಗಿರುವಾಗ ತನ್ನ ಬಂಧುಗಳನ್ನು ಕಳೆದುಕೊಂಡ ದಲಿತರು ನ್ಯಾಯದೇವತೆಯ ಕಣ್ಣಿಗೆ ಕಟ್ಟಿರುವ ಬಟ್ಟೆ ಕಳಚಿ ಬೀಳುವುದನ್ನೇ ಎವೆಯಿಕ್ಕದೆ ನೋಡುತ್ತಿದ್ದಾರೆ. ಹೀಗೆ ಚಾಮರಾಜನಗರದ ಜಿಲ್ಲೆಯ ಮಾನವಪರರನ್ನು ಬೆಚ್ಚಿ ಬೀಳಿಸಿದ, ಪ್ರಚಾರ ಪಡೆಯದ ಆ ಮೂರು ಪ್ರಕರಣಗಳು ಇಂತಿವೆ.


ಕೃತಿಕಾದೇವಿ

ಯಾರೂ ಅರಿಯದ ಕೃತಿಕಾದೇವಿಯ ಹತ್ಯೆ

ಅದು ಜನವರಿ 4ನೇ ತಾರೀಖು. ಹದಿನೈದು ದಿನಗಳಿಂದ ನಾಪತ್ತೆಯಾಗಿದ್ದ ಚಾಮರಾಜನಗರದ ವಿದ್ಯಾನಗರದಲ್ಲಿ ವಾಸವಾಗಿರುವ ದೈಹಿಕ ಪರಿವೀಕ್ಷಕರಾದ ಎಸ್.ಮಹದೇವ್‌ರವರ ಮಗಳು ಕೃತಿಕಾದೇವಿ ಮೈಸೂರಿನ ಮ್ಯಾನ್‌ಹೋಲ್ ಒಂದರಲ್ಲಿ ಪತ್ತೆ ಹಚ್ಚಲಾಗದ ಸ್ಥಿತಿಯಲ್ಲಿ ಸುಟ್ಟು ಕರಕಲಾಗಿ ಸಿಕ್ಕಿದ್ದಳು. ತಾಯಿ ಇಲ್ಲದ ಮಗಳನ್ನು ಮುದ್ದಾಗಿ ಸಾಕಿದ್ದ ತಂದೆಗೆ ಪ್ರಾಣವೇ ಹೋದಂತಾಗಿತ್ತು. ಕೊಳ್ಳೇಗಾಲದ ಜೆ.ಎಸ್.ಎಸ್ ವಿದ್ಯಾಸಂಸ್ಥೆಯಲ್ಲಿ ದ್ವಿತೀಯ ಬಿ.ಕಾಂ ಓದುತ್ತಿದ್ದ 20 ವರ್ಷದ ಕೃತಿಕಾದೇವಿ ದಾರುಣ ಅಂತ್ಯ ಕಂಡಿದ್ದಳು. ಪೊಲೀಸ್ ತನಿಖೆಯಲ್ಲಿ ತಿಳಿದು ಬಂದದ್ದೇನೆಂದರೆ ಆ ಹುಡುಗಿಯನ್ನು ಪ್ರೀತಿಸುತ್ತಿದ್ದ ಸವರ್ಣೀಯ ಹುಡುಗ ಪ್ರಮೋದಕುಮಾರ್ ಕೊಲೆ ಮಾಡಿ ಸುಟ್ಟಾಕಿದ್ದನೆಂದು. ಕಾರಣ ಜಾತಿ! ಪ್ರೀತಿ ಮಾಡುವಾಗ ಅವನಿಗೆ ಜಾತಿ ಅಡ್ಡಬರಲಿಲ್ಲ ಆದರೆ ಮದುವೆ ಮಾಡಿಕೊಳ್ಳಲು ಅವನಿಗೆ ಜಾತಿ ಅಡ್ಡ ಬಂದಿತ್ತು. ದಲಿತ ಸಂಘಟನೆಗಳು ಹೇಳುವಂತೆ ಕೃತಿಕಾದೇವಿ ತನ್ನ ಬಳಿಯಲ್ಲಿದ್ದ ಹಣ, ಒಡವೆಗಳನ್ನು ಪ್ರಮೋದಕುಮಾರನಿಗೆ ಕೊಟ್ಟು ಅವನನ್ನು ಸಲುಹಿದ್ದಳು. ಆದರೆ ಆ ಪಾಪಿ ಅವಳಿಗೆ ಮೋಸ ಮಾಡಿ ಬೇರೆ ಇನ್ನೊಂದು ಮದುವೆಗೆ ಸಿದ್ಧನಾಗಿದ್ದ. ಇದನ್ನು ವಿರೋಧಿಸಿದ ಕೃತಿಕಾದೇವಿಯನ್ನು ಮೈಸೂರಿಗೆ ಕರೆದುಕೊಂಡು ಹೋಗಿ ಸಮಯ ಕಾದು ಅವಳನ್ನು ಕಬ್ಬಿಣದ ಸಲಾಕೆಯಲ್ಲಿ ಹೊಡೆದು ಮ್ಯಾನ್‌ಹೋಲಿನಲ್ಲಿ ತಲೆಕೆಳಗಾಗಿ ಹಾಕಿ 17 ಬಾರಿ ಪೆಟ್ರೋಲ್ ಹಾಕಿ ಸುಟ್ಟಿದ್ದ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಅವನನ್ನು ಬಂಧಿಸಿದ್ದಾರೆ. ಆದರೆ ಅವನೊಬ್ಬನಿಂದ ಆ ಕೃತ್ಯವಾಗಿರುವುದು ನಂಬಲಸಾಧ್ಯವಾಗಿದ್ದು ಇನ್ನುಳಿದ ಕೊಲೆಗಡುಕರನ್ನು ಪತ್ತೆ ಹಚ್ಚಬೇಕೆಂದು ದಲಿತ ಸಂಘಟನೆಗಳು ಆಗ್ರಹಿಸುತ್ತಿವೆ. ಅದಲ್ಲದೆ ಇದೊಂದು ರೀತಿಯಲ್ಲಿ ಮರ್ಯಾದಾ ಹತ್ಯೆ ಪ್ರಕರಣವೇ ಆಗಿದೆ. ಕೃತಿಕಾದೇವಿಯ ಪ್ರಕರಣಕ್ಕೆ ನ್ಯಾಯ ಸಿಗಬೇಕಾದರೆ ಅವಳನ್ನು ಕೊಂದ ಎಲ್ಲರನ್ನೂ ಬಂಧಿಸಿ ನ್ಯಾಯಾಲಯದಲ್ಲಿ ಶಿಕ್ಷೆ ಆಗುವಂತೆ ಮಾಡಬೇಕಿದೆ.



ಹೊಡೆದದ್ದಕ್ಕೆ ಮಹೇಶನ ಹತ್ಯೆ

ಮಾರ್ಚ್ 27 ರಂದು ಕೊಳ್ಳೇಗಾಲ ತಾಲೂಕಿನ ಹನೂರು ಪಕ್ಕದ ಚಂಚಹಳ್ಳಿಯ ದಲಿತ ಯುವಕ ಮಹೇಶ ತನ್ನ ಸವರ್ಣೀಯ ಸ್ನೇಹಿತರೊಂದಿಗೆ ಮದ್ಯಪಾನ ಮಾಡುತ್ತಿರುವಾಗ ಸವರ್ಣೀಯ ಯುವಕನ ತಂದೆ ಚನ್ನೇಗೌಡ ಬಂದು ಮಹೇಶನಿಗೆ ಅವಾಚ್ಯವಾಗಿ ಬೈದು ಗಲಾಟೆ ಮಾಡುತ್ತಾನೆ. ಈ ಚಕಮಕಿಯಲ್ಲಿ ಮಹೇಶನೂ ಚನ್ನೇಗೌಡನಿಗೆ ಹೊಡೆದು ಬಿಡುತ್ತಾನೆ. ಈ ನೆಲದಲ್ಲಿ ಮನುಸ್ಮೃತಿಯ ಪ್ರಕಾರ ಒಬ್ಬ ದಲಿತ ಮೇಲ್ಜಾತಿಯವರಿಗೆ ಹೊಡೆಯುವುದು ಸರಿಯೇ? ಅದಕ್ಕೆ ಚನ್ನೇಗೌಡ ಮಹೇಶನನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿ ಅಲ್ಲಿಂದ ಹೊರಡುತ್ತಾನೆ. ಇದಾದ ಒಂದೇ ವಾರಕ್ಕೆ ಅಂದರೆ ಏಪ್ರಿಲ್ 3 ರ ಗುಡ್‌ಫ್ರೈಡೆಯಂದು ಮಹೇಶ ಮರವೊಂದಕ್ಕೆ ನೇಣು ಬಿಗಿದ ಸ್ಥಿತಿಯಲ್ಲಿ ಶವವಾಗಿ ಸಿಕ್ಕಿದ್ದಾನೆ. ಅವನ ಮುಖವನ್ನು ಗುರುತು ಸಿಗಲಾರದಷ್ಟು ಕಲ್ಲಿನಿಂದ ಜಜ್ಜಿ ಕೊಲೆ ಮಾಡಲಾಗಿದೆ. ಆದರೆ ಪೊಲೀಸಿನವರು ಪ್ರಾಥಮಿಕ ವರದಿಯನ್ನು ಬಹಿರಂಗಪಡಿಸದೆ ಅದು ಅಪಘಾತವೆಂದು ಹೇಳುತ್ತಾ ಒಬ್ಬನನ್ನು ಬಂಧಿಸಿದ್ದಾರೆ. ಆದರೆ ಈ ಕೊಲೆ ಮಾಡಿಸಿರುವವರು ಚನ್ನೇಗೌಡನೇ ಎಂದು ದಲಿತ ಸಂಘಟನೆಗಳು ಹೇಳುತ್ತಿವೆ. ಅದಕ್ಕೆ ಅವರ ಬಳಿ ಪ್ರಬಲವಾದ ಸಾಕ್ಷಿಯೂ ಇದೆ. ಕೇವಲ ಹೊಡೆದದ್ದಕ್ಕೆ ಪ್ರಾಣವನ್ನೇ ತೆಗೆಯುವ ಮನಸ್ಥಿತಿ ಹೊಂದಿರುವ ಇಂತಹವರಿಗೆ ಈ ನೆಲದ ಕಾನೂನಿನ ಮೇಲೆ ಗೌರವ ಬರಬೇಕೆಂದರೆ ಅವರಿಗೆ ತಕ್ಕ ಶಿಕ್ಷೆ ಆಗಬೇಕು. ಜೊತೆಗೆ ಕೊಲೆ ಮಾಡಿರುವವರೆಲ್ಲರನ್ನೂ ಜೈಲಿಗೆ ತಳ್ಳಬೇಕು.

ಸಂತೇಮರಳ್ಳಿಯ ದಲಿತರ ಶಿರಚ್ಛೇದ ಪ್ರಕರಣ


ಇನ್ನು ಇಡೀ ಕರ್ನಾಟಕವನ್ನೇ ಬೆಚ್ಚಿಬೀಳಿಸಿದ ಪ್ರಕರಣ ಸಂತೇಮರಳ್ಳಿಯ ಇಬ್ಬರು ದಲಿತರನ್ನು ತಲೆ ಕಡಿದು ಹತ್ಯೆ ಮಾಡಿದ ಪ್ರಕರಣ. ಈ ಪ್ರಕರಣದಲ್ಲಿ ಈಗಾಗಲೇ ಇಬ್ಬರನ್ನು ಬಂಧಿಸಲಾಗಿದ್ದು ಅದರಲ್ಲಿ ಒಬ್ಬನನ್ನು ಮಾನಸಿಕ ಅಸ್ವಸ್ಥ ಎಂದು ಪ್ರಾಥಮಿಕ ವರದಿಯಲ್ಲಿ ತಿಳಿಸಲಾಗಿದೆ. ಆದರೆ ಆತನೊಬ್ಬ ಮಾನಸಿಕ ಅಸ್ವಸ್ಥನಾಗಿದ್ದ ಎಂಬುದನ್ನು ಅಲ್ಲಿನ ದಲಿತ ಸಂಘಟನೆಯವರು, ಸ್ಥಳೀಯರು ಒಪ್ಪುತ್ತಿಲ್ಲ. ಇಷ್ಟು ವರ್ಷ ಇಲ್ಲದಿದ್ದ ಹುಚ್ಚು ಈಗ ಬಂದಿರುವುದನ್ನು ನೋಡಿದರೆ ಅದು ಆತನನ್ನು ಬಚಾವು ಮಾಡುವ ಹುನ್ನಾರವೆಂಬುದು ಎದ್ದು ಕಾಣುತ್ತದೆ. ಅದಲ್ಲದೆ ಆ ಕೊಲೆ ಆರೋಪಿ ರಕ್ಕಸಮ್ಮ ದೇವಿಯನ್ನು ಪೂಜಿಸುವ ಪೂಜಾರನಾಗಿದ್ದುದು ಆತನು ಹುಚ್ಚನಲ್ಲ ಎಂಬುದನ್ನು ತೋರಿಸುತ್ತದೆ. ಅಲ್ಲದೆ ಈ ಜೋಡಿ ಕೊಲೆಗಳು ನರಬಲಿಗಳೇ ಆಗಿವೆ ಎಂಬುದನ್ನು ಸಾಬೀತುಪಡಿಸುತ್ತಿದೆ. ಈ ಪ್ರಕರಣವನ್ನು ತನಿಖೆ ಮಾಡುತ್ತಿರುವ ಪೊಲೀಸರ ಬೇಜವಾಬ್ದಾರಿ ನಡತೆಗಳು ಅವರ ಮೇಲೆ ಅನುಮಾನ ಬರುವಂತೆ ಮಾಡುತ್ತಿವೆ. ಕೊಲೆ ನಡೆದ ಸ್ಥಳವನ್ನು ಮಹಜರು ಮಾಡಿರುವ ಪೊಲೀಸರು ಅಲ್ಲಿದ್ದ ಮೂರು ಬಟ್ಟೆಗಳನ್ನು, ಮಾಂಸ ಮತ್ತು ರಕ್ತ ಅಂಟಿದ್ದ ತಂತಿಯನ್ನು, ಅಲ್ಲೇ ಇದ್ದ ರಕ್ತಸಿಕ್ತ ಮರದ ಕೊಂಟನ್ನು, ಚಪ್ಪಲಿಯನ್ನು ದಸ್ತಗಿರಿ ಮಾಡದೆ ಬಿಟ್ಟಿರುವುದು ಪೊಲೀಸರನ್ನು ಅನುಮಾನಿಸುವಂತೆ ಮಾಡಿದೆ ಎಂದು ಸ್ಥಳೀಯ ದಲಿತ ಮುಖಂಡರುಗಳು ಆರೋಪಿಸುತ್ತಿದ್ದಾರೆ. ಇದು ನಿಜ ಕೂಡ. ತನಿಖಾಧಿಕಾರಿಗಳಿಗೆ ಇಂತಹ ಸಾಮಾನ್ಯ ಜ್ಞಾನವಿಲ್ಲದಿರುವುದು ಹಲವಾರು ಅನುಮಾನಕ್ಕೆ ಎಡೆಮಾಡಿಕೊಡುತ್ತಿದೆ. ಇನ್ನು ಶವಗಳು ಸಿಕ್ಕಿರುವ ಸ್ಥಳದಲ್ಲಿ ಒಂದು ಲೀಟರಿನಷ್ಟೂ ರಕ್ತ ಸ್ರವಿಸಿಲ್ಲ, ಒಬ್ಬ ವ್ಯಕ್ತಿಯ ತಲೆ ಕಡಿದಾಗ ಸುಮಾರು ನಾಲ್ಕು ಲೀಟರಿನಷ್ಟು ರಕ್ತ ಸ್ರವಿಸಬೇಕು ಅಂದರೆ ಇಲ್ಲಿ ಎಂಟು ಲೀಟರಿನಷ್ಟು ರಕ್ತವಿರಬೇಕಿತ್ತು ಆದರೆ ಅಷ್ಟಿಲ್ಲ. ಜೊತೆಗೆ ದೇಹಗಳು ಒದ್ದಾಡಿರುವ ಕುರುಹುಗಳೇ ಇಲ್ಲ. ಅಂದರೆ ಈ ಇಬ್ಬರು ದಲಿತರನ್ನು ಬೇರೆಡೆ ನರಬಲಿ ನೀಡಿ ಬಾಳೆತೋಟಕ್ಕೆ ತಂದು ಹಾಕಿರುವ ಶಂಕೆ ಬಲವಾಗಿದೆ. ಆದ್ದರಿಂದ ಸರ್ಕಾರ ಡಿ.ಕೆ.ರವಿಯವರ ಸಾವನ್ನು ಸಿಬಿಐಗೆ ವಹಿಸಿದಂತೆ ಈ ಜೋಡಿ ಕೊಲೆಗಳನ್ನೂ ಮತ್ತು ಮೇಲೆ ತಿಳಿಸಿದ ಕೃತಿಕಾದೇವಿ ಮತ್ತು ಮಹೇಶನ ಕೊಲೆಯನ್ನು ಸಿಬಿಐಗೆ ವಹಿಸಬೇಕೆಂದು ದಲಿತ ಸಂಘಟನೆಗಳು ಆಗ್ರಹಿಸುತ್ತಿವೆ. ಡಿ.ಕೆ.ರವಿಯವರಿಗೆ ನ್ಯಾಯ ಸಿಗಲು ಸವರ್ಣೀಯ ಸಂಘಟನೆಗಳೊಂದಿಗೆ ಕೈ ಜೋಡಿಸಿದ್ದ ದಲಿತ ಸಂಘಟನೆಗಳು ಈ ಮೇಲಿನ ಮೂರು ಕೊಲೆ ಪ್ರಕರಣಗಳನ್ನು ಸಿಬಿಐಗೆ ನೀಡಲು ಸವರ್ಣೀಯ ಸಂಘಟನೆಗಳು ದಲಿತರಿಗೆ ಬೆಂಬಲ ನೀಡಬೇಕೆಂದು ಮನವಿ ಮಾಡಿವೆ. ಜಾತಿಯನ್ನೇ ಮೈದಳೆದು ನಿಂತಿರುವ ನಮ್ಮ ದೇಶದ ಜನತೆ ಇದಕ್ಕೆ ಸ್ಪಂದಿಸುತ್ತಾರಾ ನೋಡಬೇಕು.

ಒಟ್ಟಾರೆ ಜಾತಿಯೆಂಬ ಕ್ರೌರ್ಯ ಚಾಮರಾಜನಗರ ಜಿಲ್ಲೆಯಲ್ಲಿ ಇಷ್ಟೊಂದು ತಾಂಡವವಾಡಿದ್ದರೂ ನಮ್ಮ ಮಾಧ್ಯಮಗಳು, ಸರ್ಕಾರ, ಜನಪ್ರತಿನಿಧಿಗಳು ಏನೂ ಆಗಿಲ್ಲವೆಂಬಂತೆ ಇರುವುದು ನಿಜಕ್ಕೂ ಆಘಾತಕರ ಬೆಳವಣಿಗೆ. ಇದಕ್ಕೆ ಮುಂದೊಂದು ದಿನ ಎಲ್ಲರೂ ತಕ್ಕ ಪಾಠ ಕಲಿಯುವ ಕಾಲ ಬರುತ್ತದೆ ಎಂಬ ನಂಬಿಕೆ ದಲಿತ ಸಂಘಟನೆಗಳಿಗಿದೆ.

■ ವಿಕಾಸ ಆರ್ ಮೌರ್ಯ

10 ಸಾವಿರ ಕೋಟಿ ಗುಳುಂ:

ಇದು ಬಿಜೆಪಿ ಬೆಂಗಳೂರುದ್ಧಾರ!



ಕಠಾರಿಯಾ



ಬಿಬಿಎಂಪಿ ಕಚೇರಿ

ಒಂದೇ ಕಾಮಗಾರಿಗೆ ಎರಡೆರಡು ಬಿಲ್ಲು, ಕಾಟಾಚಾರದ ಮಂಜೂರಾತಿ ಕೂಡ ಇಲ್ಲದೆ ಕಳ್ಳ ಕಾಮಗಾರಿಗಳು, ಯಾವ ಕಾಮಗಾರಿಯನ್ನೂ ನಡೆಸದೇ ಬಿಲ್ಲು ಮಂಜೂರಾದ ಕೋಟಿಗಟ್ಟಲೆ ಬಿಲ್ಲಿಗೆ ದಾಖಲೆಗಳೇ ನಾಪತ್ತೆ ಇನ್ನೂ ಕೆಲ ದಾಖಲೆಗಳೇ ಬೋಗಸ್ಸು ಮತ್ತು ಮಂಡಿಸಿದ ಬಜೆಟ್ಟುಗಳೇ ಕಾನೂನುಬಾಹಿರ ಮತ್ತು ಅಕ್ರಮ...!

ಇದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅರ್ಥಾತ್ ಬಿಬಿಎಂಪಿಯಲ್ಲಿ ಬಿಜೆಪಿ ಕಳೆದೆಂಟು ವರ್ಷಗಳಿಂದ ನಡೆಸಿದ ನಗರೋದ್ಧಾರದ ಕೆಲ ಸ್ಯಾಂಪಲ್ಲುಗಳಷ್ಟೆ. ನಿಷ್ಠಾವಂತ ಐಎಎಸ್ ಅಧಿಕಾರಿ ರಾಜೇಂದ್ರಕುಮಾರ್ ಕಠಾರಿಯಾ ವರದಿಯ ಆಧಾರದ ಮೇರೆಗೆ ಸರ್ಕಾರ ಪಾಲಿಕೆಯನ್ನು ಬರಖಾಸ್ತುಗೊಳಿಸಿದೆ. ಅದರ ವಿರುದ್ಧ ಬಿಜೆಪಿ ನಾಯಕ ಆರ್. ಅಶೋಕ್ ಸೇರಿದಂತೆ ಜೆಡಿಎಸ್ ನಾಯಕ ಕುಮಾರಸ್ವಾಮಿ ಕೂಡ ಕಠಾರಿಯಾ ವರದಿ ಬಗ್ಗೆ ಕಿಡಿಕಾರಿದ್ದಾರೆ. 2008ನೇ ಸಾಲಿನಿಂದ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವತನಕ ಅಂದರೆ 2013ರ ವರೆಗೆ ಬೆಂಗಳೂರು ಪಾಲಿಕೆಯನ್ನಾಳಿದ್ದು ಬಿಜೆಪಿ.

ದೇಶದ ಸಿಲಿಕಾನ್ ರಾಜಧಾನಿಯಾಗಿದ್ದ ಬೆಂಗಳೂರನ್ನು ವಿಶ್ವದ ಕಸದತೊಟ್ಟಿಯೆಂಬ ಕುಖ್ಯಾತಿಗೆ ನೂಕಿದ ಈ ಅವಧಿಯಲ್ಲೇ ಘಟಾನುಘಟಿ ಬಿಜೆಪಿ ನಾಯಕರುಗಳು ಮೇಯರ್ ಪಟ್ಟಕ್ಕೇರಿದರು. ಬಿಜೆಪಿ ನಾಯಕ ಆರ್. ಅಶೋಕ್ ಅಕ್ಷರಶಃ ಬೆಂಗಳೂರಿನ ಏಕಚಕ್ರಾಧಿಪತ್ಯದಂತೆ ಮೆರೆದ ಕಾಲವಿದು. ಬಹುಶಃ ಈ ಅವಧಿಯಲ್ಲಿ ನಡೆದ ಹಗರಣಗಳ ಕುರಿತಂತೆ ಬರೆಯದ ಪತ್ರಿಕೆಗಳಿಲ್ಲ, ಪಾಲಿಕೆ ದುರಾಡಳಿತದ ಕುರಿತಂತೆ ಸುದ್ದಿ ಬಾರದ ದಿನಗಳೂ ಇರಲಿಕ್ಕಿಲ್ಲ. ಈ ಬಗ್ಗೆ ನಡೆದ ಲೋಕಾಯುಕ್ತ ತನಿಖೆಗಳು, ಕೋರ್ಟ್ ಆದೇಶಗಳು, ಸಿಎಜಿ ವಾರ್ಷಿಕ ವರದಿಗಳು, ಪಾಲಿಕೆಯ ಆಡಿಟ್ ವರದಿ ಮತ್ತು ಟಿವಿಸಿಸಿಯ ತನಿಖಾ ವರದಿಗಳೆಲ್ಲವನ್ನೂ ಸಮರ್ಥಿಸುವಂತೆ ನಡೆದದ್ದು ರಾಜೇಂದ್ರಕುಮಾರ್ ಕಠಾರಿಯಾ ಸಮಿತಿಯ ವರದಿ.

ಸದ್ಯ ರಾಜ್ಯ ಸಾರಿಗೆ ಸಂಸ್ಥೆಯ ಮುಖ್ಯಸ್ಥರಾಗಿರುವ ರಾಜೇಂದ್ರಕುಮಾರ್ ಕಠಾರಿಯಾ ಕರ್ನಾಟಕ ಕಂಡ ದಕ್ಷ ಮತ್ತು ನಿಷ್ಠ ಅಧಿಕಾರಿಗಳಲ್ಲೊಬ್ಬರು. ಬಿಬಿಎಂಪಿ ಎಕ್ಕುಟ್ಟು ನಾಶವಾದ ರೀತಿ ಕಂಡೇ ಸಿದ್ದು ಸರ್ಕಾರ ಅಕ್ರಮಗಳ ಕುರಿತಂತೆ ವಿಶೇಷ ತನಿಖೆಗೆ ಮುಂದಾಯಿತು. 2015ರ ಫೆಬ್ರವರಿ 19ರಂದು ಕಠಾರಿಯಾ ಜೊತೆ ರಾಜ್ಯ ಖಜಾನೆಯ ಹಿರಿಯ ಅಧಿಕಾರಿ ಶಿವರುದ್ರಪ್ಪನವರನ್ನೂ ಜೊತೆ ಮಾಡಿ ತನಿಖೆಯ ಆದೇಶ ಹೊರಡಿಸಿತ್ತು, ಬೆಂಗಳೂರಿನ 19 ವಾರ್ಡುಗಳು ಸೇರಿದಂತೆ ರಾಜಧಾನಿಯ 28 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬೆಂಗಳೂರಿನ ಉದ್ಧಾರದ ಹೆಸರಲ್ಲಿ ಬಿಜೆಪಿ ನಾಯಕರು ನಡೆಸಿದ್ದು 10 ಸಾವಿರ ಕೋಟಿಗೂ ಅಧಿಕ ಮೊತ್ತದ ಹಗಲುದರೋಡೆ!

ಪಾಲಿಕೆ ಕಳ್ಳರ ಕೈಚಳಕದ ಕೆಲ ಸ್ಯಾಂಪಲ್ಲುಗಳು

ಏನೆಲ್ಲಾ ಸೋರಿಕೆ ಹೇಗೆಲ್ಲಾ ಕಬಳಿಕೆ?

ಕಠಾರಿಯಾ ವರದಿಯಲ್ಲಿ ಬಯಲಾದ ಬಿಬಿಎಂಪಿ ಹಗರಣಗಳ ಸಂಖ್ಯೆ ಆರು ಸಾವಿರಕ್ಕೂ ಅಧಿಕ. ಅವುಗಳ ಕೆಲ ಸ್ಯಾಂಪಲ್ಲುಗಳು ಈ ರೀತಿ ಇವೆ.


* ನಿಗದಿತ ಅವಧಿಯಲ್ಲಿ ಬಜೆಟ್ ಮಂಡನೆಯಲ್ಲೇ ವೈಫಲ್ಯ. 2008ರಿಂದ 2011ರವರೆಗೆ ಮಂಡನೆಯಾದ ಬಜೆಟ್ಟಗಳೆಲ್ಲವೂ ಅಕ್ರಮ.
* ಪಾಲಿಕೆಯ ಆದಾಯಕ್ಕೂ, ಬಜೆಟ್ಟಿನ ಮೊತ್ತಕ್ಕೂ ಅಜಗಜಾಂತರದ ವ್ಯತ್ಯಾಸ. ಅಂದರೆ ಮೇಯರ್‌ಗಳು ಮಂಡಿಸಿದ ಬಜೆಟ್ಟೇ ಮಹಾ ಮೋಸ!
* ಕಾಮಗಾರಿಗಳ ವೆಚ್ಚವನ್ನು ಬೇಕಾಬಿಟ್ಟಿ ಏರಿಸಲಾಯಿತಾದರೂ ಆದಾಯದಲ್ಲಿ ಮಾತ್ರ ವರ್ಷದಿಂದ ವರ್ಷಕ್ಕೆ ಕುಂಠಿತ. 2008-09 ರಲ್ಲಿ ಹಿಂದಿನ ಸಾಲಿಗಿಂತ 566.98 ಕೋಟಿ ಏರಿಕೆಯಿತ್ತು, ಆದರೆ 2010-11ನೇ ಸಾಲಿಗದು 301.59 ಕೋಟಿಗಿಳಿಯಿತು. ಆದರೆ ಖರ್ಚುವೆಚ್ಚದಲ್ಲಿ ಮಾತ್ರ 2009-09ಕ್ಕೆ 608.73 ಕೋಟಿಯಷ್ಟು ಏರಿಕೆಯಾಯಿತು. 2010-11ರಲ್ಲಿ ಅದು 111.63 ಕೋಟಿಗೆ ಏರಿತು.
* 2008-09ರಲ್ಲಿ ಆಸ್ತಿ ತೆರಿಗೆ ಸಂಗ್ರಹಣೆ ಶೇ. 79ರಿಂದ 73ಕ್ಕೆ ಕುಸಿಯಿತು. ಹಿಂದಿನ ಸಂಗ್ರಹಣೆಯ ಪ್ರಮಾಣಕ್ಕೆ ಹೋಲಿಸಿದರೆ 2008-09ರಿಂದ ಪಾಲಿಕೆಯ ಆಸ್ತಿ ತೆರಿಗೆ ಪ್ರಮಾಣದಲ್ಲಿ ಏಕಾಏಕಿ ಶೇ. 28ರಷ್ಟು ಇಳಿಕೆಯಾಗಿತ್ತು.
* ಇದೀ ಬಿಬಿಎಂಪಿಯ ಯಾರೇ ಒಬ್ಬ ಕಂದಾಯ ಅಧಿಕಾರಿ (ARO) ಯ ಬಳಿಯಾಗಲಿ ಪಾಲಿಕೆಯ ಕೇಂದ್ರ ಕಚೇರಿಯಲ್ಲಾಗಲಿ ಆಸ್ತಿ ತೆರಿಗೆಯ ಸಂಗ್ರಹಣೆ ಮತ್ತು ಹಿಂದಿನ ವರ್ಷಗಳ ಲೆಕ್ಕದ ಕುರಿತಂತೆ ಯಾವುದೇ ದಾಖಲೆಗಳಿರಲಿಲ್ಲ.
* ಪಾಲಿಕೆಯ ಬ್ಯಾಂಕ್ ಅಕೌಂಟುಗಳು ಮತ್ತು ಠೇವಣಿಯ ಕುರಿತಂತೆ ಲೆಕ್ಕದ ಪುಸ್ತಕವೇ ನಾಪತ್ತೆಯಾಗಿತ್ತು. ಪಾಲಿಕೆಯ ಲೆಕ್ಕಾಧಿಕಾರಿಗಳು ನೀಡುವ ವಾರ್ಷಿಕ ವರದಿಗಳೂ ನಂಬಲರ್ಹವಾಗಿರಲಿಲ್ಲ.
* ಆಯಾ ವಲಯಗಳಲ್ಲಿ ಸಂಗ್ರಹವಾಗುವ ತೆರಿಗೆಯನ್ನು ಕೇಂದ್ರ ಖಾತೆಗೆ ರವಾನಿಸುವ ವ್ಯವಸ್ಥೆಯೇ ಇರಲಿಲ್ಲ. ಸರಿಸುಮಾರು 106 ಬ್ಯಾಂಕು ಖಾತೆಗಳಲ್ಲಿ ಜಮೆಯಾಗಿದ್ದ 1065 ಕೋಟಿ ತೆರಿಗೆ ದುಡ್ಡಿನ ಲೆಕ್ಕವನ್ನೇ ಇಟ್ಟಿಲ್ಲ. ಈ ಬಗ್ಗೆ ಯಾರಲ್ಲೂ ಮಾಹಿತಿಯಿರಲಿಲ್ಲ.
* ಗುತ್ತಿಗೆದಾರರಿಗೆ ನೀಡಬೇಕಿದ್ದ 2613 ಕೋಟಿ ಬಿಲ್ಲಿಗೆ 'ಹುಂಡಿ ವ್ಯವಸ್ಥೆ' ಮತ್ತು ಬಾಕಿ ಬಿಲ್ಲಿನ ಮೊತ್ತವಾದ 1863.57 ಕೋಟಿಗೆ ಹುಂಡಿ ಸಿಸ್ಟಂನಿಂದಾಗಿಯೇ ಬ್ಯಾಂಕ್ ಬಡ್ಡಿಯೆಂದು ವರ್ಷಕ್ಕೆ 23.33 ಕೋಟಿಯ ಅಧಿಕ ಹೊರೆ ಬೀಳುತ್ತಿತ್ತು.


ಇದು ಕಠಾರಿಯಾ ವರದಿಯಲ್ಲಿ ಪತ್ತೆಯಾದ ಪಾಲಿಕೆ ಭ್ರಷ್ಟಾಚಾರದ ಕೆಲ ಸ್ಯಾಂಪಲ್ಲುಗಳಷ್ಟೇ.

ಬೋಗಸ್ ಬಜೆಟ್!


ಊರು ಕೊಳ್ಳೇ ಹೋದ ರೀತಿಯನ್ನು ಆಮೂಲಾಗ್ರ ತನಿಖೆ ನಡೆಸಿದ್ದಾರೆ ಕಠಾರಿಯಾ. ಅದು ಕೇವಲ ಅವರೊಬ್ಬರೇ ಪತ್ತೆ ಹಚ್ಚಿದ್ದಾಗಿರಲಿಲ್ಲ, ಈಗಾಗಲೇ ಲೋಕಾಯುಕ್ತರು ನಡೆಸಿದ್ದ ತನಿಖೆ, ಸಿಐ… ನಡೆಸಿದ ತನಿಖೆ, ಸಿಎಜಿ ಅಂದರೆ Comptroller and Auditor General ನೀಡಿದ ಆಡಿಟ್ ರಿಪೋರ್ಟ್, ಬಿಬಿಎಂಪಿಯದ್ದೇ TVCC ಸಮಿತಿ ನಡೆಸಿದ ತನಿಖೆ ಇತ್ಯಾದಿಗಳೆಲ್ಲವನ್ನೂ ಆಧಾರವಾಗಿಟ್ಟುಕೊಂಡೇ ಕಠಾರಿಯಾ ಕಮಿಟಿ ತನಿಖೆಗಿಳಿದಿತ್ತು, ಸದ್ಯ ಕಠಾರಿಯಾ ವರದಿಯನ್ನು ಸರ್ಕಾರವಿನ್ನೂ ಬಹಿರಂಗಪಡಿಸಿಲ್ಲ, ಆದರೆ ಕಠಾರಿಯಾ ವರದಿಯನ್ನು ಆಧರಿಸಿಯೇ 2015ರ ಮಾರ್ಚ್ 18ರಂದು ಬಿಬಿಎಂಪಿಯ ಎಲ್ಲಾ ಕೌನ್ಸಿಲರ್‌ಗಳು, ಸ್ಥಾಯಿ ಸಮಿತಿ ಅಧ್ಯಕ್ಷರು, ಮೇಯರ್, ಉಪಮೇಯರ್; ಎಲ್ಲರಿಗೂ ಜಾರಿಗೊಳಿಸಿದ ಷೋಕಾಸ್ ನೋಟಿಸಿನಲ್ಲಿ ಸರ್ಕಾರ ತನಿಖೆಯ ಅತೀ ಮುಖ್ಯ ಕರ್ಮಕಾಂಡಗಳನ್ನು ಬಯಲಿಗೆಳೆದಿದೆ.









ಎಸ್.ಕೆ. ನಟರಾಜ್



ವೆಂಕಟೇಶ್ ಮೂರ್ತಿ



ಶಾರದಮ್ಮ



ಕಟ್ಟೆ ಸತ್ಯ



ಶಾಂತಕುಮಾರಿ

ಈ ಪೈಕಿ ಪ್ರಮುಖವಾದದ್ದು ಬಿಜೆಪಿ ...ಯರ್‌ಗಳು ಮಂಡಿಸಿದ್ದ ಬಜೆಟ್ಟುಗಳೇ ಬೋಗಸ್ಸು! ...ಜೆಟ್ ಮಂಡನೆಗೂ ಮುನ್ನ ಸಾರ್ವಜನಿಕರ ...ಾಲನ್ನಾಗಲಿ ನಗರಾಭಿವೃದ್ಧಿ ಸಚಿವಾಲಯದ ...ೋದನೆಯನ್ನಾಗಲಿ ಅಥವಾ ಈ ಬಗ್ಗೆ ...ಗಳಲ್ಲಿ ಸಾರ್ವಜನಿಕ ಪ್ರಕಟಣೆಯನ್ನಾಗಲಿ ...ಡಿಸಿಯೇ ಇರಲಿಲ್ಲ. ಸಾಲದ್ದಕ್ಕೆ ಮಂಡಿಸಿದ ...ಗೆ ಬೇಕಾದಷ್ಟು ಸಂಪನ್ಮೂಲವಾಗಲಿ ...ಾನವಾಗಲಿ ಇರಲೇ ಇಲ್ಲ. ಇದರರ್ಥ ...ಯ ಮೇಯರುಗಳೆಲ್ಲ ಮಂಡಿಸಿದ ಬಜೆಟ್ಟೇ ...ವಾಗಿತ್ತು. 2007ರಿಂದ 2012ರವರೆಗೆ ಅಂದರೆ ... ವರ್ಷದ ಬಿಜೆಪಿ ಬಜೆಟ್ಟನ್ನು ಕೌನ್ಸಿಲ್ ...ುತಿಯನ್ನೇ ಪಡೆಯದೇ ಅಂಗೀಕರಿಸಲಾಗಿತ್ತು! ... ವಲಯಗಳ ಅಗತ್ಯ ವಿವಿಧ ವಾರ್ಡುಗಳ ...ರ್‍ಯ ಯಾವುದನ್ನೂ ಪರಿಶೀಲಿಸದೇ ಕೇವಲ ಬೇಕಾದವರಿಗೆ ಬೇಕಾಬಿಟ್ಟಿ ಅನುದಾನವನ್ನು ...ೂರು ಮಾಡಲಾಗಿತ್ತು. 2009-10ರ ...ಂಪಿಯ ಆಡಿಟ್ ವರದಿಯೊಂದೇ ಸಾವಿರಾರು ...ಿ ರೂಪಾಯಿಗಳ ಹಗರಣಗಳನ್ನು ...ಲಿಗೆಳೆದಿತ್ತು.

2184 ಕೋಟಿ

...ಎಜಿಯ ವರದಿಯೇ ಬಯಲಿಗೆಳೆದಂತೆ 2009- ... ಸಾಲಿನಲ್ಲಿ 2184.18 ಕೋಟಿ ರೂಪಾಯಿಗಳ ...ದ ವರ್ಕ್‌ಕೋಡುಗಳನ್ನು ವಿತರಿಸಲಾಗಿತ್ತಾದರೂ ...ಯಾವುದಕ್ಕೂ ಸರಿಯಾದ ದಾಖಲೆಗಳಿರಲಿಲ್ಲ. ...ಕೋಡ್ ರಿಜಿಸ್ಟರ್‌ಗಳು, ಮಂಜೂರಾತಿ ಆದೇಶ, ...ಧಪಟ್ಟ ಫೈಲುಗಳು ಯಾವುದೂ ಇರಲೇ ಇಲ್ಲ. ... ಬಹುತೇಕ ಕಾಮಗಾರಿಗಳಿಗೆ ಎರಡೆರಡು ಬಾರಿ ... ಪಾವತಿಸಲಾಗಿತ್ತು.

...ಂಗೆ 2184.18 ಕೋಟಿಯ ಅಕ್ರಮ ...ಕೋಡ್‌ಗೆ ಇನ್ನೂ 192.55 ಕೋಟಿ ...ಾಯಿಗಳ ಹೆಚ್ಚುವರಿ ವರ್ಕ್‌ಕೋಡ್ ...ಲಾಯಿತಾದರೂ ಇದಕ್ಕೂ ಯಾವುದೇ ...ಲೆಗಳಿರಲಿಲ್ಲ. ಇದರ ಜೊತೆಗೆ ಸಾಮಾಜಿಕ ...್ಯದ ಹೆಸರಲ್ಲಿ ಅನಗತ್ಯವಾಗಿ 93 ಕಾಮಗಾರಿಗಳ ...ರೆ ಸೃಷ್ಟಿಸಿ ಪಾಲಿಕೆಗೆ 22.42 ಕೋಟಿ ...ಾಯಿಗಳ ಲುಕ್ಸಾನು ಸೃಷ್ಟಿಸಿದ್ದರು. ಇದು ಬಿಜೆಪಿ ...ಯರ್‌ಗಳಾದ ಎಸ್.ಕೆ. ನಟರಾಜ್ ಮತ್ತು ...ಟೇಶ್ ಮೂರ್ತಿ ಸೇರಿಕೊಂಡು ಬೆಂಗಳೂರಿಗೆ ...ದ ಉಪಕಾರದ ಕೆಲ ವೆರೈಟಿಗಳಷ್ಟೆ.


...ಇದೇ ಅವಧಿಯಲ್ಲಿ ದಾಸರಹಳ್ಳಿ, ಶಾಸಕ ...ರಾಜು ಕ್ಷೇತ್ರಕ್ಕೊಂದು 73 ಕಾಮಗಾರಿಗಳ ...ಲ್ಲಿ 1.10 ಕೋಟಿ ರೂಪಾಯಿಯ ...ಕೋಡ್ ವಿತರಿಸಿ ಅದನ್ನು ಯಾವುದೇ ಕ್ರಮ ...ಲ್ಲಿ ಕಾರಣವಿಲ್ಲದೆ ಏಕಾಏಕಿ 11.42 ...ಟಿಗೇರಿಸಲಾಯಿತು. 1.10 ಕೋಟಿಯ ...ಗಾರಿ ಏಕಿ 11.42 ಕೋಟಿಯಾಯಿತೆಂಬ ಬಗ್ಗೆ ...ವುದೇ ಕಾರಣವಿಲ್ಲ ದಾಖಲೆಗಳೂ ಇರಲಿಲ್ಲ. ...ರ್ ಯೋಜನೆಯ ಅಸಿಸ್ಟೆಂಟ್ ಕಂಟ್ರೋಲರ್ ...ಜೂರು ಮಾಡಿದ್ದ 19.90 ಕೋಟಿ ಮತ್ತು ...2 ಕೋಟಿ ಮೊತ್ತದ 35 ಕಾಮಗಾರಿಗಳಿಗೂ ...ಧಿಕಾರಿಗಳ ಅನುಮೋದನೆಯಿರಲಿಲ್ಲ ಮತ್ತು ...ಗಾರಿಯನ್ನೇ ನಡೆಸದೆ ಬಿಲ್ಲು ಹೊಡೆಯಲಾಗಿತ್ತು.

KRIDL ಹೆಸರಲ್ಲಿ


...ಪಾಲಿಕೆ ಆಡಳಿತಾಧಿಕಾರಿಯ ಆದೇಶವನ್ನೇ ಧಿಕ್ಕರಿಸಿ ...36 ಕೋಟಿ ಮೊತ್ತದ ಬಜೆಟ್ ಬಾಹಿರ ...ದ ಕೋಡ್ ವಿತರಿಸಿದ್ದು, ದಾಸರಹಳ್ಳಿ ...ರದಲ್ಲಿ ಯಾವುದೇ ಮಂಜೂರಾತಿ

ದಾಖಲೆಗಳಿಲ್ಲದೆ 49.90 ಲಕ್ಷದ ನಕಲಿ ಬಿಲ್ ಮೊತ್ತ ದೋಚಿದ್ದು, 2008-09ರಲ್ಲಿ 2405.45 ಕೋಟಿ ರೂಪಾಯಿಗಳಷ್ಟಿದ್ದ ವರ್ಕ್‌ಕೋಡ್ ಮೊತ್ತವನ್ನು 2009-10ರ ವರ್ಷಕ್ಕೆ ಏಕಾಏಕಿ ಶೇ. 78ರಷ್ಟು ಹೆಚ್ಚಿಗೆ ಏರಿಸಿದ್ದು ಅಂದರೆ 4279.86


ನಿಗೂಢ ಸಂಗತಿಯೆಂದರೆ ಬೃಹತ್ ಮೊತ್ತದ ಅನೇಕ ಟೆಂಡರ್‌ಗಳಲ್ಲಿ ಕೇವಲ ಇಬ್ಬರೇ ಬಿಡ್ಡುದಾರರಿದ್ದದ್ದು. ಇದರರ್ಥ ಒಬ್ಬನ ಲಾಭಕ್ಕಾಗಿ ಇಡೀ ಟೆಂಡರ್‌ನ ನಾಟಕ ನಡೆಸಲಾಗಿತ್ತು. ಇನ್ನೂ ಕೆಲ ಟೆಂಡರ್‌ಗಳಲ್ಲಿ ಗುತ್ತಿಗೆದಾರನ ವಿವರಗಳೇ ಅಸ್ಪಷ್ಟವಾಗಿತ್ತು. ಪಾಸಾದ




ಅನಂತಕುಮಾರ್




ಆರ್. ಅಶೋಕ್




ವಿಶ್ವನಾಥ್



ಸತೀಶ್ ರೆಡ್ಡಿ



ಮುನಿರಾಜು



ಅಶ್ವತ್ ನಾರಾಯಣ್

ಕೋಟಿಗೇರಿಸಿದ್ದಕ್ಕೂ ಯಾವುದೇ ಕಾರಣವಾಗಲಿ, ದಾಖಲೆಗಳಾಗಲಿ, ಮಂಜೂರಾತಿಯಾಗಲಿ ಇರಲೇ ಇಲ್ಲ!

ಅಂದರೆ ಸರ್ಕಾರ, ಲೋಕಾಯುಕ್ತ, ಕಾಯ್ದೆ ಕಾನೂನು, ಶಿಕ್ಷೆ ಯಾವುದರ ಭಯವಿಲ್ಲದೆ ರಾಜಾರೋಷವಾಗಿ ಪಾಲಿಕೆ ದುಡ್ಡು ದೋಚುವಲ್ಲಿ ಪಾಲಿಕೆಯ ಬಿಜೆಪಿ ಖದೀಮರು ಕಳ್ಳ ಲೆಕ್ಕ ಬರೆದಿದ್ದರು. 2010-11 ರಲ್ಲಿ 800 ಕೋಟಿ ರೂಪಾಯಿಗಳ ಮೊತ್ತದ 3303 ಕಾಮಗಾರಿಗಳನ್ನು ಎಸ್ಟಿಮೇಟ್ ಮಾಡಲಾಯಿತು. ಇದರ ಜೊತೆಗೆ 230 ರಸ್ತೆಗಳ ಉದ್ಧಾರಕ್ಕೆಂದು ಮತ್ತೆ 2013-14ರಲ್ಲಿ 560 ಕೋಟಿ ರೂಪಾಯಿಗಳ ಯೋಜನೆ ರೂಪಿಸಲಾಯಿತು.

ಈ ರೀತಿ ಯಾವುದೇ ಕ್ರಮ ಪಾಲಿಸದೆ, ನಿಯಮಬದ್ಧ ಮಂಜೂರಾತಿಯಿಲ್ಲದೆ ಸೃಷ್ಟಿಸಿದ್ದ ಕಾಮಗಾರಿಗಳನ್ನು ಸಹಜವಾಗೇ ಟೆಂಡರ್ ಕರೆಯಬೇಕಲ್ಲವೇ? ಆದರೆ ವ್ಯವಸ್ಥಿತವಾಗಿ KRIDLಗೆ ವಹಿಸಲಾಯಿತು. ಇದು ಚಾಪೆ ಕೆಳಗೆ ನುಗ್ಗಿ ಪಾಲಿಕೆಗೆ ಕನ್ನ ಹಾಕುವ ಮತ್ತೊಂದು ತಂತ್ರವಷ್ಟೆ. ಟೆಂಡರ್ ಕರೆಯದೆ, ಯಾವುದೇ ಪಾರದರ್ಶಕತೆಯನ್ನೂ ಪಾಲಿಸದೇ ಕೌನ್ಸಿಲರ್‌ಗಳು ತಮ್ಮ ಸಂಬಂಧಿಕರು, ಬೇನಾಮಿಗಳು, ಖದೀಮ ಕಂಟ್ರಾಕ್ಟರ್‌ಗಳ ಹೆಸರಲ್ಲಿ ಬೋಗಸ್ ಬಿಲ್ ದೋಚುವ ಮತ್ತೊಂದು ತಂತ್ರವಾಗಿತ್ತು. ಇದು ಪರೋಕ್ಷವಾಗಿ ಪಿಡಬ್ಲ್ಯೂಡಿ ಆಕ್ಟ್, 1976ರ ಕೆಎಂಸಿ ಕಾಯ್ದೆ ಮತ್ತು KTPP ಆಕ್ಟ್ ಅಂದರೆ ನಗರ ಯೋಜನೆ ಕಾಯ್ದೆಯ ನಿರ್ಲಜ್ಜ ಉಲ್ಲಂಘನೆಯಾಗಿತ್ತು.

ಕಠಾರಿಯಾ ಸಮಿತಿ ಪತ್ತೆ ಹಚ್ಚಿದ ಮತ್ತೊಂದು

ಶೇ. 35ರಷ್ಟು ಟೆಂಡರ್‌ಗಳಲ್ಲಿ ಕೇವಲ ಇಬ್ಬರು ಗುತ್ತಿಗೆದಾರರ ಹೆಸರಿತ್ತು.

ಟೆಂಡರ್ ರಿಗ್ಗಿಂಗ್

2009-10 ನೇ ಸಾಲಿನಲ್ಲಿ ರಾಜರಾಜೇಶ್ವರಿನಗರಕ್ಕೆ ಬಿಜೆಪಿ ಎಮ್ಮೆಲ್ಲೆಯಾಗಿದ್ದ ಶ್ರೀನಿವಾಸ್ ಮೂಗಿನ ನೇರಕ್ಕೆ ನಡೆದದ್ದು ಟೆಂಡರ್ ರಿಗ್ಗಿಂಗ್. ಅಂದರೆ ಬೇಕುಬೇಕಾದವರಿಗೆ ತಲಾ ಐವತ್ತು ಲಕ್ಷದಿಂದ 1 ಕೋಟಿವರೆಗೆ ಕಾಮಗಾರಿಗಳನ್ನು ಮಂಜೂರು ಮಾಡಿ ತದನಂತರ ಟೆಂಡರ್ ನಡೆದಂತೆ ದಾಖಲೆಗಳನ್ನು ಸೃಷ್ಟಿಸಲಾಗಿತ್ತು. ಅಂದರೆ ಬಹುತೇಕ ಟೆಂಡರ್‌ಗಳಲ್ಲಿ ತಾಂತ್ರಿಕ ಅರ್ಹತೆಯ ವಿವರಗಳಿರಬೇಕಾದ ದಾಖಲೆಗಳನ್ನು ಖಾಲಿ ಬಿಡಲಾಗಿತ್ತು. ಇದು ಕೇವಲ ರಾಜರಾಜೇಶ್ವರಿನಗರದ ಕತೆಯಷ್ಟೇ ಅಲ್ಲ, ಬೊಮ್ಮನಹಳ್ಳಿ, ಯಲಹಂಕ, ದಾಸರಹಳ್ಳಿ, ಹೆಬ್ಬಾಳ, ಮಲ್ಲೇಶ್ವರಗಳಲ್ಲೂ ಸಾವಿರ ಕೋಟಿ ಮೊತ್ತದ ಟೆಂಡರ್ ರಿಗ್ಗಿಂಗ್ ನಡೆದಿತ್ತು.

ಇಷ್ಟಲ್ಲದೆ ಒಪ್ಪಂದದ ಕರಾರುಗಳನ್ನೇ ತಿದ್ದಿ ನೂರಾರು ಕೋಟಿಯನ್ನು ದೋಚಲಾಗಿತ್ತು. ಅಂದರೆ ಕಾಮಗಾರಿಯ ಟೆಂಡರ್ ಕುರಿತಂತೆ ಪಾಲಿಕೆ ಮತ್ತು ಗುತ್ತಿಗೆದಾರರ ನಡುವೆ ಏರ್ಪಟ್ಟ ಒಪ್ಪಂದದ ಕರಾರುಗಳನ್ನೇ ತಿದ್ದಲಾಗಿತ್ತು. ಇನ್ನೂ ಕೆಲವೆಡೆ ಕರೆದ ಟೆಂಡರ್, ಕಾಮಗಾರಿಯ ಎಸ್ಟಿಮೇಟ್ ಮತ್ತು ಕಾಮಗಾರಿಯ ವಿಳಾಸವೇ ಒಂದಾದರೆ ಅದಕ್ಕೆ ಪಾಸಾದ ಬಿಲ್ ಮೊತ್ತಕ್ಕೆ ನಡೆದ ಕಾಮಗಾರಿಯೇ ಬೇರೆಯಾಗಿತ್ತು. ಅಂದರೆ ಯಾವುದೋ ಕಾಮಗಾರಿಯ ಹೆಸರಲ್ಲಿ ಇನ್ನೆಲ್ಲೋ ನಡೆಸಿದ ಕಾಮಗಾರಿಯ ದಾಖಲೆ

ಲಗತ್ತಿಸಲಾಗಿತ್ತು. ಟೆಂಡರ್ ಪಾಸಾಗಿದ್ದು ಒಬ್ಬನಿಗಾದರೆ ಬಿಲ್ಲು ಲಪಟಾಯಿಸಿದ್ದು ಮತ್ತೊಬ್ಬ. ಟೆಂಡರ್ ಕರೆಯುವ ಮುನ್ನವೇ ಕಾಮಗಾರಿ ನಡೆಸಿ ತದನಂತರ ಟೆಂಡರ್‌ನ ಕಪಟ ನಾಟಕ. ಇನ್ನೂ ಕೆಲವೆಡೆ ಮುಗಿದ ಕಾಮಗಾರಿಗೆ ತಕ್ಕಂತೆ ಎಸ್ಟಿಮೇಟ್ ಮಾಡಿ ಆ ನಂತರ ದಾಖಲಾತಿಗಳನ್ನು ಸೃಷ್ಟಿಸಿ ಬಿಲ್ಲು ದೋಚಲಾಗಿತ್ತು!

ಸಿಬಿಐ ತನಿಖೆ ಏಕಿಲ್ಲ?

ಇಂಥ ಒಂದಲ್ಲ ಎರಡಲ್ಲ ಡಜನ್ನುಗಟ್ಟಲೇ ಅಕ್ರಮ ಅನಾಚಾರಗಳನ್ನು ಕಠಾರಿಯಾ ಸಮಿತಿ ದಾಖಲೆಗಳ ಸಮೇತ ಬಯಲಿಗೆಳೆದಿದೆ. ಇದಲ್ಲದೆ ಗಾರ್ಬೇಜ್ ಗುತ್ತಿಗೆ, ಕಸ ಸಾಗಾಣಿಕೆಯ ಲಾರಿಗಳ ಅವ್ಯವಸ್ಥೆ ಬೇಕಾಬಿಟ್ಟಿ ಗಾರ್ಬೇಜ್ ನಿರ್ವಹಣೆ ದಂಧೆ, ಜಾಹಿರಾತು ಫ್ಲೆಕ್ಸ್‌ಗಳ ಮಂಜೂರಾತಿ ಹಗರಣ, ತೆರಿಗೆ ಸಂಗ್ರಹಣೆಯಲ್ಲಿ ವಂಚನೆ, ಓಎಫ್‌ಸಿ ಕೇಬಲ್ಲುಗಳ ಪರವಾನಗಿ ಮೋಸ, ಅಕ್ರಮವಾಗಿ ಕೇಬಲ್‌ಗಳ ಕಳ್ಳ ದಂಧೆ, ಎಲ್ಲಿಂದಲೋ ಸಾಲ ಪಡೆದು ಅದನ್ನು ಬ್ಯಾಂಕುಗಳ ಕಮೀಷನ್ ಆಸೆಗೆ ಇನ್ನೆಲ್ಲೋ ಠೇವಣಿಯಿಡುವ ದೋಖಾ, ಹಳೇ ಕಲ್ಲಿಗೆ ಹೊಸಬಿಲ್ಲು ಹಾಕಿ ದೋಚಿದ ನೂರಾರು ಕೋಟಿಯ ಲೆಕ್ಕ, ಪಾರ್ಕುಗಳ ಕಾಮಗಾರಿ ಹೆಸರಲ್ಲಿ ಲಪಟಾಯಿಸಿದ ಮುನ್ನೂರು ಕೋಟಿಯ ಕರ್ಮಕಾಂಡ, ಮರಗಳ ವ್ಯವಸ್ಥಿತ ನಿರ್ವಹಣೆಯ ನೆಪದಲ್ಲಿ ಬೀದಿಬದಿಯ ಸಾಲು ಮರಗಳನ್ನೇ ಕದ್ದು ಮಾರಿಕೊಂಡದ್ದು, ಸಸಿಗಳನ್ನೇ ನೆಡದೆ ಇನ್ನೆಲ್ಲಿಯದೋ ಸಸಿಗಳ ಫೋಟೋ ಹಾಕಿ ದೋಚಿದ ಹಗರಣ- ಹೀಗೆ ಬಿಬಿಎಂಪಿಯ ಮೂವತ್ತಕ್ಕೂ ಅಧಿಕ ಹಗರಣಗಳನ್ನು ಕಠಾರಿಯಾ ಕಮಿಟಿ ಪತ್ತೆ ಹಚ್ಚಿದೆ.

ಯಡಿಯೂರಪ್ಪ ಮುಖ್ಯಮಂತ್ರಿಯಾದ ನಂತರ ಅಂದರೆ ಬಿಜೆಪಿ ಅಧಿಕಾರಕ್ಕೆ ಬಂದು ಪ್ರಾರಂಭದ ಮೂರು ವರ್ಷಗಳಲ್ಲಿ ಆಡಳಿತಾಧಿಕಾರಿಯ ಮೂಲಕ ದೋಚಿದ್ದು ಆ ನಂತರ ಚುನಾವಣೆ ನಡೆದು ಬಿಜೆಪಿಯೇ ಪಾಲಿಕೆಯನ್ನು ಹಿಡಿದ ನಂತರ ಇವತ್ತಿನತನಕ ಸ್ಥಾಯಿ ಸಮಿತಿ ಅಧ್ಯಕ್ಷರು, ಮೇಯರ್-ಉಪಮೇಯರ್‌ಗಳು, ಅದರ ವಿವಿಧ ಕೌನ್ಸಿಲರ್‌ಗಳೆಲ್ಲ ಸೇರಿಕೊಂಡು ದೋಚಿದ ಒಟ್ಟು ಮೊತ್ತವೆಷ್ಟು ಗೊತ್ತೆ?

ಹತ್ತು ಸಾವಿರದ ಮುನ್ನೂರ ಐವತ್ತೆಂಟು ಕೋಟಿ ರೂಪಾಯಿಗಳು!


ಪಾಲಿಕೆಯ ಅತ್ಯಮೂಲ್ಯ ಆಸ್ತಿಗಳನ್ನು ಬ್ಯಾಂಕುಗಳಿಗೆ ಅಡವಿಟ್ಟಾಯಿತು. ಪುರಭವನ, ಕೆ.ಆರ್. ಮಾರುಕಟ್ಟೆ, ರಸೆಲ್ ಮಾರುಕಟ್ಟೆನಂಥ ಐತಿಹಾಸಿಕ ಕಟ್ಟಡಗಳನ್ನೂ ಸಾಲಕ್ಕೆ ಒತ್ತೆ ಇಟ್ಟಾಯಿತು. ಸದ್ಯ ಬಾಕಿಯಿರುವ ಪಾಲಿಕೆಯ ಬಾಕಿ ಬಿಲ್ಲಿನ ಮೊತ್ತವೇ ನಾಲ್ಕು ಸಾವಿರ ಕೋಟಿಗೂ ಅಧಿಕ. ಮಾಡಿದ ಕಾಮಗಾರಿಯ ಬಿಲ್ಲು ಪಡೆಯಲು ಲಂಚ ಕೊಡಲಾಗದೆ ಗುತ್ತಿಗೆದಾರರೇ ಆತ್ಮಹತ್ಯೆ ಮಾಡಿಕೊಂಡಾಯಿತು. ಪಾಲಿಕೆ ಸೂಪರ್ ಸೀಡ್ ಮಾಡಿದ್ದನ್ನು ಪ್ರತಿಭಟಿಸಿದಾಗ ಈಗ ಬಿಜೆಪಿ ನಾಯಕರು ರೋಡ್‌ಷೋ ಮಾಡುತ್ತಿದ್ದಾರೆ ನಿಜ. ವಿಧಾನಸಭೆ ಅಧಿವೇಶನದಲ್ಲಿ ನಾಯಕ ಅಶೋಕ್ ಎದೆ ಬಡಿದುಕೊಂಡಿದ್ದು ಸಹಜವೆ.


ಆದರೆ ದೋಚಿದ ಹತ್ತು ಸಾವಿರ ಕೋಟಿ ಏನಾಯಿತು? ಇದಕ್ಕೆ ಹೊಣೆ ಯಾರು? ಜೈಲಿಗೆ ಹೋಗಬೇಕಾದವರ್‍ಯಾರು? ಡಿ.ಕೆ. ರವಿ ಸಾವಿಗೆ ಸಿಬಿಐ ತನಿಖೆಯಾಗಬೇಕೆಂಬ ಬಿಜೆಪಿ ವೀರಾವೇಶ! ಪಾಲಿಕೆಯ 10 ಸಾವಿರ ಕೋಟಿಯ ವಿಷಯದಲ್ಲಿ ಮೀನಾಮೇಷವೇಕೆ?

ಇದು ಕೂಡ ಸಿಬಿಐ ತನಿಖೆಯಾಗಬೇಕಲ್ಲವೇ?


■ ರಾ. ಸೋಮನಾಥ್

ಸಿಗಂದೂರು ದೇವಾಲಯ ಸ್ವಾಹಾಕ್ಕೆ ಸಗಣಿ ಸ್ವಾಮಿ ಸ್ಕೆಚ್!


ಸಿಗಂದೂರು ಚೌಡೇಶ್ವರಿ ದೇವಾಲಯ


ರಾಘು

ಸೋಗಲಾಡಿ ಸ್ವಾಮಿ ರಾಘವೇಶ್ವರ ಭಾರತಿ ಸ್ವಾಹಾ ಶೈಲಿಯೊಂದನ್ನು ತುಂಬ ನಾಜೂಕಾಗಿ ರೂಢಿಸಿಕೊಂಡಿದ್ದಾನೆ. ಯಾರನ್ನಾದರೂ ಅಥವಾ ಏನನ್ನಾದರೂ ಭೋಗಿಸಬೇಕೆಂಬ ತೀಟೆ ಆತನಿಗೆ ಶುರುವಾಯ್ತೆಂದರೆ ಸಾಕು; "ಅದು ರಾಮನಿಗೆ ಬೇಕಾಗಿದೆ.... ಅದು ರಾಮನ ಇಚ್ಛೆ..." ಎಂದು ರಾಮಚಂದ್ರಾಪುರ ಮಠದ ಮೂರ್ಖ ಅನುಯಾಯಿಗಳ ಮುಂದೆ ಹಲುಬುತ್ತಾನೆ. ರಾಮನಿಗೆ ಏನೋ ಬೇಕಾಗಿದೆ ಎಂದು ರಾಘು ಹೇಳಿದನೆಂದರೆ, ಅದು ಆತನಿಗೆ ಅರ್ಜೆಂಟಾಗಿ ಅನುಭವಿಸಬೇಕಾಗಿದೆ ಎಂದು ಮಠಾಂಧರಿಗೆ ಅರ್ಥವಾಗಿ ಹೋಗುತ್ತದೆ! ಗುರುವಿನ ಭೋಗ-ಭಾಗ್ಯ


ಶೇಷಗಿರಿ ಭಟ್ಟ

ಕಣ್ಣು-ಬಾಯಿ ಬಿಟ್ಟುಕೊಂಡು ಶಿಷ್ಯ ಕೋಟಿ ನೋಡುವಂತಾಗುತ್ತದೆ.

ಇಂಥ ಆಧ್ಯಾತ್ಮಿಕ ತೆವಲುಗಾರ ರಾಘು ಮಾಣಿಯ ಕಣ್ಣೀಗ ಕೋಟ್ಯಂತರ ರೂ. ಆದಾಯ ಹಾಗು ಇನ್ನೊಂದಿಷ್ಟು ಕೋಟಿಗಳ ಸ್ಥಿರ-ಚರ ಆಸ್ತಿಯ ಸಿಗಂದೂರು ಚೌಡೇಶ್ವರಿ ದೇವಸ್ಥಾನ ಮೇಲೆ ಬಿದ್ದಿದೆ! ಸಿಗಂದೂರು, ಗೋಕರ್ಣ ದೇಗುಲಗಳಿಗೆ ಬರುವಷ್ಟು ಭಕ್ತರು ರಾಘುನ ರಾಮಚಂದ್ರಾಪುರ ಮಠಕ್ಕಾಗಲಿ, ಅದರ ನಾಲ್ಕಾರು ಶಾಖಾ ಮಠಗಳಿಗಾಗಲಿ ಹೋಗುತ್ತಿಲ್ಲ. ಹೀಗಾಗಿ ದುಡ್ಡಿನ ದುರಾಸೆಯ ರಾಘುಗೆ ನಿರೀಕ್ಷಿತ ಕಾಸು ಕೈಗೆಟುಕುತ್ತಿಲ್ಲ. ಗೋಕರ್ಣ ದೇವಸ್ಥಾನ ಬಿಜೆಪಿಯ ಅಂದಿನ ಆಳುವ ಖೂಳರ ಕೃಪೆಯಿಂದ ವಶಪಡಿಸಿಕೊಂಡರೂ ಐಷಾರಾಮಿ ಸನ್ಯಾಸದ ರಾಘುನ ಜೋಳಿಗೆ ಮಾತ್ರ ತುಂಬಲೇ ಇಲ್ಲ! ಈಗಂತೂ ರೇಪ್ ಕೇಸ್‌ನಲ್ಲಿ ಸಿಕ್ಕಿಬಿದ್ದಿರುವ ಆತ ಅದನ್ನು ನಿಭಾಯಿಸಿ ಪಾಪರೆದ್ದು ಹೋಗಿದ್ದಾನೆ. ಕೋರ್ಟು-ಕಚೇರಿ-ವಕೀಲರು-ಪೊಲೀಸರು-ಮಾಧ್ಯಮದವರನ್ನೆಲ್ಲ ಸಂಭಾಳಿಸಲು ಮಠದ ಬೊಕ್ಕಸ ಖಾಲಿ ಮಾಡಿಬಿಟ್ಟಿದ್ದಾನೆ.

ಚೌಡೇಶ್ವರಿ ಯಾನೆ ಸಿಗಂದೂರೇಶ್ವರಿ

ಲಿಂಗನಮಕ್ಕಿ ಅಣೆಕಟ್ಟು ಕಟ್ಟಿದಾಗ ಹಲವು ಊರು-ಕೇರಿ ಮುಳುಗಡೆ ಆಗಿದ್ದವು. ಅದರಲ್ಲಿ ಸಾಗರ ತಾಲ್ಲೂಕಿನ ಹೀರೇಗಳಲೆ ಎಂಬ ಕುಗ್ರಾಮವೂ ಒಂದು. ಈ ಊರಿನ ದೀವರ ಕುಟುಂಬದ ತೋಟದ ಮೂಲೆಯಲ್ಲಿ ಚೌಡೇಶ್ವರಿ ಕಲ್ಲಿತ್ತು. ರಾಮಪ್ಪ ಮತ್ತು ಮಂಜಪ್ಪ ಎಂಬ ದೀವರ ಪರಿವಾರ ಡ್ಯಾಮಿಗಾಗಿ ಊರು ಬಿಡಬೇಕಾಗಿ ಬಂದಾಗ ತಮ್ಮ ಆರಾಧ್ಯ ದೇವತೆಯಾದ ಚೌಡೇಶ್ವರಿಯನ್ನು ತಮ್ಮೊಂದಿಗೆ ಹೊತ್ತೆದರು. ಶರಾವತಿ ಹಿನ್ನೀರಿನ ನಿಸರ್ಗ ರಮಣೀಯ ಸಿಗಂದೂರಿನಲ್ಲಿ ನೆಲೆ ನಿಂತ ರಾಮಪ್ಪ ಪರಿವಾರ ಅಲ್ಲೇ ತಮ್ಮ ದೈವವನ್ನೂ ಪ್ರತಿಷ್ಠಾಪಿಸಿಕೊಂಡಿತು.

ಚೌಡೇಶ್ವರಿಯ ಒಕ್ಕಲು ಕುಟುಂಬಗಳು ಲಿಂಗನಮಕ್ಕಿ ಡ್ಯಾಂನಿಂದಾಗಿ ಸಾಗರ-ಸೊರಬ-ತೀರ್ಥಹಳ್ಳಿ-ಹೊಸನಗರದಲ್ಲಿ ಹಂಚಿಹೋಗಿದ್ದರು. ಈ ಚೌಡೇಶ್ವರಿ ಭಕ್ತರೆಲ್ಲ ತಮ್ಮ ದೈವವನ್ನು ಸಿಗಂದೂರಿನಲ್ಲಿ ಭದ್ರಗೊಳಿಸಿ ಆರಾಧನೆ ಮಾಡುತ್ತ ಬಂದರು. ಕ್ರಮೇಣ ಈ ಶಕ್ತಿ ದೇವತೆಯ ಮಹಿಮೆ ಹೆಚ್ಚಾಯಿತು. ದೀವರೇತರ ಜಾತಿಯ ಜನಗಳೂ ಭಕ್ತರಾದರು. ಇತ್ತೀಚಿನ ದಿನಗಳಲ್ಲಂತೂ ಚೌಡೇಶ್ವರಿ ಸಿಗಂದೂರೇಶ್ವರಿಯಾಗಿ ಲಕ್ಷಾಂತರ ಮಂದಿಯನ್ನು ಸೆಳೆವ ಧಾರ್ಮಿಕ ಕೇಂದ್ರವಾಗಿ ಹೋಗಿದೆ.

ಕೋಟಿ ಕೋಟಿ ಆದಾಯ


ಸಿಗಂದೂರೇಶ್ವರಿ ಯಾನೆ ಚೌಡೇಶ್ವರಿ ದೇಗುಲಕ್ಕೆ ಜನಾಕರ್ಷಣೆಯ ಚುಂಬಕ ಶಕ್ತಿ ಬರಲು ಧಾರ್ಮಿಕ ಪ್ರತೀತಿಯ ಜತೆಗೆ ಆ ಊರಿನ ಪ್ರಾಕೃತಿಕ ಸೊಬಗೂ ಕಾರಣ. ಶರಾವತಿ ಹಿನ್ನೀರಿನ ದಂಡೆ ಮೇಲಿರುವ ಸಿಗಂದೂರಿಗೆ ಲಾಂಚ್ ಮೇಲೆ ಬರಬೇಕು. ಸುತ್ತ ದಟ್ಟವಾದ ನಿತ್ಯ ಹರಿದ್ವರ್ಣ ಕಾಡು. ಹರಿವ ಶರಾವತಿಯ ಜುಳುಜುಳು ನಿನಾದ. ಒಂಥರಾ ಸ್ವರ್ಗದಂಥ ಸೀಮೆ ಈ ಸಿಗಂದೂರು ಏರಿಯಾ. ಹೀಗಾಗಿ ಸಿಗಂದೂರಿಗೆ ದೂರ-ದೂರದಿಂದ ಜನರು ಹರಿದುಬರುತ್ತಿದ್ದಾರೆ. ಬಂದವರು ಮನಸೋ ಇಚ್ಛೆ ಹರಕೆ-ಕಾಣಿಕೆ ಚೌಡೇಶ್ವರಿಗೆ ಅರ್ಪಿಸುತ್ತಿದ್ದಾರೆ.

ಅದ್ಯಾವ ಪರಿ ಹಣ ಚೌಡೇಶ್ವರಿ ಸನ್ನಿಧಿಯಲ್ಲಿ ಸಂಗ್ರಹವಾಗುತ್ತಿದೆಯೆಂದರೆ, ದೇವಸ್ಥಾನದ ಏಕಮೇವ ಧರ್ಮದರ್ಶಿ ರಾಮಪ್ಪ ಮತ್ತು ಅರ್ಚಕ ಶೇಷಗಿರಿ ಭಟ್ಟ ಎಂಬ ತಿರುಬೋಕಿಗಳು ಕೋಟ್ಯಾಧೀಶರಾಗಿ ಮೆರೆಯುತ್ತಿದ್ದಾರೆ. ಐಷಾರಾಮಿ ಕಾರಲ್ಲಿ ಓಡಾಡುತ್ತಿದ್ದಾರೆ; ವೈಭವದ ಜೀವನ ನಡೆಸುತ್ತಿದ್ದಾರೆ. ನೂರಾರು ಕೋಟಿ ಆದಾಯದ ದೇವಸ್ಥಾನಕ್ಕಾಗಿ ರಾಮಪ್ಪ ಮತ್ತವನ ದಾಯಾದಿ ಸೋದರ ಮಂಜಪ್ಪರ ನಡುವೆ ವ್ಯಾಜ್ಯವೊಂದಿದೆ. ಆದರೆ ಚೌಡೇಶ್ವರಿಯನ್ನು ಕಬ್ಜಾ ಮಾಡಿಕೊಂಡಿರುವ ರಾಮಪ್ಪನಿಗೆ ಸ್ವ-ಜಾತಿ ಈಡಿಗರ ಪ್ರಭಾವಿ ರಾಜಕಾರಣಿಗಳ ಸಖ್ಯವೂ ಕುದುರಿದೆ. ಅವರಿಗೆಲ್ಲಾ ಕೋಟ್ಯಾಂತರ ಎಲೆಕ್ಷನ್ ಫಂಡ್ ಕೊಡುವ ರಾಮಪ್ಪನನ್ನು ಸಾಧಾರಣಕ್ಕೆ ಯಾರಿಂದಲೂ ಕದಲಿಸಲು ಸಾಧ್ಯವಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ.

ಅವನು ದೀವರವ ಇವನು ಹವ್ಯಕ

ದೇವಸ್ಥಾನ ಇರುವುದು ಕೆಪಿಸಿ (ಕರ್ನಾಟಕ ಪವರ್ ಕಾರ್ಪೊರೇಷನ್) ಸ್ವಾಧೀನ ಪಡಿಸಿಕೊಂಡಿರುವ ಜಾಗದಲ್ಲಿ. ಅಲ್ಲೇ ಸುತ್ತ-ಮುತ್ತ ರಾಮಪ್ಪ ಸರ್ಕಾರಿ ಜಾಗದಲ್ಲೇ ಲಾಡ್ಜ್-ಛತ್ರ ಕಟ್ಟಿಕೊಂಡು ದಂಧೆ ನಡೆಸುತ್ತಾನೆ. ಚೌಡೇಶ್ವರಿಯ ಮಹಿಮೆ ಜೋರಾದಂತೆ ರಾಮಪ್ಪ ಹವ್ಯಕ ಬ್ರಾಹ್ಮಣ ಸಮುದಾಯದ ಅರ್ಚಕನೊಬ್ಬನ ನೇಮಿಸಿಕೊಂಡರು. ಆತನೇ ಚಪಲ ಚೆನ್ನಿಗರಾಯ ಶೇಷಗಿರಿ ಭಟ್ಟ. ಹೋಟೇಲು ಮಾಣಿಯಾಗಿ ಜೀವನ ಸಾಗಿಸುತ್ತಿದ್ದ ಹೆಡ್ಡ ಭಟ್ಟನಿಗೆ ಅರ್ಚಕ ಗೆಟಪ್ ಬಂದಿದ್ದೇ ತಡ ಆತನ ದೆಸೆಯೂ ಬದಲಾಗಿ ಹೋಯ್ತು. ಹರಕೆ ರೂಪದಲ್ಲಿ ಬರುವ ಕೋಟ್ಯಾಂತರ ಹಣ ಈತ ಭಕ್ತಾದಿಗಳಿಗೆ ಹುಂಡಿಗೆ ಹಾಕಲು ಬಿಡದೆ ತಟ್ಟೆ ಮುಂದೊಡ್ಡುತ್ತಾನೆ. ಈ ಸಿಗಂದೂರೇಶ್ವರಿಗೆ ಮನಿಯಾರ್ಡರ್ ಮೂಲಕ ಬರುವ ಕಾಣಿಕೆಯೇ ವರ್ಷಕ್ಕೆ ಒಂದು ಕೋಟಿ ಮೂವತ್ತೇಳು ಲಕ್ಷ ರೂಪಾಯಿ!! ಈಗ ನೀವೇ ಲೆಕ್ಕ ಹಾಕಿ ಧರ್ಮದರ್ಶಿ ರಾಮಪ್ಪ ಮತ್ತು ಅರ್ಚಕ ಭಟ್ಟನ ಕಳ್ಳ ಆದಾಯ!

ಧರ್ಮದರ್ಶಿ ರಾಮಪ್ಪ ಹೊರನೋಟಕ್ಕೆ ಪಾಪದ ಪ್ರಾಣಿಯಂತೆ ಕಾಣಿಸಿದರೂ ಆಳದಲ್ಲಿ ಪಕ್ಕಾ ವ್ಯವಹಾರಸ್ಥ. ಆತನಿಗೆ ಸ್ವ-ಜಾತಿ ರಾಜಕಾರಣಿಯಾದ ಸ್ಪೀಕರ್ ಕಾಗೋಡು ತಿಮ್ಮಪ್ಪ ಸಾಗರದ ಅನಧಿಕೃತ ಶಾಸಕ ಕಾಗೋಡು ಅಣ್ಣಾಜಿ (ಕಾಗೋಡರ ಅಣ್ಣನ ಮಗ), ಮಾಜಿ ಸಚಿವ ಬಿಜೆಪಿಯ ಹರತಾಳ್ ಹಾಲಪ್ಪ, ಮಾಜಿ ಶಾಸಕ ಬೇಳೂ ಗೋಪಾಲಕೃಷ್ಣನಂಥವರ ಸಖ್ಯವಿದೆ. ರಾಮಪ್ಪನನ್ನು ಬೆದು ಬೊಂಬೆಯಾಗಿಸಿಕೊಂಡು ಸ್ವ-ಜಾತಿ ಹವ್ಯಕರ ಗ್ಯಾಂ ಕಟ್ಟಿಕೊಂಡು ದೇಗುಲದ ಪಾರುಪತ್ಯ ನಡೆಸುತ್ತಿರುವ ಅರ್ಚ ಶೇಷಗಿರಿ ಭಟ್ಟನಿಗೆ ರಾಮಚಂದ್ರಾಪುರ ಮಠದ ರ ರಾಘು ಸ್ವಾಮಿಯ ನೇರಾನೇರ ಸಂಪರ್ಕವಿದೆ! ಹರತಾ ಹಾಲಪ್ಪನ ಕಸಿನ್ ಕಂ ಆತನ ಬೆಂಗಳೂರಿನ ವೈನ್‌ಶಾಪ್ ಮ್ಯಾನೇಜರ್ ಬೀರಪ್ಪನ ಮಢದಿ ಧರ್ಮದರ್ಶಿ ರಾಮಪ್ಪ ಸುಪುತ್ರಿ. ಹೀಗಾಗಿ ರಾಮಪ್ಪನ ದೇವಸ್ಥಾನ ನಿಭಾವಣೆಯ ಎದುರಾಗುವ ಸಮಸ್ಯೆ-ಸಂಕಟಕ್ಕೆ ರಾಜಕೀಯ ಪರಿಹ


ರಾಮಪ್ಪ

ಕೊಡುವುದೇ ಹರತಾಳು ಹಾಲಪ್ಪ. ಇಷ್ಟೇ ಸಹ ಕಾಗೋಡು ಅಣ್ಣಾಜಿಯಿಂದಲೂ ಸಿಗುತ್ತಿದೆ.

ದೀವರ ರಾಮಪ್ಪನಿಗೆ ದೊಡ್ಡ ಮನುಷ್ಯನೆನಿಸಿಕೊ ಒಣ ಪ್ರತಿಷ್ಠೆಯ ದೌರ್ಬಲ್ಯ, ಸಿಕ್ಕಷ್ಟು ಹಣಕ್ಕಾತ ಸಂತ ಆದರೆ ಅರ್ಚಕ ಹವ್ಯಕ ಬ್ರಾಹ್ಮಣರ ಶೇಷಗಿರಿ ಭ ಪ್ರಳಯಾಂತಕ. ದೇವಸ್ಥಾನ ಮತ್ತು ಧರ್ಮದರ್ಶಿ ರಾಮ ಮೇಲಾತ ಹಿಡಿತ ಸಾಧಿಸಿದ್ದಾನೆ. ಹೋಟೇ ಮಾಣಿಯಾಗಿದ್ದಾತ ಇವತ್ತು ಹೈಟೆಕ್ ಕಾರಲ್ಲಿ ಉ ಪತ್ನಿಯರ ಕೂರಿಸಿಕೊಂಡು ಸವಾರಿ ಹೋಗುತ್ತಾನೆ. ನಡು ಬಂದು ಸರ್ಕಾರದ ಲಾಂಚ್ ಬಳಸಿಕೊಂಡು ಕಾರು ದಡಕ್ಕೆ ಒಯ್ಯುತ್ತಾನೆ. ಈ ರಾತ್ರಿರಾಜ ಎಷ್ಟೊತ್ತಿಗೆ ಬಂದ ಲಾಂಚ್ ಸಿಬ್ಬಂದಿ ವಿನಮ್ರವಾಗಿ ಆತನನ್ನು ಶರಾವತಿ ಹಿನ್ನೀ ದಾಟಿಸಿ ಸಿಗಂದೂರು ತಲುಪಿಸಬೇಕು ಅಷ್ಟು ಪ್ರಭ ಈ ರಂಗ್‌ರಂಗೀಲಾ ಭಟ್ಟ. ನಡುರಾತ್ರಿ ಭಟ್ಟ ಉ ಪತ್ನಿಯ ಮನೆಯಿಂದ ಬರ್ತಾನೆಂಬು ಸಿಂಗದೂರಮ್ಮನಿಗೂ ಗೊತ್ತಿರುವ ಸತ್ಯಸಂಗತಿ!! ರಸಿಕತೆ ಭಟ್ಟ ಗುರು ರಾಘುಗೆ ತಕ್ಕ ಶಿಷ್ಯನೇ!


ಚೌಡೇಶ್ವರಿ ಪಟಾಯಿಸುವ ಪ್ಲಾನು!

ನೂರಾರು ರೂಪಾಯಿ ವಾರ್ಷಿಕ ಆದಾ ಸಿಗಂದೂರಿನ ಚೌಡೇಶ್ವರಿ ದೇವಸ್ಥಾನ ತನ್ನ ಸುಪರ್ದಿ ಪಡೆಯುವ ಪ್ಲಾನು ರಾಘು ಹಾಕಿ ತುಂಬ ದಿನ ಕಳೆದಿದೆ. ಆದರೆ ಅದ್ಯಾಕೋ ಕೈಗೂಡುತ್ತಿರಲಿಲ್ಲ. ಶ ಪರಂಪರೆಯ ಚೌಡೇಶ್ವರಿ ದೇವಸ್ಥಾನ ಹವ್ಯಕ ಬ್ರಾಹ್ಮ ಶಾಖಾ ಮಠ ಮಾಡುವ ಹುನ್ನಾರ ಮಾತ್ರ ನಿಂತಿರ ರಾಘು ಸ್ವಾಮಿಯ ಕಿತಾಪತಿಯಿಂದಾಗಿ ಶ ಸಂಪ್ರದಾಯಗಳನ್ನು ಒಂದೊಂದಾಗಿ ಅರ್ಚಕ ಶೇಷ ಭಟ್ಟ ಬಂದ್ ಮಾಡುತ್ತ ಬಂದಿದ್ದ. ಪೆದ್ದು ಧರ್ಮದ ರಾಮಪ್ಪ ದಿಕ್ಕು ತಪ್ಪಿಸಿ ಬ್ರಾಹ್ಮಣರೇ ಪರೋಕ್ಷವ ದೇವಸ್ಥಾನದ ಆಡಳಿತ ನಡೆಸತೊಡಗಿದ್ದರು. ಹೀಗಾಗಿ

ದೀವರ ಎಚ್ಚರಿಕೆ

ಸಾಗರ ಸೀಮೆಯ ಬಹುಸಂಖ್ಯಾತ ದೀವರಿಗೆ ಸಿಗಂದೂರಮ್ಮ ಆರಾಧ್ಯ ದೈವ. ಆಕೆ ಹಿಂದುಳಿದವರ ದೇವತೆ. ಈ ದೇವಸ್ಥಾನ ಪಾರುಪತ್ಯಗಾರನೂ ದೀವರ ರಾಮಪ್ಪನೇ. ಆದರೇನು ಮಾಡೋದು? ಒಂಥರಾ ಎಡವಟ್ಟ ನಂತಿರುವ ರಾಮಪ್ಪ ಬ್ರಾಹ್ಮಣರ ಹಿಡಿತಕ್ಕೆ ಸಿಲುಕಿ ಜನಿವಾರಿಗಳು ಚೌಡಮ್ಮನ ಹೈಜಾಕ್ ಮಾಡಲು ಅವಕಾಶ ಕೊಡುತ್ತಿದ್ದಾನೆ. ಇದು ವಿಚಾರವಂತ ದೀವರ ಹುಡುಗರ ಕೆರಳಿಸಿದೆ.


ಈಡಿಗರ ಯುವ ಸಂಘದ ಗಿರೀಶ್ ಕೋವಿ ಮುಂತಾದ ಹುಡುಗರು ನಿಧಾನಕ್ಕೆ ರಾಘು ಸ್ವಾಮಿ ಚೌಡೇಶ್ವರಿ ದೇವಸ್ಥಾನ ಕಬ್ಜಾ ಮಾಡಿಕೊಳ್ಳಲು ಹವಣಿಸಿರುವುದನ್ನು ಗುರುತಿಸಿದ್ದಾರೆ. ರಾಘುನ ಭೂತಾಕಾರದ ಭಾವಚಿತ್ರಗಳು ದೇವಸ್ಥಾನದಲ್ಲಿ ಕಂಗೊಳಿಸುತ್ತಿರುವುದರ ವಿರುದ್ಧ ಈ ಹುಡುಗರು ಧ್ವನಿ ಎತ್ತಿದ್ದಾರೆ. ಮೊನ್ನಿನ ಸಿಗಂದೂರು ದೇವಳದ 25ನೇ ವರ್ಷದ ಸಮಾರಂಭಕ್ಕೆ ಬಂದಿದ್ದ ಈಡಿಗರ ದೊರೆ-ಹೆಂಡೋದ್ಯಮಿ ನಾರಾಯಣಸ್ವಾಮಿಗೆ ರಾಮಪ್ಪ ರಾಘುನ ಬ್ರಾಹ್ಮಣ ಪರಿವಾರದ ಅಡಿಯಾಳಾಗುತ್ತಿರುವ ಅಪಾಯದ ಕತೆ ಹೇಳಿದ್ದಾರೆ. ಈ ಹಿನ್ನೆಲೆಯಲ್ಲೇ ನಾರಾಯಣ ಸ್ವಾಮಿ ಭಾಷಣ ಮಾಡಿದ್ದಾರೆ. "ನಮ್ಮ ರಾಮಪ್ಪ ಮುಗ್ಧರು... ಆತನ ದಾರಿ ತಪ್ಪಿಸಿದರೆ ಪರಿಣಾಮ ಕೆಟ್ಟದಾಗುತ್ತದೆ..." ಎಂದು ಚೌಡೇಶ್ವರಿ ದೇವಸ್ಥಾನ ಅಪಹರಿಸುವ ಸಂಚಿನಲ್ಲಿರುವ ರಾಘು ಗ್ಯಾಂಗಿಗೆ ಧಮಕಿ ಕೊಟ್ಟಿದ್ದಾರೆ. ಅಷ್ಟೇ ಅಲ್ಲ, ರಾಘುನ ಫೋಟೋಗಳನ್ನು ದೇವಸ್ಥಾನದಿಂದ ತೆಗೆದುಹಾಕುವ ಈಡಿಗ ಯುವ ಸಂಘದ ಬೇಡಿಕೆ ಬಗ್ಗೆಯೂ ಸ್ಪಂದಿಸಿದ್ದಾರೆ. "ಕೆಲವು


ಜಿ.ಜಿ. ನಾರಾಯಣ ಸ್ವಾಮಿ

ದಿನ ತಾಳ್ಮೆ ವಹಿಸಿ... ನಾನು ಮತ್ತೆ ಸಿಗಂದೂರಿಗೆ ಬರ್ತೇನೆ... ಆಗದರ ಬಗ್ಗೆ ತೀರ್ಮಾನಿಸೋಣ..." ಎಂದು ಹೇಳಿಹೋಗಿದ್ದಾರೆ.

ನಾರಾಯಣ ಸ್ವಾಮಿ ನುಡಿದಂತೆ ನಡೆಯದಿದ್ದರೆ ರಾಘುನ ಫೋಟೋಗಳನ್ನೆಲ್ಲ ಚೌಡೇಶ್ವರಿ ದೇವಸ್ಥಾನದಿಂದ ಕಿತ್ತೆಸೆದು ಅಲ್ಲಿ ಅವಧೂತ ಶ್ರೀಧರರ ಫೋಟೋ ಹಾಕುವ ದೃಢ ನಿರ್ಧಾರ ಮಾಡಿದ್ದಾರೆ ಈಡಿಗರ ತರುಣರು! ಇಂಥ ಜಾಗೃತಿ ಹವ್ಯಕರಲ್ಲಷ್ಟೇ ಅಲ್ಲ, ರಾಘು ಮೂಗು ತೂರಿಸುವಲ್ಲೆಲ್ಲ ಮೂಡುತ್ತಿರುವುದು ಶುಭ ಸಂಕೇತ.

ಹೀಗೆ ಪೀಠದಲ್ಲಿ ಕೂತುಕೊಂಡು ಕಂಡ-ಕಂಡವರಿಂದ ಉಗಿಸಿಕೊಳ್ಳಬೇಕಾ? ಗೆಳತಿಯರಲ್ಲಿ ಯಾರಾದರೂ ಒಬ್ಬಳನ್ನು ಮದುವೆಯಾಗಿ ಸಂಸಾರ ಹೂಡಬೇಕಾ? ಆಯ್ಕೆ ರಾಘುಗೆ ಬಿಟ್ಟದ್ದು ಬಿಡಿ!!



ಕಿಮ್ಮನೆ ರತ್ನಾಕರ್

ಕಾಗೋಡು ಕಷ್ಟ!

ಸಿಗಂದೂರಿನ ಚೌಡೇಶ್ವರಿ ದೇವಸ್ಥಾನ ಶುದ್ಧ ಶೂದ್ರ ಸಂಸ್ಕೃತಿಯ ಧಾರ್ಮಿಕ ಕ್ಷೇತ್ರ. ಅಲ್ಲಿಯ ಫೈಸೆ-ಪೈಸೆ ಸಂಘಟ್ಟೂ ಶ್ರಮ ಸಂಸ್ಕೃತಿಯದ್ದು; ಬೆವರಿಳಿಸದೇ ಶೋಷಣೆ ಮೂಲಕ ಸುಖ ಅನುಭವಿಸುವ ಮಂತ್ರ ಸಂಸ್ಕೃತಿಯದಲ್ಲ. ಇಂಥ ದೇವಸ್ಥಾನಕ್ಕೆ ಅನಾಚಾರಿ ರಾಘು ಸ್ವಾಮಿ ಒಕ್ಕರಿಸಿ "ರಜತ ಮಹೋತ್ಸವ"ದಲ್ಲಿ ಭಾಗವಹಿಸುತ್ತಾನೆಂದಾಗ ಚಡಪಡಿಕೆಗೆ ಬಿದ್ದವರು ಸಮಾಜವಾದಿ ಜಾಡಿನ ಸ್ಪೀಕರ್ ಕಾಗೋಡು ತಿಮ್ಮಪ್ಪ. ಕಾಗೋಡರ ಸಾಗರ ವಿಧಾನಸಭಾ ಕ್ಷೇತ್ರಕ್ಕೆ ಒಳಪಡುವ ಈ ಸಿಗಂದೂರು ದೇವಾಲಯಕ್ಕೆ ಶೇಕಡಾ 50ರಷ್ಟೂ ಬ್ರಾಹ್ಮಣ ಭಕ್ತರಿಲ್ಲ. ದೀವರ ಶ್ರದ್ಧಾಕೇಂದ್ರವಿದು.


ಕಾಗೋಡರಿಗೆ ರಾಘು ಸ್ವಾಮಿಯ ಹಂಗೇನೂ ಇಲ್ಲ; ಆತನಿಂದಾಗಿ ಬ್ರಾಹ್ಮಣ ಓಟು ಬರಬೇಕೆಂಬುದೂ ಇಲ್ಲ. ಆದರೆ ರಾಘುನ ಬೆನ್ನಿಗೆ ನಿಂತಿರುವ ಸಿಗಂದೂರು ದೇವಾಲಯದ ಧರ್ಮದರ್ಶಿ ರಾಮಪ್ಪರ ಮುಲಾಜು ಕಾಗೋಡರಿಗೆ. ಆತ ಜಾತಿ ಬಂಧುವಷ್ಟೇ ಅಲ್ಲ ಎಲೆಕ್ಷನ್ ಫಂಡ್ ಕೊಡುವಾತ. ಹೀಗಾಗಿ ರಾಘುನ ಸಿಗಂದೂರು ಪುರ ಪ್ರವೇಶದ ವಿವಾದದಲ್ಲಿ ಕಾಗೋಡು ಎಡಬಿಡಂಗಿಯಂತಾಡಿದರು. ರಾಘುಗೆ ಜಿಲ್ಲಾಡಳಿತ ಅರ್ಧ ನಿರ್ಬಂಧ ಹೇರಲು ಕಾಗೋಡರ ಕರಾಮತ್ತೇ ಕಾರಣ. ಕಾಗೋಡು ಸೆಟೆದು ನಿಂತರೆ ರಾಘು ಉಪ್ಪಿನಂಗಡಿ-ಹಟ್ಟಿಯಂಗಡಿ-ವರದಲ್ಲಿ... ಮುಂತಾದ ದೇಗುಲದ ಅಂಗಳಕ್ಕೆ ಕಾಲು ಹಾಕದೇ ಓಡಿ ಹೋದಂತೆ, ಸಿಗಂದೂರಿನ ಹೊಳೆ ಬಾಗಿಲಿಂದಲೇ ಪಲಾಯನ ಮಾಡುವಂತಾಗುತ್ತಿತ್ತು.


ಕಾಗೋಡರ ಕೃಪೆಯಿಂದ ರಾಘು ಧರ್ಮದರ್ಶಿ ರಾಮಪ್ಪರ ಮನೆ ಅಂಗಳ ಪ್ರವೇಶ ಸಾಧ್ಯವಾಯ್ತು. ದೇವಸ್ಥಾನದ ಆವರಣಕ್ಕೆ ಹೋಗಲು ಬಿಡದ ಜಿಲ್ಲಾಡಳಿತ ಪಕ್ಕದ ರಾಮಪ್ಪನ ಮನೆಯತ್ತ ಸಾಗ ಹಾಕಿತು. ಇದು ಅರ್ಧ ನಿರ್ಬಂಧ. ಕಾಗೋಡು ದಿಕ್ಕು ತಪ್ಪಿಸಲು ಜಾತಿಬಂಧು



ಕಾಗೋಡು ತಿಮ್ಮಪ್ಪ

ಬಿಜೆಪಿಯ ಮಾಜಿ ಮಂತ್ರಿ ಹರತಾಳ್ ಹಾಲಪ್ಪನೂ ಕಾರಣ. "ಸರ್, ಒಂದು ಚಾನ್ಸ್ ಸ್ವಾಮೀಜಿಗೆ ಕೊಡಿ... ಪ್ಲೀಸ್" ಎಂದು ಹಾಲಪ್ಪ ಗೋಗರೆದಿದ್ದಾನೆ. ರಾಘು- ಹಾಲಪ್ಪ ಸಮಾನ ಮನಸ್ಕರು. ಹಾಲಪ್ಪನಿಗೆ ರಾಘು ಹವ್ಯಕರ ಓಟ್‌ಬ್ಯಾಂಕ್. ಸೊರಬದಲ್ಲಿ ಹವ್ಯಕರ ಮತ ದೊಡ್ಡ ಪ್ರಮಾಣದಲ್ಲಿದೆ. ಹಾಗೆಯೇ ತೀರ್ಥಹಳ್ಳಿ ಶಾಸಕ ಕಂ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಮಂತ್ರಿ ಕಿಮ್ಮನೆ ರತ್ನಾಕರ್‌ಗೂ ರಾಘುನ ಎದುರಾಕಿಕೊಳ್ಳುವ ಧೈರ್ಯವಿಲ್ಲ. ಏಕೆಂದರೆ ಅತನ ಕ್ಷೇತ್ರದಲ್ಲಿ ಸಾಕಷ್ಟು ರಾಘುನ ಅನುಯಾಯಿಗಳಾದ ಬ್ರಾಹ್ಮಣರ ಓಟಿದೆ. ಹೀಗಾಗಿ ಸಿಗಂದೂರು ಪ್ರಕರಣದಲ್ಲಿ ಕಿಮ್ಮನೆ ಹಾಗೇ ಸುಮ್ಮನುಳಿದುಬಿಟ್ಟರು.

ರಾಘು ರೇಪಿಸ್ಟ್ ಎಂಬ ಕೂಗೆದ್ದಾಗ ಆತನನ್ನು ಮೂರೂ ಬಿಟ್ಟು ಬಹಿರಂಗವಾಗೇ ಈ ಹಾಲಪ್ಪ, ಕಿಮ್ಮನೆ ಮತ್ತು ಸಾಗರದ ಸ್ಮೈಲ್‌ಕಿಂಗ್ ಗೋ-ಪಾಲಕೃಷ್ಣ ಬೇಳೂರು ಬೆಂಬಲಿಸಿದ್ದರು. ಇದು ಓಟ್ ಬ್ಯಾಂಕ್‌ನ ಅನಾಹುತಕಾರಿ ರಾಜಕಾರಣ. ಕಂತ್ರಿ ಬುದ್ಧಿಯಲ್ಲಿ ನಿಸ್ಸೀಮನಾದ ರಾಘು ಮಾಣಿ ಹೆಂಗಸರನ್ನು ದಾರಿ ತಪ್ಪಿಸಿದಷ್ಟೇ ಸಲೀಸಾಗಿ ರಾಜಕಾರಣಿ-ಅಧಿಕಾರಿ-ಉದ್ಯಮಿಗಳೆಲ್ಲರನ್ನೂ ತನಗೆ ಬೇಕಾದಂತೆ ಪಳಗಿಸುವ 'ಜಾಣ'ನೆಂಬುದು ಖರೆ!!


ಬೇಳೂರು ಗೋಪಾಲಕೃಷ್ಣ


ಹರತಾಳ್ ಹಾಲಪ್ಪ


ದುಗೂರು ಪರಮೇಶ್ವರ್

...ರಾಘು ಮಾದಕ ನಗು ಬೀರುವ ಹತ್ತಾರು ಲೈಫ್ ... ಭಾವಚಿತ್ರಗಳು ದೇವಸ್ಥಾನದ ಸುತ್ತಲಿನ ಗೋಡೆಗೆ ... ಬಿದ್ದಿತ್ತು.


...ಶೂದ್ರರ ದೇವತೆಯಾದ ಚೌಡೇಶ್ವರಿ ಲಾಗಾಯ್ತಿಯಿಂದ ...-ಕುರಿ ರಕ್ತ ತರ್ಪಣ ಪಡೆಯುತ್ತ ಬಂದವಳು. ...ತರದಿಂದ ದೀವರು-ದಲಿತರು ಕೋಳಿ-ಕುರಿ ಹರಕೆ ...ತೀರಿಸುತ್ತ ಬಂದಿದ್ದಾರೆ. ಈ ಸಂಪ್ರದಾಯ ನಿಕೃಷ್ಟ ...ಳಿ "ಶಿಷ್ಟ" ಸಂಸ್ಕೃತಿಯ ಬ್ರಾಹ್ಮಣಿಕೆ ದೇಗುಲದಲ್ಲಿ ...ಡಿಸಲು ಭಟ್ಟ ಯೋಜನಾ ಬದ್ಧವಾಗಿ ಕಾರ್ಯಾಚರಣೆ ...ದ್ದ. ಹೇಗಾದರೂ ಮಾಡಿ ದುಡ್ಡಿನ ದೇವಸ್ಥಾನ ದಾಹದ ...ನನ್ನು ಸಿಗಂದೂರಮ್ಮನ ಸನ್ನಿಧಿಯಲ್ಲಿ ಪ್ರತಿಷ್ಠಾಪಿಸುವ ...ದುರವಿದಾಗಿತ್ತು. ರಾಘುಗೆ ಸಿಗಂದೂರು ದೇಗುಲದಲ್ಲಿ ...ಮು ತೂರಿಸಲು ಒಂದು ಅವಕಾಶ ಬೇಕಿತ್ತು. ಅದಕ್ಕಾಗಿ ...ರ ಗುರು ರಾಘು ಮತ್ತು ಚಾಂಡಾಲ ಶಿಷ್ಯ ಶೇಷಗಿರಿ ... ಕಾಯುತ್ತಿದ್ದರು.

...ಸಿಗಂದೂರಿನಲ್ಲಿ ಚೌಡೇಶ್ವರಿ ಪ್ರತಿಷ್ಠಾಪನೆಯಾಗಿ ...ದು ವರ್ಷವಾಯ್ತೆಂದು "ಪಾದಾರ್ಪಣಾ" ಎಂಬ ...ರಿ ಕಾರ್ಯಕ್ರಮ ಹಮ್ಮಿಕೊಂಡಾಗ ಅದರ ಹಿಂದಿದ್ದದ್ದು ... ಸ್ವಾಮಿ ಹಾಗು ಶೇಷಗಿರಿ ಭಟ್ಟನ ಪಟಾಲಮ್ಮು! ...ಟು ದಿನದ ಧಾರ್ಮಿಕ ಕಾರ್ಯಕ್ರಮಗಳೆಲ್ಲ ರಾಘು ...ಯ ಸಾನಿಧ್ಯದಲ್ಲೇ ನಡೆಯುತ್ತದೆಂದು ಆಮಂತ್ರಣ, ...ರ್, ಫ್ಲೆಕ್ಸ್, ಪ್ರಕಟಣೆ ಹೊರಬಂದಾಗ ರಾಘುನ ...ದೂರೇಶ್ವರಿ ಸ್ವಾಹಾದ ಹಿಕಮತ್ತು ತಂತಾನೆ ...ವಂಗವಾಗಿ ಹೋಯ್ತು!

ಭುಗಿಲೆದ್ದ ಪ್ರತಿಭಟನೆ

...ದೇವಸ್ಥಾನದ ಆವರಣದ ನಾಲ್ಕು ಎಕರೆ ಪ್ರದೇಶದಲ್ಲಿ ...ಬ್ಬರಿ 28 ಲಕ್ಷದ ವೈಭವದ ವೇದಿಕೆ-ಪೆಂಡಾಲು ...ಲಾಗಿತ್ತು. ಸುತ್ತಲೂ ರಾಘುನ ರಸಿಕ ನೋಟ-ಮಾಟದ ...ಡ್ಡ-ದೊಡ್ಡ ಫ್ಲೆಕ್ಸ್ ನೇತು ಬಿಡಲಾಗಿತ್ತು. ಆಗ ಭುಗಿಲೆದ್ದಿತು ...ರೋಧ. ಮಹಿಳೆಯೊಬ್ಬಳ ಅತ್ಯಾಚಾರ ನಡೆಸಿದ ಆರೋಪಿ ...ರ ಸ್ವಾಮಿ ಹೆಣ್ಣು ದೇವತೆ ಚೌಡೇಶ್ವರಿ ಆವರಣಕ್ಕೆ ...ದು ಧಾರ್ಮಿಕ ಕಾರ್ಯಕ್ರಮದಲ್ಲಿ ಪ್ರವಚನ ...ಯುವುದೇ ಘೋರ ಅಪಚಾರ-ಅನೈತಿಕ ಎಂಬ ...ದ್ದಿತು. ಸಾಗರದ ಸಾಮಾಜಿಕ ಬದ್ಧತೆಯ ನಿಷ್ಠೂರ ...ತ ನಾಯಕ ಪರಮೇಶ್ವರ ದೂಗೂರು ಸಿಡಿದೆದ್ದರು. ...ನ ಕರೆಸಲೇಬಾರದೆಂದು ಧ್ವನಿ ಎತ್ತಿದರು.

...ದೂಗೂರ್‌ಗೆ ಈಡಿಗ ಯುವ ಸಂಘಟನೆ, ಹಲವು ...ತಿಪರ ಸಂಘಟನೆ ಮತ್ತು ಪ್ರಜ್ಞಾವಂತ ಬ್ರಾಹ್ಮಣ ...ದವರೆಲ್ಲಾ ಸಾಥ್ ನೀಡಿದರು. ಇದಕ್ಕೆ ಪ್ರತಿಯಾಗಿ ...ಯ ಪೋಲಿ ಪಟಾಲಮ್ ಅಖಾಡಕ್ಕೆ ಇಳಿಯಿತು. ...ವಿರೋಧದ ಸಂಘರ್ಷ ಶುರುವಾಯ್ತು. ಆಗ ಜಿಲ್ಲಾಡಳಿತ ...ಗ್ಗಕ್ಕೆ ಬಿತ್ತು.


ರಾಮಪ್ಪ ವಿರುದ್ಧ ಪ್ರತಿಭಟಿಸುತ್ತಿರುವ ಪತ್ರಕರ್ತರು

ಬಹಿಷ್ಕಾರ ಬೇಡಿಕೆ

ಪುತ್ತೂರಿನ ಉಪ್ಪಿನಂಗಡಿ ದೇವಸ್ಥಾನದಿಂದ ಹಟ್ಟಿಯಂಗಡಿ ದೇಗುಲದವರೆಗೆ, ಮಂಗಳೂರಿನ ಹಲವು ದೇವಸ್ಥಾನದಿಂದ ಗೋಕರ್ಣ ಮಹಾಬಲೇಶ್ವರನ ಸನ್ನಿಧಾನದ ತನಕ, ಸಾಗರದ ವರದಳ್ಳಿ ದೇವಸ್ಥಾನದಿಂದ ಸಾಗರ-ಸೊರಬದ ಹಳ್ಳಿ ಹಳ್ಳಿಯವರೆಗೆ ರಾಘುಗೆ ಬಹಿಷ್ಕಾರ ಬಿದ್ದಿದೆ. ಶೃಂಗೇರಿ ಸ್ವಾಮಿ, ಪೇಜಾವರ ಸ್ವಾಮಿ, ಸ್ವರ್ಣವಳ್ಳಿ ಸ್ವಾಮಿಗಳಂಥ ಬ್ರಾಹ್ಮಣ ಯತಿಗಳೇ ರೇಪಿಸ್ಟ್ ರಾಘುನ ಹತ್ತಿರ ಸೇರಿಸಿಕೊಳ್ಳಲು ಹೇಸುತ್ತಿದ್ದಾರೆ. ಬ್ರಾಹ್ಮಣ ಸಮುದಾಯದಲ್ಲಿ ರಾಘುನ ಧಾರ್ಮಿಕ ಕಾರ್ಯಕ್ರಮಕ್ಕೆ ಕರೆಯದಂತೆ 'ಅಲಿಖಿತ' ಬಹಿಷ್ಕಾರ ಅನಧಿಕೃತವಾಗಿ ಜಾರಿಗೆ ಬಂದಿದೆ. ಸರ್ಕಾರಿ (ಮುಜರಾಯಿ) ದೇವಸ್ಥಾನ ಬಿಡಿ, ಇನ್ನಿತರ ಯಾವ ಧಾರ್ಮಿಕ ಕ್ಷೇತ್ರಕ್ಕೂ ಬುರ್ನಾಸೇಶ್ವರ ರಾಘು ಬರೋದು ಬೇಡವೇ ಬೇಡ ಎಂಬ ಕೂಗೆದ್ದಿದೆ- ಹೀಗಿರುವಾಗ ಸಿಗಂದೂರಿಗೆ ರಾಘು ಬರ್ತಾನೆಂದರೆ ಅಲ್ಲಿಯ ಜನ ಸುಮ್ಮನಿರ್ತಾರಾ?


ರಾಘುಗೆ ಸಿಗಂದೂರು ಪ್ರವೇಶಿಸದಂತೆ ನಿರ್ಬಂಧ ಹೇರುವಂತೆ ವಿಚಾರವಂತ ಸಂಘಟನೆಗಳು-ಜನರು ಜಿಲ್ಲಾಡಳಿತಕ್ಕೆ ಹಕ್ಕೊತ್ತಾಯ ಮಾಡತೊಡಗಿದರು. ಜಿಲ್ಲಾಡಳಿತ ಎರಡೂ ಕಡೆಯವರನ್ನು ಸಂಧಾನಕ್ಕೆ ಕರೆಯಿತು. ದೇವಸ್ಥಾನದ ಆವರಣದಲ್ಲಿ ರಾಘು ದಿವ್ಯ ಪ್ರವಚನ ಬಿಗಿಯಬಾರದೆಂದು ತಾಕೀತು ಮಾಡಿತು. ಪೆಂಡಾಲಿನ ಸುತ್ತ ಹಾಕಿರುವ ರಾಘುನ ತರಹೇವಾರಿ ಭಾವಚಿತ್ರ ತೆಗೆಯುವಂತೆ ಜಿಲ್ಲಾಡಳಿತ ಆದೇಶಿಸಿತು. ವಿಧಿಯಾಟ ನೋಡಿ, ತನಗಾಗದವರ ವಿರುದ್ಧ "ಹವ್ಯಕ ಮಂಡಲ" ಎಂಬ ತನ್ನ ರೌಡಿ ಪಡೆ ಛೂಬಿಟ್ಟು ಹಳ್ಳಿ-ಹಳ್ಳಿಯಲ್ಲಿ ಬಹಿಷ್ಕಾರದ ಹಿಂಸಾಚಾರ ಮಾಡುತ್ತಿದ್ದ ರಾಘುಗೆ ಒಂದರ ಮೇಲೊಂದರಂತೆ ಬಹಿಷ್ಕಾರ-ನಿರ್ಬಂಧ-ಗಡಿಪಾರು ಎದುರಾಗುತ್ತಿದೆ, ಪಾಪ!!

ಪ್ಲಾಪ್‌ಶೋ ರಾಮಪ್ಪನನ್ನು ಅದೆಷ್ಟು ಹತಾಶನಾಗಿಸಿಮೈ ಪರಚಿಕೊಳ್ಳುವಂತೆ ಮಾಡಿದೆ ಎಂದರೆ "ಪತ್ರಕರ್ತ ಮುಂಡೆ ಮಕ್ಕಳಿಂದಾಗಿಯೇ ನಮ್ಮ ಫಂಕ್ಷನ್ ಹಾಳಾಯಿತು.... ಅವರ ಅಪಪ್ರಚಾರದಿಂದ ಜನ ಬರಲು ಹೆದರಿದರು..." ಎಂದಾತ ಹಲುಬುತ್ತಿದ್ದಾನೆ. ಆತನ ಇಂತಹ ಹುಚ್ಚಾಟಕ್ಕೆ ಜನರು ಮತ್ತು ಪತ್ರಕರ್ತರ ಸಂಘದವರು ಪ್ರತಿಭಟಿಸುತ್ತಿದ್ದಾರೆ. ರಾಘುನ ಸಹವಾಸ ಮಾಡಿದ್ದಕ್ಕೆ ರಾಮಪ್ಪ ಪ್ರಾಯಶ್ಚಿತ್ತ ಅನುಭವಿಸುತ್ತಿದ್ದಾನೆ.

ಪ್ಲಾಪ್ ಶೋ

"ಪಾದಾರ್ಪಣಾ" ಕಾರ್ಯಕ್ರಮ ಚೌಡೇಶ್ವರಿ ದೇವಸ್ಥಾನದ ಬಳಿಯ ನಾಲ್ಕು ಎಕರೆ ಜಾಗದ ಭವ್ಯ ಪೆಂಡಾಲಿನಲ್ಲಿ ನಡೆಸಲು ಧರ್ಮದರ್ಶಿ ರಾಮಪ್ಪ ಅರ್ಚಕ ಶೇಷಗಿರಿ ಭಟ್ಟ ಮತ್ತು ರಾಮಚಂದ್ರಾಪುರ ಮಠದ ಪುಂಡರ ಪಡೆಗೆ ಸಾಧ್ಯವಾಗಲಿಲ್ಲ. ಜಿಲ್ಲಾಡಳಿತ ಅದಕ್ಕೆ ಅವಕಾಶ ಕೊಡಲಿಲ್ಲ. ಆದರೆ ಸಾಗರದ ಶಾಸಕ ಕಂ ಸ್ಪೀಕರ್ ಕಾಗೋಡು ತಿಮ್ಮಪ್ಪರ ಪಾಲಿಟಿಕಲ್ ಮ್ಯಾನೇಜರ್ ಕಾಗೋಡು ಅಣ್ಣಾಜಿಯ ಅಪ್ಪಣೆಧಾರಕ ಜಿಲ್ಲಾಧಿಕಾರಿ ಇಕ್ಕೇರಿ ಸಾಹೇಬರು ರಾಘು ಗ್ಯಾಂಗಿನ ಪರ್ಯಾಯ ಪ್ರವಚನ ಪ್ಲಾನಿಗೆ ಒಳಗೊಳಗೆ ಸಮ್ಮತಿ ಸೂಚಿಸಿದ್ದರು.

ಆ ಪ್ಲಾನ್ ಪ್ರಕಾರ ರಾಘುನ ದಿವ್ಯ ಪ್ರವಚನ 28 ಲಕ್ಷದ ಪೆಂಡಾಲಿನ ಬದಲಿಗೆ ಧರ್ಮದರ್ಶಿ ರಾಮಪ್ಪನ ಮನೆ ಅಂಗಳದ ಚಪ್ಪರಕ್ಕೆ ಶಿಫ್ಟ್ ಆಯ್ತು! ಮೊದಲ ದಿನ ಪ್ರತಿಭಟನೆ ರಾಘು ಎದುರಿಸಬೇಕಾಯ್ತು. ಸಿಗಂದೂರಿನ ಆಚೆ ದಡದಲ್ಲಿ ಪ್ರತಿಭಟನಾಕಾರರು ಜಮೆಯಾಗಿ ಲಾಂಚ್‌ನಲ್ಲಿ ಈಚೆ ಬರಲು ನಿಂತಿದ್ದಾರೆಂಬ ಸುದ್ದಿ ಸಿಕ್ಕಿದ್ದೇ ತಡ, ರಾಘು ವೇದಿಕೆ ಇಳಿದು ಶೇಷಗಿರಿ ಭಟ್ಟನ ಮನೆಯಲ್ಲಿ ಅವಿತುಕೊಂಡು ಕೂತುಬಿಟ್ಟ!! ಮರು ದಿನ ದಲಿತ


ಕಾಗೋಡು ಅಣ್ಣಾಜಿ

ಮುಖಂಡ ಪರಮೇಶ್ವರ ದೂಗುರು ನೇತೃತ್ವದಲ್ಲಿ ಪ್ರತಿರೋಧ ಹೆಚ್ಚಾಗುವ ಲಕ್ಷಣ ಕಂಡು ಬಂತು. ಆಗ ರಾಘು ಬಳಗ ದೂಗೂರರ ಜಾಮೀನು ರದ್ದಾಗುವಂತೆ ಕುತಂತ್ರ ನಡೆಸಿತು. ರಾಘು ಗ್ಯಾಂಗ್ ಹಾಕಿದ್ದ ಕೇಸೊಂದರಲ್ಲಿ ಜಾಮೀನು ರದ್ದಾಗುತ್ತಿದ್ದಂತೆ ಪೊಲೀಸರು ಆತನ ಹಿಂದೆ ಬೀಳುವಂತೆ ಮಠ ಮಾಫಿಯಾ ನೋಡಿಕೊಂಡಿತು. ದೂಗೂರು ಭೂಗತರಾದರು; ರಾಘು ಪೊಕ್ಕು ಪ್ರವಚನ ನಿರಾತಂಕವಾಯ್ತು.

ಆದರೆ ರಾಘುನ ಶೋ ಮಾತ್ರ ಅಟ್ಟರ್ ಪ್ಲಾಪ್ ಆಯ್ತು!! ರಾಘುನ ಸಾನಿಧ್ಯದಲ್ಲಿ ಗಲಾಟೆ-ಪೊಲೀಸ್ ಲಾಠಿ ಗ್ಯಾರಂಟಿ ಎಂದು ದೂರದ ಜನರ್‍ಯಾರೂ ಸಿಗಂದೂರಿಗೆ ಬರಲಿಲ್ಲ. ಹತ್ತಿರದವರಿಗೆ ರಾಘುನ ಬಂಡವಾಳ ಗೊತ್ತಿರುವುದರಿಂದ ಅವರೂ ಪಾದಾರ್ಪಣಾಗೆ ಬರಲಿಲ್ಲ! ಸ್ಪೀಕರ್ ಕಾಗೋಡು ತಿಮ್ಮಪ್ಪ ಧರ್ಮದರ್ಶಿ ರಾಮಪ್ಪನ ಮುಲಾಜಿಗೆ ಹೋಗುವ ಯೋಚನೆ ಒಂದು ಹಂತದಲ್ಲಿ ಮಾಡಿದ್ದರು. ಆದರೆ ಅವರ ಸಮಾಜವಾದಿ ಚಿಂತನೆ ಅತ್ಯಾಚಾರಿ-ಅನಾಚಾರಿ ರಾಘುನ ಶೋಗೆ ಹೋಗದಂತೆ ತಡೆಯಿತು. ರಾಮಪ್ಪನ ಸಮಾಧಾನಕ್ಕೆ ತನ್ನ ನೆಚ್ಚಿನ ಬಲಗೈ ಬಂಟ ಕಾಗೋಡು ಅಣ್ಣಾಜಿಯನ್ನು ಸ್ಪೀಕರ್ ಸಾಹೇಬರು ಕಳಿಸಿದ್ದರು. ಮಾಜಿ ಸಿಎಂ ಕುಮಾರಸ್ವಾಮಿ, ಮಂತ್ರಿಗಳಾದ ದೇಶಪಾಂಡೆ, ಶ್ರೀನಿವಾಸ್ ಪ್ರಸಾದ್.... ಮುಂತಾದ ರಾಜಕಾರಣಿಗಳು ರಾಘುನ ಸಮಾರಂಭದತ್ತ ತಲೆಹಾಕಲು ಹೆದರಿದರು.

ಪೇಜಾವರ ಸ್ವಾಮಿಗೂ ರಾಘನೊಂದಿಗೆ ಕಾಣಿಸಿಕೊಳ್ಳಲು ಹೇಸಿಗೆ ಅನ್ನಿಸಿರಬೇಕು. ಅವರೂ ಬರಲಿಲ್ಲ, ಬಂದವರೆಂದರೆ ಒಂದಿಷ್ಟು ಸೋಕಾಲ್ಡ್ ಛೋಟಾ-ಲೋಟಾ ಕಾವಿಧಾರಿಗಳು ಮತ್ತು ಮಾಜಿ ಸಿಎಂ ಯಡ್ಡಿ, ಮಾಜಿ ಮಂತ್ರಿ ಹರತಾಳು ಹಾಲಪ್ಪನಂಥ ರಾಘುನ ರಸಿಕ ಗುಣಧರ್ಮದವರಷ್ಟೇ!! ಈಡಿಗರ ಸಂಘದ ದೊರೆ ಜೆ.ಪಿ. ನಾರಾಯಣಸ್ವಾಮಿ ಬಂದಿದ್ದು ತಮ್ಮ ಜಾತಿಯ ಧರ್ಮದರ್ಶಿ ರಾಮಪ್ಪನ ದಾರಿ ತಪ್ಪಿಸಿ ಸಿಗಂದೂರು ದೇವಾಲಯ ಹೈಜಾಕ್ ಮಾಡಿದರೆ ಹುಷಾರ್ ಎಂದು ರಾಘು ಗ್ಯಾಂಗಿಗೆ ಎಚ್ಚರಿಕೆ ಕೊಡಲಾಗಿತ್ತು. ಅದೇ ಧಾಟಿಯಲ್ಲಿ ಆತ ಭಾಷಣ ಮಾಡುವಾಗ ರಾಘುನ ಮುಖದಲ್ಲಿ ಬೆವರಿನ ಸೆಳಕು ಚಿಮ್ಮುತ್ತಿತ್ತು! ಒಟ್ಟಿನಲ್ಲಿ ರಾಮಪ್ಪನಲ್ಲಿ ಯಾಕಾದರೂ ತಾನು ಈ ಪೋಲಿ ಸ್ವಾಮಿಯನ್ನು ಕರೆಸಿ ಚೌಡೇಶ್ವರಿಗೆ ಕಳಂಕ ತಂದೆನೋ ಎಂಬ ಪಾಪಪ್ರಜ್ಞೆ ಮೂಡಿತ್ತು. ಅಧಿಕ ಪ್ರಸಂಗಿ ಅರ್ಚಕ ಶೇಷಗಿರಿ ಭಟ್ಟನ ಮಾತುಕೇಳಿ ಕೆಟ್ಟನೆಂಬ ಭಾವನೆ ರಾಮಪ್ಪನಲ್ಲಿ ಅಂತಿಮವಾಗಿ ಉಳಿಯಬಿಟ್ಟಿತು, ಪಾಪ!!

ಇಷ್ಟಕ್ಕೆ ರಾಘುನ ಗ್ರಹಚಾರ ಮುಗಿದಿಲ್ಲ. ಮಲೆನಾಡು ಮತ್ತು ಕರಾವಳಿಯ ಧಾರ್ಮಿಕ ಕ್ಷೇತ್ರಕ್ಕೆ ನೈತಿಕ ಕಳಂಕದಂತ ರಾಘುನನ್ನು, ಕಳೆಯದಂತೆ ಹೆಚ್ಚೆಚ್ಚು ವಿರೋಧಗಳು ಎದುರಾಗುತ್ತಿವೆ. ಅತ್ತ ಆತನ ರೇಪ್‌ಕೇಸ್‌ನ ಆರೋಪ ಪಟ್ಟಿ ನ್ಯಾಯಾಲಯಕ್ಕೆ ಸಲ್ಲಿಸಲು ಸಿಐಡಿ ಸಿದ್ಧವಾಗಿದೆ. ಮುಂದಿದೆ ಮಾರಿ ಹಬ್ಬ!!

■ ಶುದ್ಧೋಧನ

ನಿವೃತ್ತ ಅಧಿಕಾರಿಯ ಪುತ್ರಿ

ಯಾವ ತಪ್ಪಿಗೆ ಅತ್ಯಾಚಾರದ ಶಿಕ್ಷೆ?



ಆಕೆ ತುಂಬಾ ಸಾಧು ಸ್ವಭಾವದವಳು. ಮುಂದೆ ಬಂದರೆ ಹಾಯದ, ಹಿಂದೆ ಬಂದರೆ ಒದೆಯದ ಪುಣ್ಯಕೋಟಿಯಂತಹ ಯುವತಿ. ಅವಳ ಹೆಸರನ್ನು ಇಲ್ಲಿ 'ಸೋನಮ್' - ಎಂದಿಟ್ಟುಕೊಳ್ಳೋಣ. ಆಕೆಯ ಗಂಡ ವರ್ಷಮೂರ್ತಿಯೂ ಅಷ್ಟೇ ಸಜ್ಜನ, ಮೃದು ವ್ಯಕ್ತಿತ್ವದವನು. ಇಬ್ಬರೂ ಆರು ವರ್ಷಗಳ ಕಾಲ ಸಹಪಾಠಿಗಳಾಗಿದ್ದರು. ಇಬ್ಬರ ಜಾತಿ, ಧರ್ಮ, ಮಾತೃಭಾಷೆ, ಮೂಲ ಊರುಗಳು ಬೇರೆಬೇರೆಯಾಗಿದ್ದರೂ, ಪರಸ್ಪರ ಪ್ರೀತಿಸಿದರು. ಅವರಿಬ್ಬರ ಕುಟುಂಬಗಳ ನಡುವೆ ಪರಿಚಯವಿದ್ದಿದ್ದರಿಂದ ಯಾರೂ ಅವರ ಮದುವೆಯನ್ನು ವಿರೋಧಿಸಲಿಲ್ಲ. ಯುವ ದಂಪತಿಗಳು ಮೈಸೂರಿನಲ್ಲಿ ಅತ್ತೆ ಮಾವ ಮತ್ತು ಭಾವನ ಮನೆಯಲ್ಲಿ ವಾಸ ಮಾಡಲಾರಂಭಿಸಿದರು.

ಬೆಂಗಳೂರು ನಿವಾಸಿಯಾದ ಯುವತಿಯ ತಂದೆಯಂತೂ ಇಡೀ ರಾಜ್ಯದಲ್ಲಿ ಪ್ರಾಮಾಣಿಕ ವ್ಯಕ್ತಿ ಎಂದೇ ಹೆಸರು ಮಾಡಿರುವವರು. ಈಗಿನ ಪಾಕಿಸ್ತಾನದಲ್ಲಿ ಹುಟ್ಟಿದ್ದ ಅವರು ಇನ್ನೂ ಬಾಲಕನಾಗಿದ್ದಾಗ ದೇಶ ವಿಭಜನೆಯ ಸಮಯದಲ್ಲಿ ಭಾರತಕ್ಕೆ ವಲಸೆ ಬಂದರು. ಅವರು ಭಾರತಕ್ಕೆ ಬಂದಾಗ ಬೆನ್ನಮೇಲಿನ ಬಟ್ಟೆ ಬಿಟ್ಟು ಬೇರೇನೂ ಅವರ ಬಳಿ ಇರಲಿಲ್ಲ, ಇಲ್ಲಿ ಕಷ್ಟಪಟ್ಟು ಬೆಳೆದ, ಓದಿದ ಅವರು ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದಾಗ ಕರ್ನಾಟಕವನ್ನು ಆಯ್ಕೆ ಮಾಡಿಕೊಂಡರು. ನಮ್ಮ ರಾಜ್ಯಕ್ಕೆ ಬಂದನಂತರ ಇಲ್ಲಿನ ಭಾಷೆ, ಸಂಸ್ಕೃತಿಯನ್ನು ಮೈಗೂಡಿಸಿಕೊಂಡರು. ವಿವಿಧ ಜಾಗಗಳಲ್ಲಿ, ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ಸೈ ಎನಿಸಿಕೊಂಡರು.

ಪ್ರವೃತ್ತಿಯಲ್ಲಿ ಅವರು ಅದೆಷ್ಟು ಮೃದುವ್ರೋ, ವೃತ್ತಿಯಲ್ಲಿ ಅದಕ್ಕೆ ತದ್ವಿರುದ್ಧ. ದಕ್ಷತೆಗೆ, ಒಳ್ಳೆಯ ಆಡಳಿತಕ್ಕೆ ಹೆಸರುವಾಸಿಯಾಗಿದ್ದವರು. ಎಂದೂ ಅವರ ಹೆಸರಿಗೆ ಒಂದೇ ಒಂದು ಆರೋಪ, ಕಳಂಕ ಮೆತ್ತಿಕೊಂಡಿದ್ದಿಲ್ಲ, ಸರ್ಕಾರದಲ್ಲಿ ಹಿರಿಯ ಐಎಎಸ್ ಅಧಿಕಾರಿಯಾಗಿದ್ದರೂ ತಲೆ ಮೇಲೊಂದು ಸೂರು ಕಟ್ಟಿಕೊಳ್ಳಲು ಅವರು ಹಲವಾರು ವರ್ಷ ಕಾಯಬೇಕಾಯಿತು. ಅವರ ಇಂತಹ ಗುಣಗಳಿಂದಾಗಿಯೇ ಪಿ. ಲಂಕೇಶರು ಅವರನ್ನು ಮೆಚ್ಚುತ್ತಿದ್ದರು, ಬೆನ್ನುತಟ್ಟಿ ಹುರಿದುಂಬಿಸುತ್ತಿದ್ದರು.

ಈಗ ಆ ನಿವೃತ್ತ ಐಎಎಸ್ ಅಧಿಕಾರಿಯ ವಯಸ್ಸು ಸುಮಾರು 65 ಇರಬೇಕು. ಎರಡು ವರ್ಷಗಳ ಹಿಂದೆ ಅವರ ಆರೋಗ್ಯ ಕೈಕೊಟ್ಟಿತು. ವೈದ್ಯರು ಅದೆಷ್ಟೇ ಪ್ರಯತ್ನಿಸಿದರೂ ಅವರ ದೇಹದೊಳಗೆ ಆಗುತ್ತಿದ್ದ ರಕ್ತಸ್ರಾವವನ್ನು ತಡೆಯುವುದು ಕಷ್ಟವಾಗಿತ್ತು, ಈ ಕಾರಣಕ್ಕಾಗಿಯೇ ಅವರು ಯಾವ ಕ್ಷಣದಲ್ಲಾದರೂ ಇಹಲೋಕವನ್ನು ತ್ಯಜಿಸಬಹುದು ಎಂದೇ ಅವರ ಕುಟುಂಬದವರು ಮತ್ತು ಮಿತ್ರರು ಆತಂಕಗೊಂಡಿದ್ದರು. ಆದರೆ ಅದೃಷ್ಟವಶಾತ್ ಅವರು ಚೇತರಿಸಿಕೊಂಡರು. ಆದರೆ ಅದಾದ ಸ್ವಲ್ಪ ದಿನಗಳಲ್ಲೇ ಅವರ ಮಡದಿಯ ಆರೋಗ್ಯದಲ್ಲಿ ಏರುಪೇರಾಯಿತು. ಕಷ್ಟಪಟ್ಟು ಅವರಿಗೂ ಚಿಕಿತ್ಸೆ ಕೊಡಿಸಿ ಉಳಿಸಿಕೊಳ್ಳಲಾಯಿತು.



ಬಸಪ್ಪ ಕಾಲೇಜ್

ನರಕವಾಯಿತು ಮಗಳ ಬದುಕು

ಆಸ್ಪತ್ರೆ, ಚಿಕಿತ್ಸೆ ಎಂದೆಲ್ಲ ಸುತ್ತಾಡುತ್ತಾ ಎರಡು ವರ್ಷಗಳು ಉರುಳಿದವು. ಇದೆಲ್ಲದರ ಮಧ್ಯೆ ಮೂರೂವರೆ ವರ್ಷಗಳ ಹಿಂದೆ ಮದುವೆಯಾಗಿದ್ದ ತಮ್ಮ ಮಗಳು ಸಂತೋಷವಾಗಿದ್ದಾಳೆ ಎಂದೇ ನಿವೃತ್ತ ಅಧಿಕಾರಿ ಮತ್ತು ಅವರ ಮಡದಿ ನಂಬಿದ್ದರು.

ಅವರು ಹಾಗೆ ನಂಬಲಿಕ್ಕೆ ಕಾರಣಗಳೂ ಇದ್ದವು. ಮೊದಲನೆಯದಾಗಿ ಸೋನಮ್ ಮದುವೆಯಾದದ್ದು ಡಾ. ಸಿ.ಬಿ.ಮೂರ್ತಿ ಎಂಬ ಮೈಸೂರಿನ ಪ್ರಖ್ಯಾತ ವೈದ್ಯರ ಎರಡನೆ ಮಗನನ್ನು. ಪ್ರತಿಷ್ಠಿತ ಬಸಪ್ಪ ಮೆಮೋರಿಯಲ್ ಆಸ್ಪತ್ರೆಯ ಒಡೆಯರಾದ ಮೂರ್ತಿಯವರು ಜನಪರ ವೈದ್ಯ ಎಂದೇ ಹೆಸರು ಮಾಡಿರುವವರು. ದಂತಚೋರ ವೀರಪ್ಪನ್‌ನನ್ನು ಹಿಡಿಯಲು ರಾಜ್ಯದ ಪೊಲೀಸರು ಹೆಣಗಾಡುತ್ತಿದ್ದಾಗ ಕಾರ್ಯಾಚರಣೆಯಲ್ಲಿ ಗಾಯಗೊಂಡ ಪೊಲೀಸರಿಗೆ ಉಚಿತವಾಗಿ ಚಿಕಿತ್ಸೆ ಸಿಗುತ್ತಿದ್ದದ್ದು ಮೂರ್ತಿಯವರ ಆಸ್ಪತ್ರೆಯಲ್ಲಿಯೇ. ಖ್ಯಾತಿಯಲ್ಲಾಗಲಿ, ಪ್ರತಿಷ್ಠೆಯಲ್ಲಾಗಲಿ, ಐಶ್ವರ್ಯದಲ್ಲಾಗಲಿ ಮೂರ್ತಿ ಅವರ ಕುಟುಂಬಕ್ಕೆ ಯಾವ ಕೊರತೆಯೂ ಇರಲಿಲ್ಲ, ಅಂಥವರ ಮನೆಯಲ್ಲಿ ಮಗಳು ಸುಖವಾಗಿರುತ್ತಾಳೆ ಎಂದೇ ಆಕೆಯನ್ನು ಹೆತ್ತವರು ನಂಬಿದ್ದರು.

ಮಗಳು ಸೋನಮ್ ಕೂಡ ತನ್ನ ಜೀವನದಲ್ಲಿ ಎಲ್ಲವೂ ಸುಗಮವಾಗಿ ಸಾಗುತ್ತಿದೆ ಎಂಬಂತೆಯೇ ವರ್ತಿಸುತ್ತಿದ್ದಳು. ಆದರೆ ವಾಸ್ತವ ಬೇರೆಯದ್ದೇ ಆಗಿತ್ತು. ಆದರೂ ಆಕೆ ಅನುಭವಿಸುತ್ತಿದ್ದ ನರಕಯಾತನೆ ಬಗ್ಗೆ ಅಪ್ಪ ಅಮ್ಮಂದಿರ ಮುಂದೆ ಬಾಯಿ ಬಿಟ್ಟಿರಲಿಲ್ಲ. "ಅಪ್ಪ ಮತ್ತು ಅಮ್ಮನ ಆರೋಗ್ಯ ಚೆನ್ನಾಗಿಲ್ಲದಿರುವಾಗ ಅವರಿಗ್ಯಾಕೆ ನನ್ನ ಕಷ್ಟಗಳನ್ನೆಲ್ಲ ಹೇಳಿ ಬೇಸರ ಮಾಡಲಿ" ಎಂದುಕೊಂಡ ಸೋನಮ್ ಗರ್ಭಿಣಿಯಾಗಿದ್ದರೂ ತನ್ನ ಬದುಕಿನಲ್ಲಿ ಆಗುತ್ತಿದ್ದ ನೋವು, ಅವಮಾನ, ದೈಹಿಕ ದಾಳಿ, ಎಲ್ಲವನ್ನೂ ಸಹಿಸಿಕೊಂಡಿದ್ದಳು.

ಆದರೆ ಆಕೆಯೂ ಮಾನುಷಿಯಲ್ಲವೇ? ಎಷ್ಟು ದಿನ ಕುಟುಂಬದ ಮರ್ಯಾದೆ, ಹೆತ್ತವರ ಅನಾರೋಗ್ಯ, ಆಗತಾನೆ ಹುಟ್ಟಿದ ಹೆಣ್ಣುಮಗಳ ಭವಿಷ್ಯ ಎಂದೆಲ್ಲ ಹೆದರಿ ಬಾಯಿಬಿಡದೆ ನರಕದಲ್ಲಿ ಬದುಕಲು ಸಾಧ್ಯ? ಕೊನೆಗೂ ಅವಳ ಸಹನೆಯ ಕಟ್ಟೆಯಲ್ಲಿ ಬಿರುಕು ಮೂಡಿತು. ಅತ್ತೆ ಮತ್ತು ಮಾವನ ಮನೆಯಲ್ಲಿ ತಾನು ಅನುಭವಿಸುತ್ತಿರುವ ಯಾತನೆಗಳ ಬಗ್ಗೆ ಸೋನಮ್ ತನ್ನ ತಂದೆ ಮತ್ತು ತಾಯಿಯ ಮುಂದೆ ವಿವರಿಸಿದಳು. ಅದನ್ನೆಲ್ಲ ಕೇಳಿ ಅವರಿಬ್ಬರೂ ದಂಗುಬಡಿದು ಹೋದರು. ದಿನನಿತ್ಯ ತಾನು ಅನುಭವಿಸುತ್ತಿದ್ದ ಅನ್ಯಾಯ, ಅವಮಾನ, ಅವಹೇಳನಗಳ ಬಗ್ಗೆ ಹೇಳಿದ ಸೋನಮ್ ಕೊನೆಯವರೆಗೂ ತನ್ನ ಮೇಲಾದ ಅತ್ಯಾಚಾರದ ಬಗ್ಗೆ ಹೇಳಿರಲಿಲ್ಲ, ಯಾಕೆಂದರೆ, ಅದು ಹೊರಬಿದ್ದರೆ, ಸಮಾಜದಲ್ಲಿ ತನ್ನ, ತನ್ನ ಕುಟುಂಬದವರ, ತನ್ನ ಕೈಹಿಡಿದವನ ಮನೆಯವರ ಮಾನ, ಮರ್ಯಾದೆಯಲ್ಲಿ ನಾಶವಾಗುತ್ತದೆ ಎಂದು ಆಕೆ ಹೆದರಿದ್ದಳು.

ಕೆಟ್ಟಕಾಲ ಬಂದಾಗ

ಬದುಕಿನ ವೈಪರೀತ್ಯವೋ, ದುರಾಶೆಯ ಫಲವೋ, ಕಾಕತಾಳೀಯವೋ, ಗೊತ್ತಿಲ್ಲ, ಆದರೆ ಸೋನಮ್ ಮತ್ತು ವರ್ಷ ಮದುವೆಯಾಗುವತನಕ ಚೆನ್ನಾಗಿಯೇ ಇದ್ದ ಮೂರ್ತಿಯವರ ಕುಟುಂಬದಲ್ಲಿ ಸಮಸ್ಯೆಗಳು ತಲೆದೋರಲಾರಂಭಿಸಿದ್ದವು. ಅವರ ಹಿರಿಯ ಮಗಳು ಬೆಂಗಳೂರಿನಲ್ಲಿ ಹೃದ್ರೋಗ ತಜ್ಞೆಯಾಗಿ ಸೆಟಲ್ ಆದರು. ಅಕ್ಕನಂತೆ ಹಿರಿಯ ಸಹೋದರ ಪ್ರಬುದ್ಧ ಹರ್ಷ ಮೂರ್ತಿ ವೈದ್ಯಕೀಯ ಪದವಿ ಪಡೆದಿದ್ದರೂ ಅದನ್ನು ತನ್ನ ವೃತ್ತಿಯಾಗಿಸಿಕೊಂಡಿರಲಿಲ್ಲ, ಬದಲಾಗಿ ಹಣದಾಸೆಗೆ ಬಿದ್ದ ಹರ್ಷ ತಂದೆ ಮೂರ್ತಿಯ ಹಣವನ್ನೆಲ್ಲ ಒಂದು ಮಾಲ್ ಕಟ್ಟಿಸಲು ಬಂಡವಾಳವಾಗಿ ಹೂಡಿದ. ಮಾಲ್ ಎದ್ದು ನಿಂತಿತಾದರೂ ಅದರಿಂದ ನಿರೀಕ್ಷಿಸಿದ್ದ ಲಾಭ ಬರಲಿಲ್ಲ ಮಾತ್ರವಲ್ಲ ಅದಕ್ಕೆಂದು ತೆಗೆದುಕೊಂಡಿದ್ದ ಸಾಲದ ಮೇಲಿನ ಬಡ್ಡಿಯೂ ಹೆಚ್ಚಾಗುತ್ತಾ ಹೋಯಿತು. ಅಷ್ಟೂ ಸಾಲದೆಂಬಂತೆ ಹರ್ಷ ಒಂದು ಹೋಟೆಲ್ ಅನ್ನೂ ಪ್ರಾರಂಭಿಸಿದ. ಅದೂ ನಷ್ಟ ಅನುಭವಿಸುವಂತಾಯಿತು.

ಹೀಗೆ ಮೂರ್ತಿಯವರ ಕುಟುಂಬ ಪ್ರಥಮ ಬಾರಿಗೆ ಆರ್ಥಿಕ ಬಿಕ್ಕಟ್ಟು ಎದುರಿಸಲಾರಂಭಿಸಿತು.

ಆಗ ಶುರುವಾಯಿತು ಮೂರ್ತಿಯವರ ಪತ್ನಿ ನಳಿನಾ ಅವರ ವರಾತ. ಸೊಸೆ ಸೋನಮ್‌ಳ ಕಾಲು ಗುಣ ಚೆನ್ನಾಗಿಲ್ಲ, ಆಕೆ ತಮ್ಮ ಮನೆಗೆ ಅಪಶಕುನವಾಗಿ ಆಗಮಿಸಿದ್ದಾಳೆ, ಆಕೆಯಿಂದಾಗಿ ತಾವೆಲ್ಲ ಕಷ್ಟನಷ್ಟ ಅನುಭವಿಸುತ್ತಿದ್ದೇವೆ ಎಂದೆಲ್ಲ ನಳಿನಾ ಸೋನಮ್‌ಗೆ ಮಾನಸಿಕ ಹಿಂಸೆ ಕೊಡಲಾರಂಭಿಸಿದರು. ನೀನು ಸಿಖ್ ಸಮುದಾಯಕ್ಕೆ ಸೇರಿದವಳು, ಸಿಖ್ಖರು ಮತ್ತು ಮುಸಲ್ಮಾನರು ಭಯೋತ್ಪಾದಕರು, ಅಂತಹವಳು ನಮ್ಮ ಮನೆಗೆ ಬಂದಿದ್ದೀಯಾ ಎಂದು ಶಪಿಸುತ್ತಿದ್ದರು. ನೀನೊಬ್ಬಳು ದಂಡಪಿಂಡ, ನಾವು ಆರ್ಥಿಕ ಕಷ್ಟದಲ್ಲಿರುವಾಗ ನಿನ್ನ ಹೊರೆ ಬೇರೆ. ನೀನು ನಮ್ಮ ಮನೆಯಲ್ಲಿರಬೇಕೆಂದರೆ ನಿಮ್ಮ ಅಪ್ಪನಿಗೆ ಮನೆ ಮಾರಿ ನಮಗೆ 15 ಕೋಟಿ ರೂಪಾಯಿ ತಂದುಕೊಡು ಎಂದು ಧಮಕಿ ಹಾಕಲಾರಂಭಿಸಿದರು.

ಅಷ್ಟೇ ಆಗಿದ್ದರೆ ಸೋನಮ್ ಸುಮ್ಮನೆ ಇರುತ್ತಿದ್ದಳೋ ಏನೋ. ಆದರೆ ಆಕೆಯ ಭಾವ ಡಾ. ಹರ್ಷನ ವರ್ತನೆ ಮಾತ್ರ ಅಸಹ್ಯಕರವಾಗಿತ್ತು, ವೈದ್ಯನಾಗಿದ್ದರೂ ಯಾವುದೇ ಕೆಲಸಕ್ಕೆ ಹೋಗದೆ ಮನೆಯಲ್ಲೇ ಇರುತ್ತಿದ್ದ ಮೂವತ್ತು ದಾಟಿದ್ದರೂ ಮದುವೆಯಾಗಿರದಿದ್ದ ಹಣದ ಅಮಲನ್ನೇರಿಸಿಕೊಂಡಿದ್ದ ಹರ್ಷ ಸೋನಮ್‌ಳ ದೇಹವನ್ನು ಅಸಭ್ಯವಾಗಿ ಮುಟ್ಟುವುದು, ಆಕೆ ವಿರೋಧಿಸಿದರೆ ಆಕೆಗೆ ಬಡಿಯುವುದು, ಪೊಲೀಸರಿಗೆ ದೂರುತ್ತೇನೆಂದರೆ ಬಂದೂಕು ತೋರಿಸಿ ಬೆದರಿಸುವುದನ್ನೆಲ್ಲ ಮಾಡುತ್ತಿದ್ದ ಒಂದೆರಡು ಸಲ ಗುಂಡನ್ನೂ ಹಾರಿಸಿ, "ಜಾಸ್ತಿ ಮಾತನಾಡಿದರೆ ನಿನ್ನನ್ನೇ ಸುಟ್ಟು ಹಾಕಿಬಿಡುತ್ತೇನೆ" ಎಂದು ಬೆದರಿಸಿದ್ದ.

ಇದೆಲ್ಲದರ ಬಗ್ಗೆ ಸೋನಮ್ ತನ್ನ ಪತಿ ವರ್ಷನ ಮುಂದೆ ಕಣ್ಣೀರಿಟ್ಟು ಹೇಳಿಕೊಂಡಿದ್ದಳು. ಆದರೆ ಆತನೂ ಅಸಹಾಯಕನಾಗಿದ್ದ. ಯಾಕೆಂದರೆ ಹಾಸ್ಪಿಟಲ್ ಮ್ಯಾನೇಜ್‌ಮೆಂಟ್ ಓದಿರುವ ವರ್ಷ ಅಪ್ಪನ ಬಸಪ್ಪ ಆಸ್ಪತ್ರೆಯಲ್ಲೇ ಕೆಲಸ ಮಾಡುತ್ತಿದ್ದ, ತಲೆಯ ಮೇಲಿನ ಸೂರಿಗೆ, ಆದಾಯ ತರುವ ಕೆಲಸಕ್ಕೆ ಕುಟುಂಬವನ್ನೇ ಅವಲಂಬಿಸಿದ್ದ ವರ್ಷನಿಗೆ ಏನು ಮಾಡುವುದೆಂದೇ ತೋಚದಾಯಿತು. ಆದರೂ ತನ್ನ ಪತ್ನಿಯನ್ನು ಹೀಗೆ ನಡೆಸಿಕೊಳ್ಳಬೇಡಿ ಎಂದು ಅಮ್ಮ ಮತ್ತು ಅಣ್ಣನಿಗೆ ಹೇಳಿದ. ಆದರೆ ಹರ್ಷನ ಮಾತನ್ನು ಕೇಳಿಸಿಕೊಳ್ಳುವ ವ್ಯವಧಾನವೇ ತಾಯಿ ಮತ್ತು ಮಗನಿಗೆ ಇಲ್ಲದಂತಾಗಿತ್ತು.

ಆಸ್ಪತ್ರೆಯಲ್ಲಿ ಜನಪರ ವೈದ್ಯರೆಂದೂ, ಸಮಾಜದಲ್ಲಿ ಒಳ್ಳೆಯ ಮನುಷ್ಯರೆಂದೂ ಹೆಸರು ಪಡೆದಿದ್ದ ಡಾ.ಮೂರ್ತಿ ಮನೆಯಲ್ಲಿ ಮಾತ್ರ ಅಸಹಾಯಕರಾಗಿದ್ದರು. ಸೊಸೆಗೆ ಅನ್ಯಾಯವಾಗುತ್ತಿದ್ದರೂ ಹೆಂಡತಿ ನಳಿನಾ ಮತ್ತು ಹಿರಿಯ ಪುತ್ರ ಹರ್ಷನನ್ನು ತಿದ್ದಿ ಬುದ್ಧಿ ಹೇಳುವಲ್ಲಿ ವಿಫಲರಾದರು. ಜೊತೆಗೆ ಆರ್ಥಿಕ ಬಿಕ್ಕಟ್ಟು ಎದುರಿದ್ದುದ್ದರಿಂದ ಅವರೂ ಹಲವೊಮ್ಮೆ "ನಿಮ್ಮ ಅಪ್ಪನ ಮನೆಯಿಂದ ದುಡ್ಡು ತೆಗೆದುಕೊಂಡು ಬಾ" ಎಂದು ಮೂರ್ತಿ ತಾಕೀತು ಮಾಡಿದ್ದೂ ಉಂಟು.

ಸೋನಮ್ ಮತ್ತು ವರ್ಷ ಅಸಹಾಯಕರಾದಷ್ಟೂ ಹರ್ಷನ ವರ್ತನೆ ಅಸಹ್ಯಕರವಾಗುತ್ತಾ ಹೋಯಿತು. ಆತ ಸೋನಮ್‌ಳ ಮೈಮುಟ್ಟುವುದಲ್ಲದೆ ತನ್ನ ಪ್ಯಾಂಟಿನ ಜಿಪ್ ತೆರೆದು ತನ್ನ ಶಿಶ್ನವನ್ನು ಆಕೆಗೆ ತೋರಿಸಲಾರಂಭಿಸಿದ. ಹರ್ಷನ ಈ ಕೃತ್ಯದ ವಿರುದ್ಧ ಸೋನಮ್ ನಳಿನಾಳ ಮುಂದೆ ಪ್ರತಿಭಟಿಸಿದರೆ ಆ ಮಹಾತಾಯಿ ಮಗನಿಗೆ ಲಾತಾ ಕೊಡುವ ಬದಲು ಸೊಸೆಗೇ ಕಪಾಳಮೋಕ್ಷ ಕರುಣಿಸಿದ್ದಳು.


ಇದರಿಂದ ಇನ್ನಷ್ಟು ಪ್ರೇರೇಪಣೆ ಪಡೆದ ಹರ್ಷ ತನ್ನ ವಿಕೃತಿಯನ್ನು ಮುಂದುವರೆಸಿದ. ಒಮ್ಮೆ ಆತ ಹೀಗೆ 'ವಸ್ತು ಪ್ರದರ್ಶನ' ಮಾಡುತ್ತಿದ್ದದ್ದನ್ನು ಅವರ ಕುಟುಂಬದ ಡ್ರೈವರ್ ವೀರಭದ್ರ ಎಂಬಾತ ನೋಡಿದ. ಅದಾದ ಕೆಲವೇ ದಿನಗಳ ನಂತರ ವೀರಭದ್ರ ನಿಗೂಢವಾಗಿ ಸಾವನ್ನಪ್ಪಿದ. ಅದು ಸಹಜ ಸಾವೋ, ಕೊಲೆಯೋ. ಯಾರಿಗೂ ಗೊತ್ತಿಲ್ಲ.


ಅತ್ತ ಅನಾರೋಗ್ಯಪೀಡಿತ ಅಪ್ಪ-ಅಮ್ಮ, ಇತ್ತ ನರಕದಂತಿದ್ದ ಮಾವನ ಮನೆ-ಇವೆರಡರ ನಡುವೆ ಸಿಕ್ಕಿಹಾಕಿಕೊಂಡಿದ್ದ ಸೋನಮ್ ಹಲವೊಮ್ಮೆ ಆತ್ಮಹತ್ಯೆ ಮಾಡಿಕೊಳ್ಳುವ ಬಗ್ಗೆ ಚಿಂತಿಸಿದಳು. ಸಮಸ್ಯೆಗಳ ಆಗರದಲ್ಲೇ ಜೀವಿಸುತ್ತಿದ್ದ ಸೋನಮ್ ತನ್ನ ಬದುಕಿಗೆ ಆಶಾಕಿರಣ ಮೂಡಿದ್ದರೆ ಎಲ್ಲ ಸಮಸ್ಯೆಗಳು ಬಗೆಹರಿಯಬಹುದೆಂದು ಯೋಚಿಸಿದಳು. ಆಗ ಆಕೆಗೆ ಹೊಳೆದದ್ದು ತಾಯಿ ಆಗುವ ಯೋಚನೆ. ಮಗುವೊಂದು ಜನಿಸಿದರೆ ತನ್ನ ಅತ್ತೆ ಮತ್ತು ಮಾವನ ಮನಸ್ಸು ಕರಗಬಹುದೆಂದುಕೊಂಡಳು; ಭವಿಷ್ಯ ಸಂತೋಷಕರವಾಗಿರುತ್ತದೆಂದು ಆಶಿಸಿದಳು.

ಗರ್ಭಿಣಿಯಾದ ಸೋನಮ್ ಸಹಜವಾಗಿಯೇ ಟೆಸ್ಟ್‌ಗಳಿಗೆ ಮಾವನ ಬಸಪ್ಪ ಆಸ್ಪತ್ರೆಗೇ ಹೋದಳು. ಆಕೆಗೆ ಗೊತ್ತಾಗದಂತೆ ಆಕೆಯ ಗರ್ಭದಲ್ಲಿರುವುದು ಗಂಡು ಮಗುವೋ ಅಥವಾ ಹೆಣ್ಣು ಮಗುವೋ ಎಂದು ಪರೀಕ್ಷಿಸಲಾಯಿತು. ಆಕೆ ಹೆಣ್ಣು ಮಗುವಿನ ತಾಯಿಯಾಗುತ್ತಾಳೆಂದು ಗೊತ್ತಾಗಿದ್ದೇ ತಡ ಅತ್ತೆ ನಳಿನಾ ಕೆಂಡಾಮಂಡಲವಾದಳು. "ನೀನೇ ಒಂದು ಅಪಶಕುನ, ಇನ್ನೊಂದನ್ನು ಬೇರೆ ಹೆರುತ್ತೀಯಾ? ಕೂಡಲೆ ಅಬಾರ್ಷನ್ ಮಾಡಿಸು" ಎಂದು ತಾಕೀತು ಮಾಡಲಾರಂಭಿಸಿದಳು. ಅದಕ್ಕೆ ಸೋನಮ್ ಸುತರಾಮ್ ಒಪ್ಪಲಿಲ್ಲ.

ಇನ್ನೆಷ್ಟು ದಿನ ಇಂತಹ ಹಿಂಸೆ ಸಹಿಸುವುದು ಎಂದು ನಿರ್ಧರಿಸಿ ಸೋನಮ್ ಪೊಲೀಸರಿಗೆ ದೂರು ನೀಡುತ್ತೇನೆ ಎಂದರೆ, ಹರ್ಷ ಮತ್ತು ಅವನ ತಾಯಿ ನಳಿನಾ "ಹಾಗೇನಾದರು ಮಾಡಿದರೆ ನಿನ್ನನ್ನೇ ನಾಶ ಮಾಡುತ್ತೇವೆ" ಎಂದು ಬೆದರಿಸುತ್ತಿದ್ದರು. ಅದಕ್ಕೆ ಅವರ ರಾಜಕೀಯ ಪ್ರಭಾವವೂ ಕಾರಣವಾಗಿತ್ತು. ಹೇಳಿಕೇಳಿ ಡಾ. ಮೂರ್ತಿಯವರಿಗೆ ಮೈಸೂರಿನ ಹಿರಿಯ ರಾಜಕಾರಣಿಗಳೊಂದಿಗೆ ಹಲವಾರು ವರ್ಷಗಳ ಗೆಳೆತನವಿದೆ. ಅವರ ಪತ್ನಿ ನಳಿನಾ ಬೇರೆ ಯಾರೂ ಅಲ್ಲ, ಜೆಡಿಎಸ್‌ನಿಂದ ಎಂಎಲ್‌ಸಿ ಆಗಿರುವ ಶ್ರೀನಿವಾಸ್ ಆಕೆಯ ಖಾಸಾ ಅಣ್ಣ, ಈ ಶ್ರೀನಿವಾಸ್‌ಗೆ ಮಾಧ್ಯಮದಲ್ಲೂ ಹಲವಾರು ಗಳಸ್ಯಕಂಠಸ್ಥರಿದ್ದಾರೆ.

ಇನ್ನು ಬಸಪ್ಪ ಆಸ್ಪತ್ರೆಯಲ್ಲಿ ಪೊಲೀಸರಿಗೆ ಉಚಿತ ಚಿಕಿತ್ಸೆ ಸಿಗುತ್ತಿದ್ದುದರಿಂದ ಪೊಲೀಸರೂ ಅವರ ಹಂಗಿನಲ್ಲಿದ್ದಾರೆ. ಮೈಸೂರಿನ ಪತ್ರಿಕೆಗಳು ಬಸಪ್ಪ ಆಸ್ಪತ್ರೆ, ನರ್ಸಿಂಗ್ ಸ್ಕೂಲ್, ಹೋಟೆಲ್, ಮಾಲ್ ಇತ್ಯಾದಿಗಳ ಜಾಹೀರಾತುಗಳನ್ನು ಅವಲಂಬಿಸಿರುವುದರಿಂದ ಅವೂ ಮೂರ್ತಿ ಕುಟುಂಬದ ಕೃಪಾಕಟಾಕ್ಷದಲ್ಲಿವೆ. ಹೀಗೆ ರಾಜಕಾರಣಿಗಳು, ಪೊಲೀಸರು,


ಬಸಪ್ಪ ಆಸ್ಪತ್ರೆ



...ವವರು ತಮ್ಮೊಂದಿಗೆ ಇರುವಾಗ ನಿವೃತ್ತ ಅಧಿಕಾರಿಯ ಬಡಪಾಯಿ ಗೋಳಿಗೆ ಯಾರು ಕಿವಿಗೊಡುತ್ತಾರೆಂಬ ಧಿಮಾಕು ಹರ್ಷನಿಗೆ.

...ಹೊತ್ತಿಗೆ ಸೋನಮ್ ತನ್ನ ಅಪ್ಪ ಮತ್ತು ಅಮ್ಮನಿಗೆ ತಾನು ...ತ್ತಿರುವ ಸಂಕಷ್ಟಗಳ ಬಗ್ಗೆ ಹೇಳಿದ್ದಳು. ಆಗ ಹೇಗಾದರು ಮಾಡಿ ... ಮತ್ತು ಆಕೆಯ ಪತಿ ವರ್ಷನನ್ನು ರಕ್ಷಿಸಬೇಕೆಂದು ನಿರ್ಧರಿಸಿದ ...ಧಿಕಾರಿ ಬೀಗರಾದ ಡಾ.ಮೂರ್ತಿ ಅವರೊಂದಿಗೆ ಮಾತನಾಡಲು ...ದ್ದಾರೆ. ಆಸ್ತಿಯಲ್ಲಿ ಒಂದಿಷ್ಟು ಪಾಲನ್ನು ವರ್ಷನಿಗೆ ಕೊಟ್ಟು ಅವರಿಬ್ಬರು ...ಗಿ ಬದುಕಲು ಅನುವು ಮಾಡಿಕೊಡಬೇಕೆಂದು ಕೋರಿದರು. ಆದರೆ ... ಕುಟುಂಬ "ನಮ್ಮದು ನಾವೇ ಸಂಪಾದಿಸಿದ ಆಸ್ತಿ, ಅದರಲ್ಲಿ ಚಿಕ್ಕಾಸೂ ಕೊಡಲ್ಲ" ಎಂದು ಹಠ ಹಿಡಿಯಿತು. ಆನಂತರವೂ ...ಶ್ರೀ, ಮಾಜಿ ಮೇಯರ್ ವಾಸು, ಇತರೆ ಹಿರಿಯರ ಮಧ್ಯಸ್ಥಿಕೆಯಲ್ಲಿ ... ಸುತ್ತಿನ ಮಾತುಕತೆಗಳು ನಡೆದಿವೆ. ಯಾವುದೂ ಫಲಕಾರಿಯಾಗಲಿಲ್ಲ.

ಅತ್ಯಾಚಾರ ಎಸಗಿದ

...ನಸಿಕ ಹಿಂಸೆ, ನಿಂದನೆ, ಅವಮಾನ ಇತ್ಯಾದಿಗಳು ಸಹಿಸಿಕೊಳ್ಳಬಹುದು; ... ಮನಸ್ಸುಗಳ ಅಭಿವ್ಯಕ್ತಿ ಎಂದು ಕ್ಷಮಿಸಲೂ ಬಹುದು. ಆದರೆ ...ರ ಇದೆಯಲ್ಲ, ಅದನ್ನು ಯಾರೇ ಆಗಲಿ ಯಾವ ಕಾರಣಕ್ಕೂ ...ದಿಲ್ಲ, ಕ್ಷಮಿಸುವುದಿಲ್ಲ. ಆದರೆ ವಿಕೃತ ಮನಸ್ಸಿನ ಹರ್ಷನಿಗೆ ಅದು ...ಗಲಿಲ್ಲ. ತಾನು ಏನು ಮಾಡಿದರೂ ನಡೆಯುತ್ತದೆ ಎಂಬ ಧಿಮಾಕಿನಿಂದ ...ತುಳುಕುತ್ತಿದ್ದ ಹರ್ಷ ಕಳೆದ ನವೆಂಬರ್ ತಿಂಗಳ 11ನೇ ತಾರೀಖು ...ರದ್ದನ್ನು ಮಾಡಿಯೇ ಬಿಟ್ಟ.

ಸೋನಮ್ 8 ತಿಂಗಳ ಗರ್ಭಿಣಿ. ಅವತ್ತು ಆಕೆ ಮಹಡಿ ಮೇಲಿನ ...ಠಡಿಯಿಂದ ಹೊರಬಂದಾಗ ಹರ್ಷ ಆಕೆಯತ್ತ ಧಾವಿಸಿದ್ದಾನೆ. ...ತವಾಗಿ ಆಕೆಯನ್ನು ಕೊಠಡಿಯೊಳಗೆ ದೂಡಿ, ಮಂಚದ ಮೇಲೆ ...ಕ್ಕಿ ಕೊಡವಿದ್ದಾನೆ. ಒಂದು ಕೈಯಲ್ಲಿ ಆಕೆಯ ಕತ್ತನ್ನು ಹಿಸುಕುತ್ತಾ ...ಮ ಕೈಯಲ್ಲಿ ತನ್ನ ಟ್ರ್ಯಾಕ್ ಪ್ಯಾಂಟ್‌ಅನ್ನು ಕೆಳಗೆ ಎಳೆದಿದ್ದಾನೆ. ... ಗರ್ಭಿಣಿಯಾಗಿದ್ದ ಸೋನಮ್ ಒಂದು ಕೈಯಲ್ಲಿ ತನ್ನ ಕೂಸನ್ನು ...ಯತ್ನಿಸುತ್ತಾ ಇನ್ನೊಂದು ಕೈಯಲ್ಲಿ ಆತನನ್ನು ದೂಡಲು ಪ್ರಯತ್ನಿಸಿದ್ದಾಳೆ. ... ಆಕೆ ವಿಫಲವಾಗಿದ್ದರಿಂದ ಹರ್ಷ ತನ್ನ ತೀಟೆ ತೀರಿಸಿಕೊಂಡಿದ್ದಾನೆ. ...ರುತ್ತಿದ್ದದ್ದನ್ನು ಕೇಳಿ ಆಕೆಯ ಪತಿ ವರ್ಷ ಕೊಠಡಿಯೊಳಗೆ ಧಾವಿಸಿ ... ಎಳೆದು ಹಾಕಿದ್ದಾನೆ. "ಅವತ್ತು ನನ್ನ ಗಂಡ ಬಂದು ನನ್ನನ್ನು ...ದ್ದರೆ ನನ್ನ ಭಾವ ನನ್ನನ್ನು ಮತ್ತು ಇನ್ನೂ ಜನ್ಮವೆತ್ತಿರದ ನನ್ನ ಕೂಸನ್ನೂ ... ಹಾಕುತ್ತಿದ್ದ" ಎಂದು ಸೋನಮ್ ಪೊಲೀಸರಿಗೆ ಕೊಟ್ಟಿರುವ ದೂರಿನಲ್ಲಿ ...ತ್ತಿಕೊಂಡಿದ್ದಾಳೆ.

...ಪತ್ನಿಯ ಮೇಲೆಯೇ ತನ್ನ ಸಹೋದರ ಅತ್ಯಾಚಾರವೆಸಗಿದ್ದನ್ನು ...ವರ್ಷ ಪೊಲೀಸರಿಗೆ ದೂರು ನೀಡಲು ಅವತ್ತೇ ಮುಂದಾಗಿದ್ದಾನೆ. ..."ದೂರು ಕೊಟ್ಟರೆ ಮಾನ ಹೋಗುವುದು ನಿನ್ನ ಹೆಂಡತಿಯದ್ದೇ" ...ಆತನ ತಂದೆ ಮತ್ತು ತಾಯಿ ಅವನನ್ನು ತಡೆಹಿಡಿದಿದ್ದಾರೆ; ಮನೆಯಲ್ಲಿ ...ಮ್ ಮತ್ತು ವರ್ಷನನ್ನು ಬಂಧಿಸಿಟ್ಟಿದ್ದಾರೆ.

...ೋನಮ್‌ಗೆ ತನ್ನ ಮಗುವಿನ ಬಗ್ಗೆಯೇ ಚಿಂತೆ. ಇಂತಹ ಸ್ಥಿತಿಯಲ್ಲಿ ...ಪ, ಕೋರ್ಟು, ವಕೀಲರು ಎಂದೆಲ್ಲ ಓಡಾಡಿದರೆ ಹುಟ್ಟಲಿರುವ ...ಗೆ ಹಾನಿಯಾದೀತು ಎಂಬ ಆತಂಕ; ಡೆಲಿವರಿ ಆದರೆ ಸಾಕು, ಮಗು ...ಕ್ಷಿತವಾಗಿ ಸಾಕು ಎಂಬ ಆಶೆ; ತನ್ನ ಮೇಲೆ ಭಾವನೇ ಅತ್ಯಾಚಾರ ಎಸಗಿರುವುದು ...ದರೆ ಅಪ್ಪ ಅಮ್ಮಂದಿರಿಗೆ ಶಾಕ್ ಆಗುತ್ತದೆ, ಸಮಾಜದಲ್ಲಿ ಮಾನ ...ತ್ತದೆ ಎಂಬ ಭೀತಿ... ಆದರೂ ತನ್ನ ಮೇಲೆ ಇಂತಹ ಕೃತ್ಯವೆಸಗಿಯೂ ... ಶಿಕ್ಷೆಯೂ ಆಗದೆ ಹರ್ಷ ಇರುವುದೂ ಆಕೆಗೆ ಸರಿ ಅನ್ನಿಸಲಿಲ್ಲ. ...ನ್ನು ಹಡೆದ ನಂತರ ದೂರು ಕೊಡಲು ಆಕೆ ನಿರ್ಧರಿಸಿದಳು.

...ವು ತಿಂಗಳುಗಳ ಹಿಂದೆ ಸೋನಮ್ ಹೆಣ್ಣು ಮಗುವಿಗೆ ಜನ್ಮ ...ಳು. ಆದರೆ ಅದು ತಾಪತ್ರಯಗಳ ಹೆರಿಗೆ ಆಗಿತ್ತು. ಅದೇ ಕಾರಣಕ್ಕೆ ... ಆಕೆಯ ಮೇಲೆ ಎರಡು ಶಸ್ತ್ರಚಿಕಿತ್ಸೆಗಳೂ ನಡೆದಿವೆ. ಇದೆಲ್ಲದರಿಂದ ...ಲ್ಲ ಚೇತರಿಸಿಕೊಂಡಿರುವ ಸೋನಮ್ ಇತ್ತೀಚೆಗೆ ಬೆಂಗಳೂರಿನಲ್ಲಿ ...ಪ್ಪ ಮತ್ತು ಅಮ್ಮನಿಗೆ ಕೊನೆಗೂ ಅತ್ಯಾಚಾರದ ಬಗ್ಗೆ ಹೇಳಿದ್ದಾಳೆ. ...ಮ ಗೊತ್ತಾಗುತ್ತಿದ್ದಂತೆ ನಿವೃತ್ತ ಅಧಿಕಾರಿ ಕೂಡಲೇ ಪೊಲೀಸರಿಗೆ ... ನೀಡಲು ಮಗಳಿಗೆ ಹೇಳಿದ್ದಾರೆ. "ಮಗಳ ಮರ್ಯಾದೆ ಮುಂದೆ ... ಆಸ್ತಿ ಯಾವ ಲೆಕ್ಕಕ್ಕೆ, ಅದೆಲ್ಲ ಏನೂ ಬೇಡ. ಅವನಿಗೆ ಶಿಕ್ಷೆಯಾಗಿ ...ನ್ಯಾಯ ಸಿಕ್ಕರೆ ಸಾಕು" ಎಂದು ಆಕೆಯಲ್ಲಿ ಧೈರ್ಯ ತುಂಬಿದ್ದಾರೆ. ...ತ್ತ ಬೆಂಗಳೂರಿನಲ್ಲಿ ದೂರು ದಾಖಲಾಗುತ್ತಿದ್ದಂತೆ ಅತ್ತ ಮೈಸೂರಿನಲ್ಲಿ ...ರ್ಷನ ಬೆಂಬಲಿಗರು ಸೋನಮ್ ಮತ್ತು ಆಕೆಯ ತಂದೆಯ ತೇಜೋವಧೆ ...ಹಚ್ಚಿಕೊಂಡಿದ್ದಾರೆ. ಅದರಲ್ಲಿ ಈ ಸಿಟ್ಟಿನಲ್ಲಿ ಹಲವು ಮಾಧ್ಯಮಗಳೂ ...ವೆ. "ನಿವೃತ್ತ ಅಧಿಕಾರಿಗೆ ಈ ಮುದಿ ವಯಸ್ಸಿನಲ್ಲಿ ಹಣದ ಆಸೆ ...ಡಿದೆ. ಅವರು ಕೇಳಿದಷ್ಟು ಹಣ ನೀಡಲಿಲ್ಲ, ಅದಕ್ಕೆ ಇಂತಹ ... ದಾಖಲಿಸಿದ್ದಾರೆ" ಎಂದೂ "ವರ್ಷನೇ ಸರಿ ಇಲ್ಲ, ಅವನು ಈ ...ಮದುವೆಯಾಗಿದ್ದ" ಎಂದೂ ಅಪಪ್ರಚಾರ ಮಾಡುತ್ತಿದ್ದಾರೆ.

...ಕ್ಕೆ ವರ್ಷ ಒಳ್ಳೆ ಹುಡುಗ ಅಲ್ಲ, ಆತ ಈ ಹಿಂದೆ ಇನ್ನೊಂದು ...ಯಾಗಿದ್ದ, ನಿವೃತ್ತ ಅಧಿಕಾರಿಗೆ ಹಣದ ಹುಚ್ಚು ಹಿಡಿದಿದೆ ಎಂತಲೇ ...ಳ್ಳೋಣ...

...ದು ನಿಜವಾದರೂ ಸೋನಮ್ ಮೇಲಾದ ಅತ್ಯಾಚಾರದನ್ನು ...ಬೇಕೆ?

...ತಕಾಗಿಯೂ ಕ್ಷಮಿಸಲಾಗುವುದಿಲ್ಲ.

...ಸಮಾಜವನ್ನು ...ಗಿ ತನಿಖೆ ಮಾಡಿ ತಪ್ಪಿತಸ್ಥರಿಗೆ ಶಿಕ್ಷೆ ಆಗಲೇ ...ಬೇಕೇ?

■ ಸಾವಂತ್ರಿ

ಐಶ್ವರ್ಯ ರೈ: ಆಡಿದ್ದು ಒಂದು, ಮಾಡಿದ್ದು ಮತ್ತೊಂದು

ಸಾಹಿತ್ಯ ಮತ್ತು ಕಲೆ, ಇವೆರಡೂ ಸಮಾಜದ ಏರಿಳಿತಗಳೊಂದಿಗೆ ಮಿಳಿತು ಹೆಜ್ಜೆಹಾಕಿದಾಗ ಮಾತ್ರ ಅವು ಸಮಾಜದಲ್ಲಿ ಸಂವೇದನೆಯನ್ನು ಸೃಷ್ಟಿಸಬಲ್ಲವು. ಅದು ಅವುಗಳ ಜವಾಬ್ದಾರಿಯೂ ಆಗಿರುತ್ತದೆ. ಆದರೆ ಕಲಾ ಕೃಷಿ, ಮುಖ್ಯವಾಗಿ ಸಿನಿಮಾರಂಗ ಕಮರ್ಷಿಯಲ್ ಜಾಡಿಗೆ ಬಿದ್ದು ತನ್ನ ಈ ಹೊಣೆಯಿಂದ ನುಣುಚಿಕೊಳ್ಳುತ್ತಿರುವುದು ಇತ್ತೀಚಿನ ದುರದೃಷ್ಟಕರ ಬೆಳವಣಿಗೆ. ಹೌದು, ಬಣ್ಣದ ಬದುಕೆಂದರೆ ಅದು ಫ್ಯಾಂಟಸಿಯ ಲೋಕ. ವೇಗ, ಆವೇಗ, ಉದ್ವೇಗಗಳು ಇಲ್ಲಿಗೆ ಅತ್ಯಗತ್ಯ ಎನ್ನುವಂತಹ ವಾತಾವರಣವೂ ಸೃಷ್ಟಿಯಾಗಿರಬಹುದು. ಹಾಗಂತ ನಮ್ಮ ಕಲೆಯೊಳಗಿನ ಜೀವಂತಿಕೆಯನ್ನೆ ಬಸಿದು ಹೊರಗೆಸೆದು, ಕೇವಲ ಬೆಳಕಿನ ಪ್ರಖರತೆಯನ್ನೇ ನಂಬಿ ಹೆಜ್ಜೆಹಾಕುವುದು ಕಲೆಗೆ ಸಲ್ಲಿಸುವ ಗೌರವವಲ್ಲ, ಅದೊಂಥರಾ ವ್ಯಾಪಾರ! ಚಿತ್ರ ಜಗತ್ತು, ಚಿತ್ರ 'ಉದ್ಯಮ'ವಾಗಿರುವ ಈ ಹೊತ್ತಿಗೆ ಅದು ಸರಿಯೇ ಆಗಿರಬಹುದು; ಆದರೆ ಮನುಷ್ಯಪ್ರಜ್ಞೆಯನ್ನೂ ಮೆಟ್ಟಿ ಮೆರೆಯುವಷ್ಟು ಸಿನಿಮಾರಂಗ ಕಲುಷಿತಗೊಳ್ಳುವುದು ಸಮಾಜಕ್ಕೆ ಬೇಡ.

ಈ ಪೀಠಿಕೆಗೆ ಒಂದು ಕಾರಣವಿದೆ. ಆ ಕಾರಣಕ್ಕೆ ಒಂದು ಕಥೆ ಇದೆ. ಹಾಗೆನ್ನುವುದಕ್ಕಿಂತ ವ್ಯಥೆ ಎನ್ನುವುದೇ ಹೆಚ್ಚು ಕ್ಷೇಮ ಅನ್ನಿಸುತ್ತೆ. ಇತ್ತೀಚೆಗೆ ಬಾಲಿವುಡ್ ಸುಂದರಿ, ಬಿಗ್ ಬಿ ಬಚ್ಚನ್ ಮನೆಯ ಸೊಸೆ, ಮೋಹಕ ಮಿಂಚುಳ್ಳಿ ಐಶ್ವರ್ಯ ರೈ ಕಲ್ಯಾಣ್ ಜ್ಯೂಯಲರ್ಸ್‌ಗಾಗಿ ಕಾಣಿಸಿಕೊಂಡ ಜಾಹೀರಾತೊಂದು ಸಿನಿಮಾದವರ ಸಾಮಾಜಿಕ ಪ್ರಜ್ಞೆಯನ್ನೇ ಪ್ರಶ್ನಿಸುವಂತೆ ಮಾಡಿದೆ. ಎಲ್ಲರಿಗೂ ಗೊತ್ತಿರುವಂತೆ ಮಾವ ಮತ್ತು ಸೊಸೆ ಇಬ್ಬರೂ ಆಭರಣ ಕುಬೇರ ಕಲ್ಯಾಣ್ ಜ್ಯೂಯಲರ್ಸ್ ಸಂಸ್ಥೆಗೆ ಪ್ರಚಾರ ರಾಯಭಾರಿಗಳಾಗಿದ್ದಾರೆ. ಇದು ಹೊಸದೇನೂ ಅಲ್ಲ, ಸಾಕಷ್ಟು ಉತ್ಪನ್ನಗಳು ಪ್ರಖ್ಯಾತ ಮತ್ತು ಚಿರಪರಿಚಿತ ಮುಖಗಳನ್ನು ಮುಂದಿಟ್ಟುಕೊಂಡು ವಹಿವಾಟು ನಡೆಸುವುದು ಸರ್ವೇಸಾಮಾನ್ಯ. ಹಾಗೆ ನೋಡಿದರೆ, ಇಂಡಿಯಾದಲ್ಲಿ ವಿಶ್ವಸುಂದರಿ ಸ್ಪರ್ಧೆ ಆಯೋಜಿಸಲು ಹೋಗಿ ಬರ್ಬಾದ್ ಆಗಿದ್ದ ಬಚ್ಚನ್‌ಗೆ ಮರುಜನ್ಮ ನೀಡಿದ್ದೇ ಇಂತಹ ಜಾಹಿರಾತುಗಳು. ಇನ್ನು ನಮ್ಮ ಕ್ರಿಕೆಟಿಗರು ಆಟಕ್ಕಿಂತ ಹೆಚ್ಚಾಗಿ ಮಿಂಚುವುದೇ ಜಾಹಿರಾತುಗಳಲ್ಲಿ, ಅದೆಲ್ಲ ಒತ್ತಟ್ಟಿಗಿರಲಿ, ಈಗ ಅಸಲಿ ವಿಷಯಕ್ಕೆ ಬರೋಣ.



ಏಪ್ರಿಲ್ 17 ರಂದು, ದೆಹಲಿ ಆವೃತ್ತಿಯ ಹಿಂದೂ ಪತ್ರಿಕೆಯಲ್ಲಿ ಕಲ್ಯಾಣ್ ಜ್ಯೂಯಲರ್ಸ್‌ನ ಒಂದು ಪೂರ್ಣಪುಟದ ಭಾರೀ ಜಾಹಿರಾತು ಪ್ರಕಟವಾಗಿತ್ತು. ಜಾಹಿರಾತಿನಲ್ಲಿ ಹೊಂಬಣ್ಣದ ಐಶ್ವರ್ಯ ರೈ ಮೈಮೇಲೆ ಆಭರಣಗಳನ್ನು ಹೇರಿಕೊಂಡು ಅಚ್ಚುಕಟ್ಟಾದ ಅವತರಣಿಕೆಯಲ್ಲಿ 'ರಾಯಲ್' ಆಗಿ ಕಂಗೊಳಿಸುತ್ತಿದ್ದರೆ, ಅವಳ ಪಕ್ಕದಲ್ಲಿ ಗುಲಾಮಗಿರಿಯ ದ್ಯೋತಕವೆಂಬಂತೆ ಕಪ್ಪು ಬಣ್ಣದ, ಸರಿಯಾದ ಪೋಷಣೆಯಿಲ್ಲದ ಸಣಕಲು ಹುಡುಗನೊಬ್ಬ ಐಶ್ವರ್ಯ ರೈಗೆ ನೆರಳು ಮಾಡಲೋಸುಗ ಆತನಿಗಿಂತಲೂ ದುಪ್ಪಟ್ಟು ಗಾತ್ರದ ಛತ್ರಿಯನ್ನು ಹಿಡಿದುಕೊಳ್ಳಲು ಹೆಣಗಾಡುತ್ತಿರುವಂತೆ ಚಿತ್ರಿಸಲಾಗಿತ್ತು. ಕಲ್ಯಾಣ್ ಜ್ಯೂಯಲರ್ಸ್ ಆಭರಣ ಧರಿಸಿದ ಮಹಿಳೆಯರಿಗೆ ಗತಕಾಲದ 'ಗೌಡಸಾನಿ' ಗತ್ತಿನ ಅನುಭವ ಆಗುತ್ತದೆಂದು ಗ್ರಾಹಕರನ್ನು ಪುಸಲಾಯಿಸುವ ಇರಾದೆ ಆ ಜಾಹಿರಾತಿನ ಹಿಂದಿದ್ದದ್ದು ಸ್ಪಷ್ಟವಾಗಿ ಗೋಚರವಾಗುತ್ತದೆ.

ಆದರೆ ಆ ಧಾವಂತದಲ್ಲಿ ಮಾನವವಿರೋಧಿ ಆಚರಣೆಗಳಾದ ಜನಾಂಗೀಯ ಹೀಗಳಿಕೆ, ಗುಲಾಮಗಿರಿ ಪದ್ಧತಿ, ಬಾಲಕಾರ್ಮಿಕ ಶೋಷಣೆಗಳನ್ನು ಪ್ರಚುರ ಪಡಿಸುವ ಅಪಾಯತೆಯನ್ನು ಮಾಡೆಲ್ ಆದ ಐಶ್ವರ್ಯ ರೈ ಆಗಲಿ, ದುಡ್ಡು ಸುರಿದ ಕಲ್ಯಾಣ್ ಜ್ಯೂಯಲಸ್ ಆಗಲಿ ಅಥವಾ ಆ ಜಾಹಿರಾತನ್ನು ಸಿದ್ಧಗೊಳಿಸಿದ ಆ್ಯಡ್ ಸಂಸ್ಥೆಯಾಗಲಿ ನಿರ್ಲಕ್ಷಿಸಿದ್ದು ಇದೀಗ ಪ್ರಗತಿಪರರ ಭಾರೀ ವಿರೋಧಕ್ಕೆ ಕಾರಣವಾಗಿದೆ.

ಜಾಹಿರಾತನ್ನ ಗಮನಿಸಿದ ಕೂಡಲೇ ಚಿತ್ರದಲ್ಲಿ ತೋರಿಸಿರುವುದು ಗುಲಾಮಿ ಹುಡುಗನ ಅಭಿವ್ಯಕ್ತಿಯನ್ನು ಎಂಬುದು ಎಂತವರಿಗೂ ಮನದಟ್ಟಾಗುತ್ತದೆ. ಅದಕ್ಕೋಸ್ಕರವೇ ಐಶ್ವರ್ಯಾಳ ಚರ್ಮದ ಹೊಳಪಿನ ಕಾಂತಿಗೆ ತದ್ವಿರುದ್ಧವಾಗಿ ಆತನ ಮೈಬಣ್ಣವನ್ನು ಮತ್ತಷ್ಟೂ ಕಪ್ಪಗಾಗಿಸಲಾಗಿದೆ. ಇನ್ನು ಆತ ಹದಿನಾರು ವಯಸ್ಸು ದಾಟಿರದ ಶಾಲಾ ವಯಸ್ಸಿನ ಹುಡುಗ ಎನ್ನುವುದು ಕೂಡಾ ಯಾವುದೇ ಅನುಮಾನವಿಲ್ಲದೆ ದೃಢವಾಗುತ್ತದೆ. ಹಾಗಾಗಿ ಇದು ನಿರ್ಲಕ್ಷ್ಯದಿಂದಲೊ, ಅಚಾತುರ್ಯದಿಂದಲೋ ಆದ ಪ್ರಮಾದವಲ್ಲ. ಮೇಕಪ್‌ಮೆನ್‌ನಿಂದ ಮೊದಲ್ಗೊಂಡು ಜಾಹಿರಾತು ವಿನ್ಯಾಸಕನವರೆಗೆ (ಐಶ್ವರ್ಯಳನ್ನೂ ಒಳಗೊಂಡಂತೆ) ಜಾಹಿರಾತಿನಲ್ಲಿ ಯಾವ ಸಂದೇಶವನ್ನು, ಏನು ಸನ್ನಿವೇಶವನ್ನು ಸೃಜಿಸಲಾಗುತ್ತಿದೆ ಎಂಬುದು ಚೆನ್ನಾಗಿಯೇ ಗೊತ್ತಿರುತ್ತದೆ.

ಭಾರತ ಪಾಹತುಶಾಹಿ ಕಾಲದಲ್ಲಿ ನಲುಗುತ್ತಿದ್ದ ಸಮಕಾಲೀನದಲ್ಲಿ ಪ್ರಪಂಚದ ವಿವಿಧೆಡೆ ರಚಿಸಲ್ಪಟ್ಟ 'ಗ್ಲೋರಿಯಸ್ ಕ್ವೀನ್'ಗಳ ವರ್ಣಚಿತ್ರಗಳತ್ತ ನಾವೊಮ್ಮೆ ಕಣ್ಣು ಹಾಯಿಸಿದರೆ ಆಗಿನ ಕಾಲದಲ್ಲಿ ಹಸಿಹಸಿಯಾಗಿ ಆಚರಣೆಯಲ್ಲಿದ್ದ ವರ್ಣಭೇದ ನೀತಿ, ಗುಲಾಮಿ ಪದ್ಧತಿ, ಬಡವರ ಶೋಷಣೆಗಳನ್ನು ಪ್ರತಿನಿಧಿಸುತ್ತಿರುವುದು ನಮ್ಮ ಅಂದಾಜಿಗೆ ಸಿಗುತ್ತದೆ. ವೈಭವೋಪೇತ, ಆಕರ್ಷಕ ಮೈಬಣ್ಣದ ರಾಣಿ/ಮೇಡಮ್‌ಗಳು, ಅವರ ರಾಯಲ್‌ನೆಸ್ ಅನ್ನು ಹೆಚ್ಚಿಸುವುದಕ್ಕೆಂದೇ ಚಿತ್ರದ ಚೌಕಟ್ಟಿನೊಳಗೆ ತೂರಿಸಲ್ಪಟ್ಟ ಕಪ್ಪುಬಣ್ಣದ ಸೇವಕರು, ಅವರ ದೈನೇಸಿ ಸ್ಥಿತಿ. ಇವೆಲ್ಲವೂ ಸಾಮಾನ್ಯವಾಗಿ ಕಾಣಸಿಗುತ್ತವೆ. ಐಶ್ವರ್ಯಳ ಈ ಜಾಹಿರಾತು ಅವುಗಳನ್ನೇ ನಕಲು ಮಾಡಿದಂತಹುದು. ಆಗಿನ ಕಾಲಘಟ್ಟಕ್ಕೆ ಅವೆಲ್ಲಾ ಮಾನ್ಯವಾಗಿದ್ದವು ಹಾಗಾಗಿ ಚಿತ್ರಗಳಲ್ಲಿ ಅವುಗಳ ಪ್ರತಿನಿಧೀಕರಣವಿದೆ. ಆದರೆ ಆ ಎಲ್ಲವುಗಳ ನಿರ್ಮೂಲನೆಗಾಗಿ ಸಮಾಜ ಹೋರಾಡುತ್ತಿರುವ ಈ ಹೊತ್ತಿನಲ್ಲಿ ಅವುಗಳನ್ನು ಪ್ರಜ್ಞಾಪೂರ್ವಕವಾಗಿ ಪ್ರತಿಫಲಿಸುವ ಪ್ರಯತ್ನವೇ ಹೀನವಾದುದು.

ಸಿನಿಮಾರಂಗದವರು ಕಮರ್ಷಿಯಲ್ ದಾಂಗುಡಿಯಲ್ಲಿ ಸಾಮಾಜಿಕ ಹೊಣೆಗಾರಿಕೆಯಿಂದ ವಿಮುಖರಾಗುತ್ತಿದ್ದಾರೆ ಅಂತ ಆರಂಭದಲ್ಲಿ ಪ್ರಸ್ತಾಪಿಸಿದ್ದು ಇದೇ ಕಾರಣಕ್ಕೆ. ಐಶ್ವರ್ಯಳ ಆ ಜಾಹಿರಾತನ್ನು ಗಂಭೀರವಾಗಿ ಪರಿಗಣಿಸುವುದಕ್ಕೆ ಆಕೆ ಅಪಾರ ಅಭಿಮಾನಿ ಬಳಗವಿರುವ ಖ್ಯಾತ ಬಾಲಿವುಡ್ ನಟಿ ಅಂತನ್ನುವುದಕ್ಕಿಂತ ಗಹನವಾದ ಮತ್ತೊಂದು ಕಾರಣವಿದೆ.

1994ರಲ್ಲಿ ಆಕೆ ವಿಶ್ವಸುಂದರಿಯಾಗಿ ಆಯ್ಕೆಯಾಗುವ ಸಂದರ್ಭ. ಫೈನಲ್ ಸುತ್ತಿನಲ್ಲಿ ಆಕೆಗೆ ಪ್ರತಿಸ್ಪರ್ಧಿಯಾಗಿ ದಕ್ಷಿಣ ಆಫ್ರಿಕಾದ ಸುಂದರಿ ನಿಂತಿದ್ದಳು. ಸ್ಪರ್ಧೆಯ ಆರಂಭದಿಂದಲೂ ಆಕೆ ಐಶ್ವರ್ಯಳಷ್ಟೇ ಸ್ಪರ್ಧೆ ಒಡ್ಡುತ್ತಲೇ ಬಂದಿದ್ದಳು. ... ಅಂತಿಮವಾಗಿ ಯಾರನ್ನು ಆಯ್ಕೆ ಮಾಡಬೇಕೆನ್ನುವ ಕೊನೆಯ ಘಟ್ಟಕ್ಕೆ ತೀರ್ಪುಗಾರರು ಬಂದು ತಲುಪಿದ್ದರು. ಬಾಹ್ಯ ಸೌಂದರ್ಯದ ಎಲ್ಲಾ ವಿಭಾಗಗಳಲ್ಲೂ ಇಬ್ಬರೂ ಅಪ್ಪಟ ಅದ್ಭುತ ಸುಂದರಿಯರೆ. ಇನ್ನು ಆ ವರ್ಷದ ನೈಜ ಸುಂದರಿಯನ್ನಾಗಿ ಘೋಷಿಸಲು ತೀರ್ಪುಗಾರರಿಗೆ ಉಳಿದದ್ದು 'ಅಂತರಿಕ ಸೌಂದರ್ಯ' ಸುತ್ತಿನ ಮಜಲು ಒಂದೇ. ಅಸಲಿಗೆ ವಿಶ್ವಸುಂದರಿ ಸ್ಪರ್ಧೆಯಲ್ಲಿ ಅದೊಂದು ಕಠಿಣವಾದ ಸುತ್ತು, ಅಲ್ಲಿ ವಿಶ್ವಸುಂದರಿಯಾಗಿ ಆಯ್ಕೆಯಾದ ನಂತರ ತಾವು ಯಾವ ಕ್ಷೇತ್ರದಲ್ಲಿ ಅಥವಾ ಯಾವ ಸೇವೆಯಲ್ಲಿ ತೊಡಗಿಕೊಳ್ಳಲು ಬಯಸುತ್ತೀರಿ ಎಂದು ಸ್ಪರ್ಧಿಗಳನ್ನು ಕೇಳಲಾಗುತ್ತದೆ. ಅಂತಹ ಪ್ರಶ್ನೆಗೆ ದಕ್ಷಿಣ ಆಫ್ರಿಕಾ ಬೆಡಗಿ ತನ್ನ ದೇಶದಲ್ಲಿರುವ ಜನಾಂಗೀಯ ತಾರತಮ್ಯ ಮತ್ತು ಸವಲತ್ತುಹೀನ ಪರಿಸ್ಥಿತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖಳಾಗಲು ಬಯಸುತ್ತೇನೆ ಎಂದಿದ್ದಳು. ಅದೇ ಪ್ರಶ್ನೆಯನ್ನು ಐಶ್ವರ್ಯ ರೈ ಮುಂದಿರಿಸಿದಾಗ 'I dedicate myself towards world's suffering little children and about poverty and inequalities of race, colour and sex' (ನಾನು ವಿಶ್ವಸುಂದರಿಯಾಗಿ ಆಯ್ಕೆಯಾದರೆ, ಪ್ರಪಂಚದಾದ್ಯಂತ ಸಂಕಷ್ಟದಲ್ಲಿರುವ ಮಕ್ಕಳ ಅಭ್ಯುದಯಕ್ಕಾಗಿ ಹಾಗೂ ಜನಾಂಗೀಯ, ವರ್ಣಭೇದ ಮತ್ತು ಲಿಂಗ ತಾರತಮ್ಯದ ವಿರುದ್ಧ, ಬಡತನ ನಿರ್ಮೂಲನೆಯ ಸಲುವಾಗಿ ಜಾಗೃತಿ ಮೂಡಿಸಲು ನನ್ನನ್ನು ತೊಡಗಿಸಿಕೊಳ್ಳುತ್ತೇನೆ) ಎಂದಿದ್ದಳು.

ಈಗ ಹೇಳಿ, ಕಿರೀಟ ಗಿಟ್ಟಿಸಿಕೊಳ್ಳುವಾಗ ಉದಾತ್ತ ಅಣಿಮುತ್ತು ಉದುರಿಸಿದ್ದ ಐಶ್ವರ್ಯ ಅಂತವಳಿಂದ ಇಂತಹ ಅಚಾತುರ್ಯ ನಡೆಯಬಹುದೆ? ಆಕೆಯ ಈ ಹೊಸ ಜಾಹಿರಾತು, ವೇದಿಕೆ ಮೇಲೆ ಆಕೆಯಾಡಿದ್ದ ಒಂದೊಂದು ಮಾತಿಗೂ ತದ್ವಿರುದ್ಧವಾಗಿದೆ. ಸಮಾಜದ ಸಂಕಷ್ಟಗಳೆಂದರೆ ಇಂತವರಿಗೆ 'ಪ್ರಖ್ಯಾತಿ'ಗಳನ್ನು ಬಾಚಿಕೊಳ್ಳಲು ಇರುವ ಅಸ್ತ್ರಗಳು ಮಾತ್ರವೇ ಎಂಬ ಆಕ್ರೋಶವೂ ಉಕ್ಕದೇ ಇರದು.

ಅಸಲಿಗೆ ಇಂಥಾ ಅವಘಡ ಈ ನಾಗರಿಕ ಸಮಾಜದ ಅಗ್ರಮಾನ್ಯರಿಂದ ಗೊತ್ತಿದ್ದೋ, ಗೊತ್ತಿಲ್ಲದೆಯೋ ಆಗುತ್ತಿರುವುದು ಇದೇ ಮೊದಲೇನಲ್ಲ. 2013ರ ಮೇನಲ್ಲಿ ಪಾಕಿಸ್ತಾನದ ವಿನ್ಯಾಸಗಾರ್ತಿ ಆಮ್ನಾ ಅಕೀಲ್ ತನ್ನ 'ಬಿ ಮೈ ಸ್ಲೇವ್' ಎಂಬ ಫ್ಯಾಶನ್ ಶೂಟ್‌ನಲ್ಲಿ ಇಂತದೇ ಪ್ರಮಾದ ಮಾಡಿದ್ದಳು. ಅಂದವಾಗಿ ಅದ್ದೂರಿ ಬಟ್ಟೆಯಲ್ಲಿ ರಾರಾಜಿಸುತ್ತಿದ್ದವಳಿಗೆ ಸಣ್ಣ ವಯಸ್ಸಿನ, ಸಣಕಲು, ಕಪ್ಪು ಬಣ್ಣದ ಹುಡುಗನೊಬ್ಬ ಛತ್ರಿ ಹಿಡಿದು ನೆರಳು ಮಾಡುವ ಸನ್ನಿವೇಶ ಅಲ್ಲಿತ್ತು. ಪಾಕಿಸ್ತಾನದಂತಹ ಪಾಕಿಸ್ತಾನದಲ್ಲೇ ಆ ಫೋಟೊ ವಿರುದ್ಧ ಆಕ್ರೋಶ ವ್ಯಕ್ತವಾಗಿತ್ತು. ಮಕ್ಕಳ ಹಕ್ಕು ಹರಣದ ಬಗ್ಗೆ ಮಾತುಗಳು ಕೇಳಿಬಂದಿದ್ದವು. ಅಂತವುಗಳಿಂದ ಪಾಠ ಕಲಿಯಬೇಕಿದ್ದ ಐಶ್ವರ್ಯ ಥೇಟು ಅದೇ ಫ್ರೇಮ್‌ನ ನಕಲಿನ ಜಾಹಿರಾತಿನಲ್ಲಿ ತಾನೇ ಮಿಂಚಿದ್ದಾಳೆ.

ಕಲ್ಯಾಣ್ ಬಂಗಾರಿಗಳ ಸಾರಥ್ಯದಲ್ಲಿ ಐಶ್ವರ್ಯ ರೈ ಇಂದ ಇಂಥಾ ಅಚಾತುರ್ಯ ನಡೆದಿರುವುದು ಗಮನಕ್ಕೆ ಬರುತ್ತಿದ್ದಂತೆಯೇ ಮಕ್ಕಳು ಹಕ್ಕು ಹೋರಾಟಗಾರರು, ಬರಹಗಾರರು, ಸಾಮಾಜಿಕ ಕಾರ್ಯಕರ್ತರು ಇಬ್ಬರಿಗೂ (ಸಂಸ್ಥೆ ಮತ್ತು ಐಶ್ವರ್ಯ ರೈ) ಒಂದೊಂದು ಬಹಿರಂಗ ಪತ್ರ ಬರೆದು ಅವರಿಂದ ಸಮಾಜದ ಮೇಲೆ ಉಂಟಾಗಬಹುದಾದ ದುಷ್ಪರಿಣಾಮವನ್ನು ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿದ್ದರು. ವಿಷಯ ಬೆಳಕಿಗೆ ಬರುತ್ತಿದ್ದಂತೆಯೇ ಕಲ್ಯಾಣ್ ಜ್ಯೂಯಲರ್ಸ್ ಸಂಸ್ಥೆ ಇದು ತಮ್ಮಿಂದ ಗೊತ್ತಿಲ್ಲದೇ ಆದ ಪ್ರಮಾದ ಎಂಬ ಕ್ಷಮಾಪಣೆ ಕೇಳಿ ಜಾಹಿರಾತನ್ನು ವಾಪಾಸ್ ಪಡೆಯುವುದಾಗಿ ಪ್ರಕಟಿಸಿತು. ಆದರೆ ಐಶ್ವರ್ಯ ರೈ ಈ ವಿಚಾರದಲ್ಲಿ ತುಟಿ ಬಿಚ್ಚಿಲ್ಲ. ಆಕೆಯ ಬದಲಿಗೆ ಆಕೆಯ ಮಾಧ್ಯಮ ಸಲಹಾಗಾರ್ತಿ ಅರ್ಚನಾ ಸದಾನಂದ ಸಾಮಾಜಿಕ ಜಾಲತಾಣದಲ್ಲಿ ಟ್ವೀಟ್ ಮಾಡಿ 'ಇದನ್ನು ನಮ್ಮ ಗಮನಕ್ಕೆ ತಂದು ಉಪಕಾರ ಮಾಡಿದ್ದೀರಿ. ಇದು ಖಂಡಿತವಾಗಿಯೂ ನಮ್ಮ ಅರಿವಿಗೆ ಮೀರಿದ ಅಚಾತುರ್ಯ. ಈ ಆ್ಯಡ್‌ಗೆ ಫೋಟೊ ಶೂಟ್ ಮಾಡುವಾಗ ಐಶ್ವರ್ಯ ಒಬ್ಬರೇ ಫೋಟೊ ಎಡಿಷನ್ ನೀಡಿದ್ದರು (ಅದನ್ನು ಸ್ಪಷ್ಟೀಕರಿಸಲೆಂಬಂತೆ ಅದೇ ಭಂಗಿಯಲ್ಲಿ ಐಶ್ವರ್ಯ ಒಬ್ಬಳೇ ಇರುವ ಫೋಟೊವನ್ನು ಅವರು ಅಪ್‌ಲೋಡ್ ಮಾಡಿದ್ದರು). ಆದರೆ ಆನಂತರ ಜಾಹಿರಾತು ವಿನ್ಯಾಸ ತಂಡ ಗ್ರಾಫಿಕ್ಸ್ ಬಳಸಿ ಜಾಹಿರಾತನ್ನು ರಚಿಸಿದೆ. ನಿಮ್ಮ ಸಲಹೆಯನ್ನು ನಾವು ಖಂಡಿತ ಜಾಹಿರಾತು ವಿನ್ಯಾಸ ವಿಭಾಗದವರಿಗೆ ತಿಳಿಸುತ್ತೇವೆ' ಎಂಬುದಾಗಿ ಪ್ರತಿಕ್ರಿಯಿಸಿದ್ದಾರೆ.

ಮೇಲ್ನೋಟಕ್ಕಿದು ಪ್ರಮಾದವನ್ನು ಒಪ್ಪಿಕೊಂಡಂತೆ ಕಂಡುಬಂದರೂ ಕ್ಷಮೆ ಕೇಳುವ ಅಥವಾ ಪ್ರಮಾದದಲ್ಲಿ ತಮ್ಮ ಭಾಗಿತ್ವವನ್ನು ಒಪ್ಪಿಕೊಳ್ಳುವ ಉದ್ದೇಶ ಆಕೆಗೆ ಮತ್ತು ಆಕೆಯ ಸಲಹೆಗಾರ್ತಿಗೆ ಇಲ್ಲದಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ತಪ್ಪನ್ನು ಜಾಹಿರಾತು ವಿನ್ಯಾಸ ತಂಡದ ಮೇಲೆ ಹಾಕಿ ತಾವು ಅಮಾಯಕರಾಗುವ ಪ್ರಯತ್ನ ಆ ಟ್ವೀಟ್‌ನಲ್ಲಿದೆ. ಹೌದು, ಖಂಡಿತ ಇದು ಸಹಜ. ಸಾಮಾನ್ಯವಾಗಿ ಜಾಹಿರಾತೊಂದನ್ನು ಸಿದ್ಧಪಡಿಸುವಾಗ ಬೇಕಾದ ಭಂಗಿಯ ಫೋಟೊಗಳನ್ನು ಪ್ರತ್ಯೇಕವಾಗಿ ತೆಗೆದುಕೊಂಡು ನಂತರ ಗ್ರಾಫಿಕ್ಸ್‌ನಲ್ಲಿ ಅವನ್ನೆಲ್ಲಾ ತಾವಂದುಕೊಂಡ ರೂಪಕ್ಕೆ ತಂದು ಬಿಡುಗಡೆ ಮಾಡಲಾಗುತ್ತೆ. ಆದರೆ, ಆ ಮಾಡೆಲ್‌ಗಳಿಗೆ, ಅದರಲ್ಲೂ ಖ್ಯಾತ ಸಿನಿಮಾ ನಟರು ಮಾಡೆಲ್‌ಗಳಾಗಿದ್ದಾಗ ಅವರಿಗೆ ಅಂತಿಮ ರೂಪದ ಜಾಹಿರಾತು ವಿನ್ಯಾಸ ತೋರಿಸಿ ಅನುಮತಿ ಪಡೆಯದೆಯೇ ಬಿಡುಗಡೆಗೊಳಿಸಲಾಗುತ್ತದಾ? ಹಾಗಿದ್ದಿದ್ದರೆ ಐಶ್ವರ್ಯ ರೈಳ ಫೋಟೊ ಇಟ್ಟುಕೊಂಡು ವಿನ್ಯಾಸಗಾರರು ಏನೇನೆಲ್ಲಾ ಮಾಡಿಬಿಡುಬಹುದಲ್ಲವೇ? ಆ ಎಚ್ಚರಿಕೆಯ ಕಾರಣಕ್ಕಾದರು ಅವರು ಕೊನೆಗೊಮ್ಮೆ ಖಂಡಿತ ಜಾಹಿರಾತು ವಿನ್ಯಾಸವನ್ನು ವೀಕ್ಷಿಸಿಯೇ ಇರುತ್ತಾರೆ. ನಿಜಕ್ಕೂ ಆಕೆಗೆ 1994ರಲ್ಲಿ ತಾನಾಡಿದ್ದ ಮಾತುಗಳ ಮೇಲೆ ಕಾಳಜಿ ಇದ್ದಿದ್ದರೆ, ಅವಳ ಅಂತರಾಳದಿಂದ ಅವು ಧ್ವನಿಸಿದ್ದರೆ ತನ್ನ ಆಶಯವನ್ನು ಅಣಕಿಸುವಂತಿದ್ದ ಆ ಜಾಹಿರಾತನ್ನು ನೋಡುತ್ತಿದ್ದಂತೆಯೇ ತಿರಸ್ಕರಿಸುತ್ತಿದ್ದಳು.

ಆದರೆ ಕಲ್ಯಾಣ್ ಜ್ಯೂಯಲರ್ಸ್‌ನ ಹಣ ಮತ್ತು ಅದ್ದೂರಿತನದ ಮುಂದೆ ಆಕೆಗೆ ಅದ್ಯಾವುದು ಕಾಣಿಸಿಯೇ ಇಲ್ಲ. ಈಗ ಆ ತಪ್ಪನ್ನು ಒಪ್ಪಿಕೊಳ್ಳುವ ಸೌಜನ್ಯವನ್ನೂ ತೋರದೆ ಮತ್ಯಾರದೋ ತಲೆಗೆ ಪ್ರಮಾದವನ್ನು ವರ್ಗಾಯಿಸಿ ಮುಗ್ಧೆಯಾಗಲು ಹವಣಿಸುತ್ತಿರುವುದು ಸ್ಪಷ್ಟವಾಗಿದೆ.

ಇದು ಒಂದು ಸಾಂಕೇತಿಕ ಪ್ರಕರಣ ಮಾತ್ರ. ತಮ್ಮನ್ನು ಆರಾಧಿಸುವ, ಅಭಿಮಾನಿಸುವ ಲಕ್ಷಾಂತರ ಸಂಖ್ಯೆಯ ಅಭಿಮಾನಿಗಳನ್ನು ಹೊಂದಿದ ಸಿನಿಮಾ ಮಂದಿ ಸಂವೇದನೆಯನ್ನು ಕಳೆದುಕೊಂಡರೆ ಅನಾಹುತ ಸೃಷ್ಟಿಸಬಲ್ಲರು. ತಮ್ಮ ಫ್ಯಾಂಟಸಿಯ ಜಂಜಡದ ನಡುವೆಯೇ ಒಂದಿಷ್ಟು ಮಾನವೀಯ ಮೌಲ್ಯಗಳನ್ನು ರೂಢಿಸಿಕೊಂಡರೆ ಒಂದು ಹೊಸತನಕ್ಕೆ ನಾಂದಿಯೂ ಆಗಬಲ್ಲದು.

■ ಗಿರೀಶ್ ತಾಳಿಕಟ್ಟೆ

ಮಂಡ್ಯ: ಖಾಕಿವಾಲಾಗಳ 'ಬೆನಿಫಿಟ್' ನಾಮ!



ಪ್ರಕಾಶ್

ಜನ ಮನೆಮಠ ಕಳೆದುಕೊಳ್ಳಬಾರದೆನ್ನುವ ಕಾರಣಕ್ಕೆ ಸರ್ಕಾರವೇ ರಾಜ್ಯದಲ್ಲಿ ಎಲ್ಲಾ ಬಗೆಯ ಲಾಟರಿ ವ್ಯವಹಾರವನ್ನು ಬಂದ್ ಮಾಡಿದೆ. ಆದರೆ ಮಂಡ್ಯದಲ್ಲಿ ವಂಚಕ ತ್ರಿಮೂರ್ತಿಗಳ ತಂಡವೊಂದು ಲಾಟರಿ ದಂಧೆಗೆ 'ಬೆನಿಫಿಟ್ ಸ್ಕೀಮ್' ಎಂಬ ಹೊಸ ನಾಮಕರಣ ಮಾಡಿ ಮುಗ್ಧ ಜನರನ್ನು ಭರ್ಜರಿಯಾಗಿ ವಂಚಿಸುತ್ತಿದ್ದಾರೆ. ವಿಪರ್ಯಾಸವೆಂದರೆ ಇಂತಹ ಮೋಸದ ದಂಧೆ ನಡೆಸುತ್ತಿರುವುದು ಪೊಲೀಸ್ ಸಿಬ್ಬಂದಿಗಳು. ಶ್ರೀರಂಗಪಟ್ಟಣದ ಪೊಲೀಸ್ ಠಾಣೆಯ ಪೇದೆಗಳಾದ ನಾಗರಾಜುಗೌಡ, ಪ್ರಕಾಶ್ ಮತ್ತು ನಿವೃತ್ತ ಪೇದೆ ಸಿದ್ದರಾಜು ಸೇರಿ ಹುಟ್ಟುಹಾಕಿದ್ದ 'ನಿಮಿಷಾಂಬ ಬೆನಿಫಿಟ್ ಸ್ಕೀಂ' ಅತ್ಯಲ್ಪ ಕಾಲಾವಧಿಯಲ್ಲೇ ಹತ್ತಾರು ಕೋಟಿಯನ್ನು ಗುಳುಂ ಮಾಡಿದೆ. ಮಂಡ್ಯ ಜಿಲ್ಲೆಯ ಪ್ರತಿ ತಾಲ್ಲೂಕು, ಹೋಬಳಿ ಕೇಂದ್ರಗಳಲ್ಲೂ ಭರ್ಜರಿಯಾಗಿ ನಡೆಯುತ್ತಿರುವ ಈ ವಂಚನೆ ಇದೀಗ ಬೆಂಗಳೂರಿಗೂ ಪಸರಿಸುತ್ತಿದೆ.

ಏನಿದು ಬೆನಿಫಿಟ್ ಸ್ಕೀಮು?

ಈ ಮೂವರು ಖಾಕಿಯಪ್ಪಂದಿರು ಖತರ್ನಾಕ್ ಐಡಿಯಾ ಉಪಯೋಗಿಸಿ ಜನ್ಮಕೊಟ್ಟಿದ್ದೇ ಈ ನಿಮಿಷಾಂಬ ಬೆನಿಫಿಟ್ ಸ್ಕೀಮು. ಇದರಲ್ಲಿ ಪ್ರತಿ ವಾರ ನೀವು ನೂರು ರೂಪಾಯಿ ಕಟ್ಟುತ್ತಾ ಹೋದರೆ ಪ್ರತಿ ವಾರ ಲಾಟರಿ ಮೂಲಕ 60-70 ಅದೃಷ್ಟಶಾಲಿಗಳನ್ನು ಆರಿಸಿ ಕಾರು, ಟಿವಿ, ಬೈಕ್, ಡಿವಿಡಿ ಪ್ಲೇಯರ್, ಕಂಪ್ಯೂಟರ್, ಮೊಬೈಲ್, ಬೆಳ್ಳಿಬಟ್ಟಲು, ಕುಕ್ಕರ್ ಸೇರಿದಂತೆ ಹಲವು ವಸ್ತುಗಳನ್ನು ನೀಡಲಾಗುತ್ತದೆ ಅಂತ ಘೋಷಿಸಿದ್ದರು. ಐದು ಮತ್ತು ಹತ್ತನೇ ವಾರ ಮಾತ್ರ ನೂರಕ್ಕೆ ಬದಲಾಗಿ ಇನ್ನೂರು ರೂಪಾಯಿ ಕಟ್ಟಬೇಕೆಂಬ ಷರತ್ತು ಇತ್ತು, ಅಂದಹಾಗೆ, ಈ ಲಾಟರಿ ನಡೆಯುತ್ತಿದ್ದದ್ದು 12 ವಾರದವರೆಗೆ ಮಾತ್ರ. ಅಷ್ಟರೊಳಗೆ ಹಣ ಕಟ್ಟಿದ ಎಲ್ಲರಿಗೂ ಒಂದಿಲ್ಲೊಂದು ಲಾಟರಿ ಬಂದೇ ತೀರುತ್ತದೆ ಎಂದು ಪ್ರಚಾರ ಮಾಡಲಾಗಿತ್ತು, ಪ್ರತಿ ವಾರ ನೂರು ರೂಪಾಯಿ ಅಂದುಕೊಂಡರೂ 12 ವಾರಕ್ಕೆ 1200 ರೂಪಾಯಿ ಆಗುತ್ತೆ, ನಡುವೆ ಎರಡು ವಾರ ಹೆಚ್ಚುವರಿ ನೂರು ರೂಪಾಯಿ ಸೇರಿಸಿಕೊಂಡರೂ 1400 ರೂಪಾಯಿಯನ್ನು ಮೀರುವುದಿಲ್ಲ, ಅಂತದ್ದರಲ್ಲಿ ಆನಾಮತ್ತು ಕಾರು, ಬೈಕು, ಟಿವಿ, ಕಂಪ್ಯೂಟರ್‌ನಂತಹ ದುಬಾರಿ ಐಟಮ್ಮುಗಳು ಮನೆ ಸೇರಿಕೊಳ್ಳುತ್ತವೆಂದರೆ ಯಾರಿಗೆ ತಾನೆ ಆಸೆ ಹುಟ್ಟುವುದಿಲ್ಲ, ಜನರನ್ನು ಸೆಳೆಯುವ ಅವರ ತಂತ್ರ ಇಲ್ಲಿಗೇ ಕೊನೆಯಾಗಿರಲಿಲ್ಲ, ಮತ್ತೂ ಒಂದು ಆಫರ್ ಇಟ್ಟಿದ್ದರು. ಏನೆಂದರೆ ನಿಮ್ಮ ಹೆಸರಿಗೆ ಮೊದಲ ವಾರದಲ್ಲೇ ಕಾರೊ, ಬೈಕೊ, ಟೀವಿಯೊ ಲಾಟರಿ ಹೊಡೀತು ಅಂತಿಟ್ಟುಕೊಳ್ಳಿ, ಅಲ್ಲಿಂದಾಚೆಗಿನ ಕಂತುಗಳಿಗೆ ನೀವು ನೂರು ರೂಪಾಯಿ ಕಟ್ಟುವ ಅಗತ್ಯವೇ ಇಲ್ಲ, ಯಾವ ವಾರ ನಿಮಗೆ ಲಾಟರಿ ಹೊಡೆಯುತ್ತೋ ಅಲ್ಲಿಗೆ ನಿಮ್ಮ ಆಟ ಮುಗೀತು (!) ಐಟಂ ಸಮೇತ ಬೆಚ್ಚಗೆ ಮನೆ ಸೇರಿಕೊಂಡು ಬಿಡಿ ಅಂತ ಜನರನ್ನು ಪುಸಲಾಯಿಸಿದ್ದರು. ಒಂದೊಮ್ಮೆ ಹನ್ನೆರಡೂ ವಾರದಲ್ಲಿ ನಮಗೆ ಲಾಟರಿ ಹೊಡೆಯದಿದ್ದರೆ ನಾವು ಕಟ್ಟಿದ ಹಣ ಗೋತಾ ಅಲ್ಲವಾ? ಅಂತ ಕೇಳಿದ 'ಬುದ್ಧಿಜೀವಿ'ಗಳನ್ನು ಸಂತೈಸಲೂ ಒಂದು ಒಕ್ಕಣೆ ರೆಡಿ ಮಾಡಿಟ್ಟುಕೊಂಡಿದ್ದರು. ಏನೆಂದರೆ, 12ನೇ ವಾರದಲ್ಲಿ ಲಾಟರಿ ವಿಳದೆ ಉಳಿಯುವ 3200 ಮಂದಿಗೆ 25 ಗ್ರಾಂ ಬೆಳ್ಳಿ ದೀಪ ಕೊಡುತ್ತೇವೆ ಅಂತಂದಿದ್ದರು. ಯಾವ ಕಡೆಯಿಂದ ನೋಡಿದರೂ ನಾವು ಕಟ್ಟಿದ ಹಣಕ್ಕೆ ಲುಕ್ಸಾನು ಇಲ್ಲ ಎನ್ನುವ ಭಾವನೆ ಜನರಲ್ಲಿ ಮೂಡಲು ಏನೇನು ಮಾಡಬೇಕೊ ಅದನ್ನೆಲ್ಲಾ ಮಾಡಿದ್ದರು.


ತಮ್ಮ ಈ ಪ್ಲಾನ್ ಅನ್ನು ದುಬಾರಿ ವಿನೈಲ್ ಪ್ರಿಂಟಿಂಗ್‌ನಲ್ಲಿ ಕಲರ್‌ಫುಲ್ಲಾಗಿ ಮುದ್ರಿಸಿ ಜನಕ್ಕೆ ಹಂಚಿದ್ದೇ ತಡ, ಅದರಲ್ಲಿದ್ದ ಕಾರು, ಬೈಕು, ಎಲ್‌ಇಡಿ ಟಿವಿ, ಮೊಬೈಲು, ಡಿವಿಡಿ ಪ್ಲೇಯರು, ವಾಷಿಂಗ್‌ಮಷಿನ್ನು ವಗೈರಾ

ವಗೈರಾಗಳನ್ನು ನೋಡಿದ ಜನ ವಂಚಕರ ಜೇಬು ತುಂಬಿಸಲು ಸಾಲುಗಟ್ಟಿ ನಿಂತಿದ್ದರು. ನಂಬಿದರೆ ನಂಬಿ-ಬಿಟ್ಟರೆ ಬಿಡಿ, ಮಂಡ್ಯ ಜಿಲ್ಲೆಯೊಂದರಲ್ಲೆ ಅಂತಹ ಒಂದೊಂದು ಲಾಟರಿಗೂ ಸುಮಾರು ಹತ್ತು ಸಾವಿರ ಮಂದಿ ಕಾಸು ಹಾಕಿ ಆಸೆಗಣ್ಣು ಬಿಟ್ಟು ಕುಳಿತಿದ್ದರು.

10,000 ಮಂದಿಯಿಂದ 100 ರೂ.ಗಳಂತೆ ಹಣ ಕಟ್ಟಿಸಿಕೊಂಡರೆ 1ನೇ ವಾರಕ್ಕೆ 10 ಲಕ್ಷ ರೂ. ಈ ವಂಚಕ ತ್ರಿಮೂರ್ತಿಗಳ ಜೇಬು ಸೇರುತ್ತದೆ. ಇದರಲ್ಲಿ ಮೊದಲನೇ ವಾರ ಒಬ್ಬರಿಗೆ ಹೀರೋ ಹೋಂಡಾ ಬೈಕ್, ಮೈಕ್ರೋಮ್ಯಾಕ್ಸ್ ಎಲ್‌ಇಡಿ ಟಿವಿ, 5 ಗ್ರಾಂ ಚಿನ್ನ, ಇಬ್ಬರಿಗೆ ಸ್ಯಾಮ್‌ಸಂಗ್ ಮೊಬೈಲ್ ಕೋರ್ 2, ಇಬ್ಬರಿಗೆ ಡ್ರೆಸ್ಸಿಂಗ್ ಟೇಬಲ್, 10 ಜನರಿಗೆ 10 ಲೀ ಕುಕ್ಕರ್, 30 ಜನರಿಗೆ 25 ಗ್ರಾಂ ಬೆಳ್ಳಿ ಬಟ್ಟಲು, 10 ಜನರಿಗೆ ಫ್ಯಾನ್, 10 ಜನರಿಗೆ ಸ್ಯಾನ್‌ಸುಯ್ ಮೊಬೈಲ್, ಒಬ್ಬರಿಗೆ ಸ್ಯಾಮ್‌ಸಂಗ್ ಅಡ್ವಾನ್ಸ್ ಮೊಬೈಲ್, ಒಬ್ಬರಿಗೆ ಬಜಾಜ್ ಮಿಕ್ಸಿ ಕೊಡುವುದಾಗಿ ಹೇಳಿದ್ದರು. ಅವರು ನಿಯತ್ತಾಗಿ ಅಷ್ಟೂ ಐಟಮ್ಮುಗಳನ್ನು ಕೊಟ್ಟಿದ್ದರೂ, ಹೀರೋಹೊಂಡಾ ಬೈಕ್‌ಗೆ 60 ಸಾವಿರ, ಮೊಬೈಲ್‌ಗೆ 30 ಸಾವಿರ, 5 ಗ್ರಾಂ ಚಿನ್ನಕ್ಕೆ 15 ಸಾವಿರ, 10 ಕುಕ್ಕರ್‌ಗೆ 10 ಸಾವಿರ ರೂ, 10 ಫ್ಯಾನ್‌ಗೆ 12 ಸಾವಿರ, 10 ಸ್ಯಾನ್‌ಸುಯ್ ಮೊಬೈಲ್‌ಗೆ 15 ಸಾವಿರ, ಒಂದು ಸ್ಯಾಮ್‌ಸಂಗ್ ಅಡ್ವಾನ್ಸ್ ಮೊಬೈಲ್‌ಗೆ 18 ಸಾವಿರ, ಒಂದು ಬಜಾಜ್ ಮಿಕ್ಸಿಗೆ 3 ಸಾವಿರ ರೂ, ಎರಡು ಡ್ರೆಸ್ಸಿಂಗ್‌ಟೇಬಲ್‌ಗೆ 10 ಸಾವಿರ ರೂಪಾಯಿ ಅಂತಂದುಕೊಂಡರೂ 2.10 ರಿಂದ 2.25 ಲಕ್ಷ ರೂಗಳಿಗೆ ಮುಗಿದುಹೋಯ್ತು, ಇನ್ನುಳಿದ ಭರ್ತಿ 7.50 ಲಕ್ಷ ರೂ. ತ್ರಿಮೂರ್ತಿಗಳಿಗೆ ಭರ್ಜರಿ ಲಾಭವೇ ಸರಿ.

ಬರೀ ದಗಲ್ಬಾಜಿ

ಆದರೆ ಅಷ್ಟು ಅನಾಯಾಸವಾಗಿ ವ್ಯವಹಾರವನ್ನು ಮುಗಿಸುವವರಾಗಿದ್ದರೆ ಇಂತಹ ಸ್ಕೀಮನ್ನು ಅವರು ಹುಟ್ಟುಹಾಕುತ್ತಲೇ ಇರಲಿಲ್ಲ, ಅವರು ಮೊದಲೇ ವಿಧಿಸಿದ ನಿಯಮದಂತೆ ಒಂದು ಲಾಟರಿಯಲ್ಲಿ ಒಟ್ಟು 10,000 ಸದಸ್ಯರಿರುತ್ತಾರೆ. ಗೋಲ್‌ಮಾಲ್ ನಡೆಯುತ್ತಿದ್ದುದೇ ಇಲ್ಲಿ, ಸುಮಾರು ಆರರಿಂದ ಎಂಟು ಸಾವಿರ ಮಂದಿ ಹಣ ಕಟ್ಟುವ ಪ್ರಾಮಾಣಿಕ ಗಿರಾಕಿಗಳಾಗಿದ್ದರೆ ಇನ್ನುಳಿದವೆಲ್ಲಾ ಅವರೇ ಸೃಷ್ಟಿಸಿಕೊಂಡ ಬೋಗಸ್ ಬಿಲ್ಲುದಾರರು. ಅಂದರೆ ದುಬಾರಿಯ (ಕಾರು, ಬೈಕು, ಇತ್ಯಾದಿ) ಐಟಮ್ಮುಗಳೆಲ್ಲಾ ಲಾಟರಿಯಲ್ಲಿ ಹೊಡೆಯುತ್ತಿದ್ದುದು ಈ ಬೋಗಸ್



ನಿಮಿಷಾಂಬ ಬೆನಿಫಿಟ್ಸ್ ಸ್ಕೀಮ್‌ನ ಬ್ರೋಷರ್

ಹೆಸರುಗಳಿಗೆ. ಹಣ ಕಟ್ಟಿದವರಿಗೆ ಸಿಗುತ್ತಿದ್ದುದು ಸಣ್ಣಪುಟ್ಟ ಐಟಮ್‌ಗಳು ಮಾತ್ರ ಅವು ಕೂಡಾ ಕಳಪೆ ಗುಣಮಟ್ಟದವು! ಇನ್ನು ಲಾಟರಿ ವಿಳದ ದುರ್ದೈವಿ 3200 ಗ್ರಾಹಕರ ವಿಚಾರಕ್ಕೆ ಬರೋಣ. ಇವರ ನಿಬಂಧನೆಯಂತೆ ಅವರೆಲ್ಲರಿಗೂ 25 ಗ್ರಾಂ ಬೆಳ್ಳಿದೀಪಗಳನ್ನು ನೀಡಲಾಗುತ್ತೆ, ಅಸಲಿಗೆ 12 ವಾರಕ್ಕೆ ಒಬ್ಬ ಸದಸ್ಯ ಒಟ್ಟು 1400 ರೂ. ಕಟ್ಟಿರುತ್ತಾನೆ. 25 ಗ್ರಾಂ ಬೆಳ್ಳಿಯ ಬೆಲೆ 900 ರೂ. ಮಾತ್ರ. 1400 ರೂಪಾಯಿ ಕಟ್ಟಿಸಿಕೊಂಡು 900 ರೂ. ಬೆಲೆಬಾಳುವ ಬೆಳ್ಳಿ ಕಟ್ಟು ಮನೆಗೆ ಗದುಮುವ ಪ್ಲಾನು ಹೇಗಿದೆ ನೋಡಿ.


ಮಂಡ್ಯ ನಗರದಲ್ಲಿ ನಡೆಯುವ ವಿನಾಯಕ ಬೆನಿಫಿಟ್ ಸ್ಕೀಮ್‌ನಲ್ಲಿ ಕಡೆಯಲ್ಲಿ ಉಳಿಯುವ 4ರಿಂದ 5 ಸಾವಿರ ಜನರಿಗೆ ಐರನ್ ಬಾಕ್ಸ್ ಹಾಗೂ ಕಬ್ಬಿಣದ ಸಿಂಗಲ್ ಗ್ಯಾಸ್ ಸ್ಟೌವ್ ಕೊಡುವುದಾಗಿ ಹೇಳಿದ್ದಾರೆ. ಇವೆರಡೂ ಸಾವಿರವನ್ನು ಮೀರುವುದಿಲ್ಲ, ಆದರೆ ಕಟ್ಟಿಸಿಕೊಳ್ಳುವ ಹಣ 12 ವಾರಕ್ಕೆ 1600 ರೂ. ಇಲ್ಲೂ ಕೂಡ ಕಂಡಹಾಗೆ ಒಬ್ಬ ವ್ಯಕ್ತಿಯಿಂದ 700 ರೂ.ನಿಂದ 800 ರೂ. ಸಿಗುತ್ತದೆ. ಸಾಲ್ಪನಿಂದ ಐದು ಸಾವಿರ ಜನಕ್ಕೆ 700 ರೂ. ಎಂದರೂ 35 ಲಕ್ಷದಷ್ಟು ಹಣ ಈ ಸ್ಕೀಮ್ ನಡೆಸುವವರ ಜೇಬು ಸೇರುತ್ತೆ, ಒಟ್ಟಾರೆ 50 ಲಕ್ಷಕ್ಕೂ ಹೆಚ್ಚು ಹಣ ಇವರ ಜೇಬು ಸೇರುತ್ತದೆ.

ಡ್ರಾನಲ್ಲೂ ಮೋಸ

ಇನ್ನು ಇಷ್ಟು ದುಬಾರಿ ವಹಿವಾಟು ನಡೆಸುವ ಸ್ಕೀಮಿಗೆ ಒಂದು ತನ್ನದೇ ಆದ ಜಾಗವಿಲ್ಲ, ಒಂದೊಂದು ವಾರ ಒಂದೊಂದು ಹಳ್ಳಿಯಲ್ಲಿ ನಿಮ್ಮ ಕಣ್ಮುಂದೆಯೇ ಡ್ರಾ ಮಾಡ್ತೀವಿ ಅನ್ನೋ ಸಬೂಬು ಹೇಳಿಕೊಂಡು ತಿರುಗಾಡುತ್ತಿದ್ದರು. ಡ್ರಾಗೂ ಮುನ್ನ ಎಲ್ಲಿ ಡ್ರಾ ನಡೆಯುತ್ತೆ ಅನ್ನೋದನ್ನು ಹೇಳ್ತೀವಿ ಅಂತಿದ್ದರಾದರು ಮಾಹಿತಿಯನ್ನೇ ಕೊಡುತ್ತಿರಲಿಲ್ಲ, ಕೊನೆಗೆ ಫೋನ್ ಮಾಡಿ ವಿಷಯ ತಿಳಿದುಕೊಂಡು ಸ್ಥಳಕ್ಕೆ ಹೋದರೆ 'ಆಗಲೇ ಡ್ರಾ ಮುಗಿದು ಹೋಯ್ತು' ಅಂತ ನೆಪ ಹೇಳಿ ಸಾಗ ಹಾಕುತ್ತಿದ್ದರು.

ಈ ಸ್ಕೀಂಗಳಿಗೆ ಒಬ್ಬ ಸದಸ್ಯರನ್ನು ಹಿಡಿದುಕೊಟ್ಟರೆ 10ರಿಂದ 15 ಪರ್ಸೆಂಟ್ ಕಮಿಷನ್ ಕೊಡುವುದಾಗಿ ಏಜೆಂಟರಿಗೆ ಹೇಳುವುದರಿಂದ ಅವರು ಕಮಿಷನ್ ಆಸೆಗಾಗಿ ನೂರಾರು ಜನರನ್ನು ಈ ಬೆನಿಫಿಟ್ ಸ್ಕೀಮ್‌ಗಳಿಗೆ ತಂದು ಸೇರಿಸುತ್ತಿದ್ದಾರೆ. ಸಾಮಾನ್ಯವಾಗಿ ಇಂತಹ ಸ್ಕೀಮುಗಳ ಗಾಳಕ್ಕೆ ಸಿಕ್ಕಿಕೊಳ್ಳುವುದು ಮಹಿಳೆಯರೇ ಎಂಬುದನ್ನು ಚೆನ್ನಾಗಿ ಅರಿತಿದ್ದ ಅವರು ಸ್ತ್ರೀಶಕ್ತಿ ಸಂಘಗಳ ಸದಸ್ಯರಿಗೆ ಕಮೀಷನ್‌ಕೊಟ್ಟು ಜನರಿಂದ ದುಡ್ಡು ಹಾಕಿಸಲು ಗುತ್ತಿಗೆ ನೀಡುತ್ತಿದ್ದರು. ಒಂದು ವೇಳೆ ಸ್ಕೀಮ್ ಕಾಲೆತ್ತಿಕೊಂಡರೆ ಜನ ಹಿಡಿದುಕೊಳ್ಳುವುದು ಏಜೆಂಟರನ್ನೇ ಎಂಬ ಸತ್ಯ ಗೊತ್ತಿದ್ದರೂ, ಹಾಗಾಗುವುದಿಲ್ಲ ಎಂಬ ಸ್ಕೀಂ ಪಾಲುದಾರರ ಹೇಳಿಕೆಯನ್ನು ನಂಬಿ ಜನರಿಂದ ಹಣ ಕಟ್ಟಿಸುತ್ತಿದ್ದಾರೆ.


ತಮ್ಮ ಸದಸ್ಯರಿಂದ ಹಣ ಕಟ್ಟಿಸುವ ಏಜೆಂಟ್‌ಗಳಿಗೆ ಈ ಗೋಲ್‌ಮಾಲ್ ಡ್ರಾದ ಬಗ್ಗೆ ಗೊತ್ತಿರುವುದಿಲ್ಲ, ಅವರು ತಾವು ನೋಂದಾಯಿಸಿದ ಸದಸ್ಯರಿಂದ ಹಣ ಪಡೆದು ಕಟ್ಟಿಸುತ್ತಲೇ ಹೋಗುತ್ತಾರೆ. ಕೊನೆಗೆ ತಾವು ಕಟ್ಟಿದ ಹಣಕ್ಕೂ ಕಡಿಮೆ ಮೌಲ್ಯದ ವಸ್ತುವನ್ನು ಪಡೆದು ನಮಗೆ ಅದೃಷ್ಟವಿಲ್ಲ ಅಂತಂದುಕೊಂಡು ಸುಮ್ಮನಾಗುತ್ತಾರೆ. ಈ ಸ್ಕೀಂ ನಡೆಸುವ ವಂಚಕರು 10 ಸಾವಿರ ಮಂದಿಯ ಹೆಸರನ್ನು ಎಲ್ಲರಿಗೂ ತೋರಿಸಿ ಹಾಕುತ್ತಾರಾ ಎಂದರೆ ಅದೂ ಇಲ್ಲ, ಡ್ರಾ ನಡೆಯುವ ಸಂದರ್ಭದಲ್ಲಿ 10 ಸಾವಿರ ಮಂದಿ ಹಾಜರಿರುವುದಿಲ್ಲ, 100 ರಿಂದ 200 ಮಂದಿ ಮಾತ್ರ ಹಾಜರಿರುತ್ತಾರೆ. ಹಾಗಾಗಿ ವಂಚಕರಿಗೆ ಇಷ್ಟು ಜನರನ್ನು ಯಾಮಾರಿಸುವುದು ಬಹಳ ಸುಲಭ.



ಹಣ ಕಟ್ಟಿಸಿಕೊಂಡಿರುವುದು

ಬಹುಮಾನವೇ ಬರಲಿಲ್ಲ


ಬುಲೆಟ್, ಹೀರೋಹೋಂಡಾ ಬೈಕು, ಸ್ಯಾಮ್‌ಸಂಗ್ ಮೊಬೈಲ್ ಬರುತ್ತದೆ ಎಂದುಕೊಂಡಿದ್ದ ಜನ ಇವ್ಯಾವು ಬರದಿದ್ದಾಗ ಅನುಮಾನಗೊಂಡು ಸತ್ಯಾಸತ್ಯತೆ ಪರಿಶೀಲಿಸಲು ಮುಂದಾದಾಗಲೇ ತ್ರಿಮೂರ್ತಿಗಳ ನಿಜಬಣ್ಣ ಬಯಲಿಗೆ ಬಂದಿದ್ದು. 10 ಸಾವಿರ ಮಂದಿಯಲ್ಲಿ ಬೋಗಸ್ ಇದ್ದು 2 ಸಾವಿರ ಜನರಿಗೆ ಭಾರೀ ಮೌಲ್ಯದ ಬಹುಮಾನಗಳನ್ನು ಡ್ರಾದಲ್ಲಿ ಬಂದ ಹಾಗೆ ಮಾಡಿ, ಕಡಿಮೆ ಮೌಲ್ಯದ ಬಹುಮಾನಗಳು ಅಧಿಕೃತ ಚೀಟಿದಾರರಿಗೆ ಬರುವಂತೆ ಮಾಡುತ್ತಿದ್ದುದು ಗೊತ್ತಾಯಿತು. ಬಹುಮಾನ ವಿಜೇತರಿಗೆ ಕಾರ್ಡ್‌ನಲ್ಲಿ ಮುದ್ರಿಸಿದ್ದಂತೆ 25 ಗ್ರಾಂ ಬೆಳ್ಳಿಯ ಬದಲಾಗಿ 20 ಗ್ರಾಂ ನೀಡಲಾಗಿತ್ತು, ಕೇಳಿದರೆ ವೇಸ್ಟೇಜ್, ಕೂಲಿ ಎಂದೆಲ್ಲಾ ಹೇಳಿ ಜನರ ಬಾಯನ್ನು ಮುಚ್ಚಿಸುತ್ತಿದ್ದರು. ವಂಚಕ ತ್ರಿಮೂರ್ತಿಗಳ ಉತ್ತರದಿಂದ ತೃಪ್ತರಾಗದ ಗ್ರಾಹಕರಾದ ಶರತ್, ಶಶಿಕಿರಣ್, ಸುರೇಶ್, ಸೋಮಶೇಖರ್ ಮತ್ತಿತರರು 'ನಮಗೆ ನಿಮ್ಮ ಸ್ಕೀಮೂ ಬೇಡ, ಬಹುಮಾನವೂ ಬೇಡ' ಎಂದು ಗಲಾಟೆ ಮಾಡಲಾರಂಭಿಸಿದರು. ಇನ್ನೇನು ಈ ಸ್ಕೀಮು ಮುಗಿಯಲು



ನಾಗರಾಜುಗೌಡ

ಕೆಲವೇ ವಾರಗಳಿದ್ದಾಗ ಜನರೆಲ್ಲಾ ಹಣ ವಾಪಸ್ ಕೊಡುವಂತೆ ಗಲಾಟೆ ಮಾಡತೊಡಗಿದಾಗ ವಂಚಕ ಪೇದೆಗಳಾದ ನಾಗರಾಜುಗೌಡ, ಪ್ರಕಾಶ್, ಸಿದ್ದರಾಜು ತರಾತುರಿಯಲ್ಲಿ ಸ್ಕೀಂ ಮುಗಿಸಲು ಪ್ಲಾನ್ ಮಾಡಿ ಒಂದೇ ದಿನ 2 ವಾರಗಳ ಡ್ರಾವನ್ನು ಮಾಡಿ ಮುಗಿಸಿದ್ದರು.

ಜನರ ಅನುಮಾನ ಮತ್ತಷ್ಟು ಗಾಢವಾದದ್ದೇ ಆಗ. ನಮಗೆ ಹೇಳದೆ 2 ವಾರಗಳ ಡ್ರಾವನ್ನು ಒಂದೇ ವಾರದಲ್ಲಿ ಹೇಗೆ ಮಾಡಿದ್ರಿ ಎಂದು ಖದೀಮ ಪೊಲೀಸರನ್ನು ತಡವಿಕೊಂಡಿದ್ದರು. ಡ್ರಾದಲ್ಲಿ ವಿಜೇತರಾದವರಿಗೂ ಹತ್ತಾರು ದಿನ ಕಳೆದರೂ ಖದೀಮ ಪೊಲೀಸರು ಬಂದ ವಸ್ತುಗಳನ್ನೇ ಕೊಟ್ಟಿರಲಿಲ್ಲ, ಈ ಬಗ್ಗೆ ಕೆಲವು ಗ್ರಾಹಕರು ನೇರವಾಗಿ ಪೊಲೀಸ್ ಠಾಣೆಗೆ ತೆರಳಿ ದೂರಲಾರಂಭಿಸಿದರು. ಯಾವಾಗ ಜನ ಸ್ಟೇಷನ್ ಮೆಟ್ಟಿಲು ಹತ್ತಿದರೋ ವಂಚಕ ಪೊಲೀಸ್ ಪೇದೆಗಳು ಮೊಬೈಲ್ ಸ್ವಿಚ್‌ಆಫ್ ಮಾಡಿ ನಾಪತ್ತೆಯಾದರು. ಹಣ ಕಟ್ಟಿ ಕಂಗಾಲಾದ ಜನ ಠಾಣೆಯ ಮುಂದೆ ಹಣ ವಾಪಸ್ ಕೊಡಿಸುವಂತೆ ಪ್ರತಿಭಟನೆಯನ್ನೂ ನಡೆಸಿದರು. ಆಗಲೇ ವಂಚಕ ಪೊಲೀಸರ ವಿರುದ್ಧ ಶ್ರೀರಂಗಪಟ್ಟಣ ಉಪವಿಭಾಗದ ಡಿವೈಎಸ್‌ಪಿ ಗೀತಾಪ್ರಸನ್ನ ಸಮಗ್ರ ವರದಿ ತಯಾರಿಸಿ ಎಸ್ಪಿ ಭೂಷಣ್ ಜಿ.ಬೊರಸೆಯವರಿಗೆ ರವಾನಿಸಿದರು. ಕೂಡಲೇ ಇಬ್ಬರು ಪೇದೆಗಳನ್ನು ಅಮಾನತು ಮಾಡಿದ ಎಸ್ಪಿ ಸಾಹೇಬರು ಇಲಾಖಾ ವಿಚಾರಣೆಗೆ ಈಗ



ಗ್ರಾಹಕರಿಗೆ ನೀಡುವ ವಸ್ತುಗಳು

ಆದೇಶ ಹೊರಡಿಸಿದ್ದಾರೆ.

ಇಂತಹ ನೂರಾರು ಸ್ಕೀಮುಗಳು ಜಿಲ್ಲೆಯಾದ್ಯಂತ ಈಗಷ್ಟೇ ಬೇರುಬಿಡುತ್ತಿವೆ. ಎಸ್ಪಿ ಬೊರಸೆಯವರು ಇತ್ತ ಗಮನ ಹರಿಸದಿದ್ದರೆ ಇದೊಂದು ದೊಡ್ಡ ತಲೆನೋವಾಗಿ ಪರಿಣಮಿಸುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ, ಒಂದು ಕಡೆ ಪೊಲೀಸ್ ಇಲಾಖೆಯನ್ನು ಜನಸ್ನೇಹಿ ಆಗಿಸುತ್ತೇವೆ ಅಂತ ಹಿರಿಯ ಪೊಲೀಸ್ ಅಧಿಕಾರಿಗಳು ಹೇಳಿಕೆ ಕೊಡುತ್ತಿದ್ದರೆ, ಮತ್ತೊಂದೆಡೆ ಪೊಲೀಸ್ ಇಲಾಖೆಯಲ್ಲಿ ಇರುವವರೇ ಜನರ ವಂಚನೆಗೆ ಇಳಿಯುತ್ತಿದ್ದಾರೆ. ಮೊದಲೇ ಪೊಲೀಸರೆಂದರೆ, ನೂರಡಿ ದೂರ ಹೋಗುವ ಜನ ಇಂತಹ ಘಟನೆಗಳು ನಡೆಯುತ್ತಿದ್ದರೆ ಸ್ನೇಹಹಸ್ತವನ್ನು ಹೇಗೆ ತಾನೆ ಚಾಚಿಯಾರು? ಕಡೇಪಕ್ಷ, ಪಬ್ಲಿಕ್ ಮೆಮೊರಿ ಎರೇಸ್ ಆಗುವ ಮುನ್ನವೇ ಆ ವಂಚಕರಿಗೆ ತಕ್ಕ ಶಿಕ್ಷೆ ನೀಡಿ ಪೊಲೀಸ್ ಇಲಾಖೆಯ ವಿಶ್ವಾಸಾರ್ಹತೆಯನ್ನು ಸಾಬೀತು ಮಾಡಿಕೊಳ್ಳುವ ಜರೂರತ್ತು ಜಿಲ್ಲಾ ಎಸ್‌ಪಿಯವರ ಹೆಗಲಮೇಲಿದೆ. ಇಲ್ಲವೆಂದರೆ ಜನ 'ಎಲ್ರೂ ಅವ್ರೇ' ಅನ್ನೋ ತೀರ್ಮಾನಕ್ಕೆ ಬಂದುಬಿಡುತ್ತಾರೆ...

■ ಮಂಡ್ಯ ನಾಗೇಶ್

ಜನವಿರೋಧಿ ಸಾರಿಗೆ ಸುರಕ್ಷಾ ಮಸೂದೆ

ಡ್ರೈವರ್ ಮೋದಿ, ಗಡ್ಕರಿಯೇ ಕ್ಲೀನರ್

'ಅಚ್ಛೇ ದಿನ್ ಆಯೇಗಾ' ಅಂತಲೇ ಅಧಿಕಾರಕ್ಕೇರಿದ ಮೋದಿ, ಜನರ ಚಳ್ಳೆ ಬಳ್ಳೆ ಅಂಬಾನಿ-ಅದಾನಿಗಳನ್ನು ಚೆಚ್ಚಾಗಿಸುವ ತರಾತುರಿಯಲ್ಲಿದ್ದಾನೆ. ಕೇವಲ 11 ತಿಂಗಳಲ್ಲಿ 11 ಸುಗ್ರೀವಾಜ್ಞೆಗಳನ್ನು ಹೊರಡಿಸಿರೋದು ಇದಕ್ಕೆ ಸಾಕ್ಷಿ. ಬಳುವ ರೈತರನ್ನು ಒಕ್ಕಲೆಬ್ಬಿಸಿ ದೇಶ-ವಿದೇಶ ಬಂಡವಾಳಶಾಹಿಗಳಿಗೆ ರತ್ನಗಂಬಳಿ ಹಾಸುವ ಸಲುವಾಗಿ ಆತ ಜಾರಿಗೊಳಿಸಿದ ಭೂಸ್ವಾಧೀನ ಸುಗ್ರೀವಾಜ್ಞೆ ಒಂದು ಕಡೆ ಮೋದಿಯ ಮುಖವಾಡ ಬಯಲು ಮಾಡಲು. 'ಮೇಕ್ ಇನ್ ಇಂಡಿಯಾ' ಹೆಸರಲ್ಲಿ ಭಾರತದ ದಾಸ್ಯಕ್ಕೆ ಮುನ್ನುಡಿ ಬರೆಯುತ್ತಿರುವ ಮೋದಿ ಕೈಗಾರಿಕೆಗಳಿಗೆ ಜಾಗ ಕೊಡ್ತೀನಿ, ವಿದ್ಯುತ್-ನೀರು-ಮಾನವ ಸಂಪನ್ಮೂಲಗಳನ್ನೆಲ್ಲಾ ಚೀಪ್ ರೇಟಿನಲ್ಲಿ ಕೊಡ್ತೀನಿ ಅಂತ ಗೋಗರೆದು ಬರುತ್ತಿರುವ ವಿದೇಶಿ ಬಂಡವಾಳಿಗರ ಜೇಬು ತುಂಬಿಸಲು ದೇಶದ ಬೆನ್ನೆಲುಬನ್ನೇ ಹಿಡಿದು ಅಲ್ಲಾಡಿಸುತ್ತಿದ್ದಾನೆ. ಲೋಕಸಭೆಯಲ್ಲಿ ವಿರೋಧಪಕ್ಷಗಳ ನಡುವೆಯೂ ಇದರ ವಿರುದ್ಧ ಜನಾಂದೋಲನ ಶುರುವಾಗಿದ್ದು ಮುಂದಿನ ದಿನಗಳಲ್ಲಿ ರಾಷ್ಟ್ರಮಟ್ಟದ ಚಳವಳಿಯಾಗಿ ರೂಪತಾಳುವ ಎಲ್ಲಾ ಲಕ್ಷಣಗಳೂ ಕಾಣುತ್ತಿವೆ ಅಂದಮೇಲೆ ಮೋದಿಯ ಅಸಲಿಯತ್ತು ಜನರಿಗೆ ಗೊತ್ತಾಗಿಹೋಗಿದೆ ಅಂತಲೇ ಅರ್ಥ.

ಅಂತಹ ಮೋದಿ ಟೀಮು ಇದೀಗ ಮತ್ತೊಂದು ಸುಗ್ರೀವಾಜ್ಞೆಯ ಮೂಲಕ ಜನರ ಮೇಲೆ ಪ್ರಹಾರ ನಡೆಸಲು ಸಜ್ಜಾಗುತ್ತಿದೆ. ಅದುವೇ 'ರಸ್ತೆ ಸಾರಿಗೆ ಸುರಕ್ಷಾ ಮಸೂದೆ'. ಮೇಲ್ನೋಟಕ್ಕೆ ಜನರಿಗೆ ಸುರಕ್ಷತೆ ನೀಡುವ ಉದ್ದೇಶ ಹೊತ್ತಂತೆ ಕಂಡರೂ ಈ ಮಸೂದೆಯು ರಾಜ್ಯ ಸರ್ಕಾರಗಳ ಆದಾಯದ ಮೇಲೆ ಪ್ರಹಾರ ಮಾಡುವುದಲ್ಲದೇ, ಲಕ್ಷಾಂತರ ಕಾರ್ಮಿಕರು, ಚಾಲಕರನ್ನು ಉದ್ಯೋಗಹೀನರನ್ನಾಗಿಸಿ ಖಾಸಗಿ ಕಂಪನಿಗಳ ಬೊಕ್ಕಸ ತುಂಬಿಸುವ ಹಿಡೆನ್ ಅಜೆಂಡಾ ಹೊಂದಿದೆ.

ಈ ಮಸೂದೆ ರಸ್ತೆಯಲ್ಲಿ ಓಡಾಡುವ ದ್ವಿಚಕ್ರದಿಂದ ಹಿಡಿದು ಬಸ್, ಲಾರಿವರೆಗೆ ಅದನ್ನು ಚಲಾಯಿಸುವ ಚಾಲಕರಿಗೆ ಸುರಕ್ಷತೆ ಬದಲಾಗಿ ಅಸುರಕ್ಷಿತವಾಗಿರುವುದೇ ಹೆಚ್ಚಾಗಿದೆ. ದೇಶದಲ್ಲಿರುವ 54 ರಾಜ್ಯ ರಸ್ತೆ ಸಾರಿಗೆ ನಿಗಮಗಳು, ಅದರಲ್ಲಿ ಕೆಲಸ ಮಾಡುತ್ತಿರುವ 7.5 ಲಕ್ಷ ಕಾರ್ಮಿಕರು, ವಾಹನ ಚಾಲನೆಯನ್ನೇ ಉಪಜೀವನ ಮಾಡಿಕೊಂಡಿರುವ 2.5 ಕೋಟಿ ಮಂದಿಯನ್ನು ಒಂದೇ ಏಟಿಗೆ ಬೀದಿಗೆ ತಂದು ನಿಲ್ಲಿಸುವ ತಾಕತ್ತು ಈ ಮಸೂದೆಗಿದೆ.

ರಸ್ತೆ ಸಾರಿಗೆಯಲ್ಲಿ ದಿನವೊಂದಕ್ಕೆ 2500 ಕೋಟಿ ಜನ ಪ್ರಯಾಣಿಸುತ್ತಾರೆ. ಸಾರಿಗೆ ನಿಗಮಗಳಲ್ಲಿ ಇದಕ್ಕಾಗಿ 1.25 ಲಕ್ಷ ಬಸ್‌ಗಳು ಸೇವೆ ಸಲ್ಲಿಸುತ್ತಿವೆ. ಸಾರಿಗೆ ಇಲಾಖೆಗೆ ಎಲ್ಲಾ ರಾಜ್ಯ ಸರಕಾರಗಳ ಒಟ್ಟು ಹೂಡಿಕೆಯೇ 20,000 ಕೋಟಿ ರೂಪಾಯಿ! ಇನ್ನು ಈ ಇಲಾಖೆಯ ವಾರ್ಷಿಕ ವಹಿವಾಟೆ 50,000 ಕೋಟಿ ರೂಪಾಯಿ ದಾಟುತ್ತದೆ. ಇಂತಹ ಹಸಿಹಸಿ ಹುಲ್ಲುಗಾವಲನ್ನು ಇಡಿಯಾಗಿ ಖಾಸಗಿ ಶಕ್ತಿಯವರ ಜೋಳಿಗೆಗೆ ಹಾಕುವುದಕ್ಕಾಗಿಯೇ 'ಮೋದಿ ಭೂಸಾರಿಗೆ ಸಚಿವ ನಿತಿನ್ ಗಡ್ಕರಿಯ ಮೂಲಕ ಹೊಸ ಮಸೂದೆಯನ್ನು ಜಾರಿಗೆ ತರುತ್ತಿದ್ದಾನೆ. ಜನರ ಕಣ್ಣಿಗೆ ಮಣ್ಣೆರಚುವ ದೃಷ್ಟಿಯಿಂದ ಅದಕ್ಕೆ ರಸ್ತೆ ಸುರಕ್ಷತಾ ಮಸೂದೆ ಎಂಬ ನಾಮಕಾರಣ ಮಾಡಲಾಗಿದೆಯೇ ಹೊರತು ಅದರ ಹಿಂದಿರುವುದು ದೇಶದ ಆರ್ಥಿಕತೆಯನ್ನೇ ಪಾತಾಳಕ್ಕಿಳಿಸಿ ಬಂಡವಾಳಿಗರ ಖಜಾನೆ ತುಂಬಿಸುವ ಹುನ್ನಾರ ಮಾತ್ರ.

1988ರ ಮೋಟಾರ್ ವಾಹನ ಕಾಯ್ದೆ ರದ್ದುಪಡಿಸುವುದು ಈ ಮಸೂದೆಯ ಮುಖ್ಯ ಲಕ್ಷಣವಾಗಿದೆ. ಈ ಮೂಲಕ ರಾಜ್ಯ ಸರ್ಕಾರ ಹೊಂದಿದ್ದ ಅಧಿಕಾರವನ್ನು ಕಿತ್ತುಕೊಂಡು ಕೇಂದ್ರ ಸರ್ಕಾರವೇ ಎಲ್ಲಾ ಆಡಳಿತವನ್ನು ಹೊಂದಲಿದೆ. ಇದರಿಂದಾಗಿ ರಾಜ್ಯ ಸರ್ಕಾರಗಳು ಆರ್ಥಿಕ ಹೊಡೆತವನ್ನು ಅನುಭವಿಸಬೇಕಾಗುತ್ತದೆ. ಈ ಮಸೂದೆ ಮೂಲಕ ಸಾರ್ವಜನಿಕ ರಂಗದ ಷೇರು ಬಂಡವಾಳವನ್ನು ಖಾಸಗಿಯವರಿಗೆ ಮಾರಿ 65, 000 ಕೋಟಿ ರೂಪಾಯಿ ಪಡೆಯುವ ಹುನ್ನಾರ ಇದರ ಹಿಂದಿದೆ.

ಭ್ರಷ್ಟಾಚಾರದ ಕೂಪಗಳೆಂದು ಕುಖ್ಯಾತಿ ಹೊಂದಿದ್ದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿರುವ ಪ್ರಾದೇಶಿಕ ಸಾರಿಗೆ ಕಚೇರಿಗಳು ಈ ಮಸೂದೆ ಜಾರಿಗೆ ಬಂದಲ್ಲಿ ಇವುಗಳಿಗೆಲ್ಲ ಬೀಗ ಜಡಿಯಬೇಕಾಗುತ್ತದೆ. ಆರ್‌ಟಿಓ ಕಚೇರಿ ಹೆಸರಿನಲ್ಲಿ ಚಾಲ್ತಿಯಲ್ಲಿರುವ ಈ ಕಚೇರಿಗಳು ವಾಹನ ನೋಂದಣಿ, ಡ್ರೈವಿಂಗ್ ಲೈಸೆನ್ಸ್ ನೀಡುವುದು, ನವೀಕರಿಸುವುದು, ವಾಹನಗಳ ಪರವಾನಗಿ, ಫಿಟ್‌ನೆಸ್ ಸರ್ಟಿಫಿಕೇಟ್ ನೀಡುವುದರ ಜೊತೆಗೆ ವಾಹನಗಳ ಟ್ಯಾಕ್ಸ್‌ನ್ನು ಸಂಗ್ರಹಿಸುತ್ತಿವೆ. ಇದರಿಂದಾಗಿ ರಾಜ್ಯ ಸರಕಾರಕ್ಕೆ ಆದಾಯ ಬರುತ್ತಿದೆ. ಇನ್ನು ಮುಂದೆ ಚಹಾ ಅಂಗಡಿ ತರಹ ಈ ಕೆಲಸಗಳನ್ನು ಮಾಡಲು ಖಾಸಗಿ ಏಜೆನ್ಸಿಗಳಿಗೆ ನೀಡುತ್ತದೆ. ಈಗಾಗಲೇ ಲೈಸೆನ್ಸ್ ಪಡೆದಿರುವ ವಾಯುಮಾಲಿನ್ಯ ವಾಹನ ಪರೀಕ್ಷಾ ಕೇಂದ್ರ (emission test)ಗಳು ಯಾವ ರೀತಿಯಾಗಿ ಸರ್ಟಿಫಿಕೇಟ್‌ಗಳನ್ನು ನೀಡುತ್ತಿವೆ ಎನ್ನುವುದು ತಿಳಿಯುತ್ತದೆ. ಆಗಾಗ ದರಗಳಲ್ಲಿ ಕಲ್ಲು ಹಾಕಿದಲ್ಲಿ ದೊರೆಯುತ್ತಿದ್ದ ಲೈಸೆನ್ಸ್, ಪರ್ಮಿಟ್, ಫಿಟ್‌ನೆಸ್ ಸರ್ಟಿಫಿಕೇಟ್‌ಗಳು ಖಾಸಗಿ ಕ್ಷೇತ್ರದಲ್ಲಿ [illegible] ಅಂದರೆ ಮೋದಿ ಸರ್ಕಾರ



ಖಾಸಗಿಯವರಿಗೆ ವಾಹನಗಳ ಮಾಲೀಕರಿಂದ ಬೇಕಾಬಿಟ್ಟಿಯಾಗಿ ವಸೂಲಿ ಮಾಡಲು ಪರವಾನಗಿ ನೀಡಲು ಹೊರಟಿದೆ. ಅಲ್ಲದೇ ಆರ್‌ಟಿಓ ಕಚೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಲಕ್ಷಾಂತರ ಸಿಬ್ಬಂದಿಗಳಿಗೆ ರಾಜ್ಯ ಸರಕಾರ, ಗೇಟ್‌ಪಾಸ್ ರೆಡಿ ಮಾಡಬೇಕಾಗುತ್ತದೆ.

ಹೊಸ ಮಸೂದೆ ಮತ್ತು ಶಿಕ್ಷೆಗಳು

ಈ ಹೊಸ ಮಸೂದೆ ಇಡೀ ದೇಶದ ವಾಹನ ಚಾಲಕರನ್ನು ಕೊಲೆಗಡುಕರು ಎಂದು ಶಿಕ್ಷೆ ವಿಧಿಸಲಿದೆ. ಈ ಕಾನೂನು ಜಾರಿಗೆ ಬಂದಲ್ಲಿ ಸ್ಕೂಟರ್ ಸವಾರನಿಂದ ಹಿಡಿದು ಬಸ್ ಚಾಲಕವರೆಗೆ ಜೈಲು ಶಿಕ್ಷೆ ಅನುಭವಿಸಬೇಕಾಗುತ್ತದೆ. ರಸ್ತೆ ಅಪಘಾತಕ್ಕಾಗಿಯೇ ಶಿಕ್ಷೆ ಜಾರಿಗೊಳಿಸಲು ದೇಶದ ತುಂಬ ಹೊಸ ಜೈಲುಗಳನ್ನು ರಾಜ್ಯ ಸರ್ಕಾರಗಳು ನಿರ್ಮಿಸಬೇಕಾಗುತ್ತದೆ. ಇನ್ನು ಮುಂದೆ ಖಾಸಗಿ ಲಾರಿ, ಬಸ್, ಟ್ಯಾಕ್ಸಿ (ಕಾರು), ಮ್ಯಾಕ್ಸಿಕ್ಯಾಬ್, ಮಿನಿಗೂಡ್ಸ್‌ಗಳಿಗೆ ಡ್ರೈವರ್‌ಗಳೇ ಸಿಗದ ಪರಿಸ್ಥಿತಿ ನಿರ್ಮಾಣವಾದರೂ ಅಚ್ಚರಿ ಇಲ್ಲ, ಈಗಿರುವ ಮೋಟಾರ್ ವಾಹನ ಕಾಯ್ದೆ ಅಡಿಯಲ್ಲಿದ್ದ ಶಿಕ್ಷೆ ಕನಿಷ್ಠ ರೂ. 100/-ರಿಂದ ರೂ. 5000/-ರವರೆಗೆ ದಂಡ ಹಾಗೂ ಹೆಚ್ಚೆಂದರೆ ಮೂರು ವರ್ಷ ಜೈಲು ಶಿಕ್ಷೆ. ಈ ಹೊಸ ಮಸೂದೆಯು ಅದರ 14ನೇ ಪರಿಚ್ಛೇದದಲ್ಲಿ ಸೆಕ್ಷನ್ 285 ರಿಂದ 340 ರವರೆಗೆ ಈ ಕೆಳಕಂಡ ಶಿಕ್ಷೆಗಳನ್ನು ಸೂಚಿಸಿದೆ.

ಅಪರಾಧ: ಶಿಕ್ಷೆ ಮತ್ತು ದಂಡ

1. ಅಪಘಾತದಲ್ಲಿ ಶಿಶು ಮರಣ ಹೊಂದಿದರೆ: 3 ಲಕ್ಷ ರೂಪಾಯಿ ದಂಡ ಮತ್ತು 7 ವರ್ಷ ಜೈಲುವಾಸ
2. ಅಪಘಾತದಲ್ಲಿ ಇತರರು ಮರಣ ಹೊಂದಿದರೆ: 1 ಲಕ್ಷ ರೂಪಾಯಿ ದಂಡ ಮತ್ತು 4 ವರ್ಷ ಜೈಲುವಾಸ
3. ಟ್ರಾಫಿಕ್ ಸಿಗ್ನಲ್ ಉಲ್ಲಂಘನೆ: 1ನೇ ಬಾರಿ- ರೂ. 5000/- ದಂಡ, 2ನೇ ಬಾರಿ- ರೂ. 10,000/- ದಂಡ 3ನೇ ಬಾರಿ- ರೂ. 15,000 ದಂಡ? ಒಂದು ತಿಂಗಳು ಪರವಾನಗಿ ರದ್ದು ಮತ್ತು ಕಡ್ಡಾಯ ತರಬೇತಿ
4. ಸೀಟು ಬೆಲ್ಟ್ ಧರಿಸದಿರುವುದು: ರೂ. 5000/- ದಂಡ
5. ಹೆಲ್ಮೆಟ್ ಧರಿಸದಿರುವುದು: ರೂ. 2,500/- ದಂಡ
6. ಚಾಲನೆಯಲ್ಲಿದ್ದಾಗ ಮೊಬೈಲ್ ಉಪಯೋಗಿಸುವುದು: 1ನೇ ಬಾರಿ- ರೂ. 4000/- ದಂಡ, 2ನೇ ಬಾರಿಗೆ- ರೂ. 6,000/- ದಂಡ, 3ನೇ ಬಾರಿಗೆ- ರೂ. 10,000/- ದಂಡ.
7. ಮದ್ಯ ಸೇವಿಸಿ ವಾಹನ ಚಾಲನೆ ಮಾಡಿದರೆ: 1ನೇ ಬಾರಿ- ರೂ. 15,000 ದಂಡ 6 ತಿಂಗಳು ಲೈಸೆನ್ಸ್ ರದ್ದು ಮತ್ತು 6-12 ತಿಂಗಳು ಜೈಲು ವಾಸ. 2ನೇ ಬಾರಿ-ಲೈಸೆನ್ಸ್ ಶಾಶ್ವತ ರದ್ದು 2 ವರ್ಷದವರೆಗೆ ಜೈಲುವಾಸ
8. ಮಿತಿಮೀರಿದ ವೇಗ: ರೂ. 5,000/- ದಿಂದ ರೂ. 50,000/- ವರೆಗೆ ದಂಡ 2 ವಾರದಿಂದ 6 ತಿಂಗಳವರೆಗೆ ಲೈಸೆನ್ಸ್ ರದ್ದು

ಸಣ್ಣಪುಟ್ಟ ತಪ್ಪುಗಳಿಗೂ ಹೊಸ ಮಸೂದೆ ಸೂಚಿಸಿರುವ ಶಿಕ್ಷೆಗಳನ್ನು ಗಮನಿಸಿದರೆ ಯಾರು ತಾನೆ ಚಾಲನಾ ಉದ್ಯೋಗಕ್ಕೆ ಬರಲು ಮನಸ್ಸು ಮಾಡಿಯಾರು? ಆಗ ಮೋದಿ ಒಬ್ಬನೇ ಡ್ರೈವರ್ ಹಾಗೂ ಗಡ್ಕರಿ ಕ್ಲೀನರ್ ಆಗಬೇಕಾಗುತ್ತದೆ. ಈಗಿರುವ ಜೈಲುಗಳ ಗುಣಮಟ್ಟವೇ ಅಂತಹ ಕಳಪೆಯಾಗಿದೆ. ಇನ್ನುಮುಂದೆ ಸಿಗ್ನಲ್ ಜಂಪ್ ಮಾಡಿದವನೂ ಜೈಲು ಶಿಕ್ಷ ಅನುಭವಿಸುವುದಾದರೆ ಹೊಸಹೊಸ ಜೈಲುಗಳ ನಿರ್ಮಾಣಕ್ಕೆ ವಿದೇಶಿ ಬಂಡವಾಳಿಗರನ್ನು 'ಕಮ್ ಟು ಇಂಡಿಯಾ' ಅಂತ ಗೋಗರೆಯಬೇಕಾಗುತ್ತದೆ. ಯಾಕೆಂದರೆ, ಆದಾಯದ ಮೂಲಗಳನ್ನೆಲ್ಲ ಖಾಸಗಿಯವರತ್ತ ತಿರುಗಿಸಿದ ಮೇಲೆ ಹೊಸ ಜೈಲುಗಳನ್ನು ನಿರ್ಮಿಸುವ ಸಾಮರ್ಥ್ಯವಾದರೂ ಭಾರತ ಸರ್ಕಾರಕ್ಕೆ ಎಲ್ಲಿಂದ ಬಂದಾತು?

ಇಂತಹ ಅಪಾಯದ ಮುನ್ಸೂಚನೆ ಲಭಿಸಿಯೇ ದೇಶದಲ್ಲಿರುವ ರಸ್ತೆ ಸಾರಿಗೆ ಕ್ಷೇತ್ರದ ವಿವಿಧ ವಿಭಾಗಗಳ ಮುಖಂಡರು ಜನವರಿ 18, 2015ರಂದು ದೆಹಲಿ ಚಲೋ ಪ್ರತಿಭಟನೆಗೆ ಕರೆ ನೀಡಿದ್ದು, ಅಂದು ದೇಶದ ಎಲ್ಲಾ ಸಾರಿಗೆ ನಿಗಮಗಳಿಂದ 15,000 ನೌಕರರು ಬೃಹತ್ ಪ್ರತಿಭಟನೆ ನಡೆಸಿ, ಚಾಲಕ ವರ್ಗಕ್ಕೆ ಮಾರಕವಾದ ಮರಣ ಶಾಸನವನ್ನು ಕೇಂದ್ರ ಸರ್ಕಾರ ವಾಪಸ್ ಪಡೆಯಬೇಕೆಂದು ಒತ್ತಾಯಿಸಿ, ಕೇಂದ್ರ ಸಾರಿಗೆ ಕಾರ್ಯದರ್ಶಿಯಾದ ವಿಜಯಾ ಚಿಬ್ಬರ್‌ಗೆ ಮನವಿಯನ್ನೂ ನೀಡಿ ಬಂದಿದ್ದರು. ಆದರೆ ಕಾರ್ಪೊರೇಟ್ ಕಂಪನಿಗಳ ಚಾಕರಿಯಲ್ಲಿ ತಲ್ಲೀನವಾಗಿರುವ ಮೋದಿಗೆ ಇಂತಹ ಪ್ರತಿಭಟನೆಗಳು ಯಾವ ಲೆಕ್ಕ. ಭೂಸ್ವಾಧೀನ ಮಸೂದೆಗೆ ಜನವಿರೋಧ ವ್ಯಕ್ತವಾದಂತೆ ಇದಕ್ಕೂ ವಿರೋಧ ವ್ಯಕ್ತವಾದೀತೆಂಬ ಭಯದಿಂದ ಜನರಿಗೆ ಈ ಮಸೂದೆಯ ಸಾಧಕ-ಬಾಧಕಗಳ ಅರಿವು ಮೂಡುವ ಮುನ್ನವೇ ಸುಗ್ರೀವಾಜ್ಞೆ ಹೊರಡಿಸಿ ಶಾಸನ ಮಾಡಲು ಹೊರಟಿದ್ದಾನೆ.


ಈ ಮಸೂದೆಯಿಂದ ಆಗುವ ಅವಾಂತರ ಇದಿಷ್ಟೇ ಅಲ್ಲ, ನಾವೇನು ಈಗ ಆರಾಮಾಗಿ ಓಡಾಡುತ್ತಿದ್ದೇವಲ್ಲ, ಆ ರಸ್ತೆಗಳನ್ನೂ ಖಾಸಗಿಯವರಿಗೆ ಹರಾಜು ಮೂಲಕ ವಹಿಸಿಕೊಡಲು ಅವಕಾಶವಿದೆ. ಹಾಗೆ ಪಡೆದವರು ಅಲ್ಲಿ ತಮಗೆ ಸಂಬಂಧಿಸಿದ ಲಾರಿ, ಬಸ್‌ಗಳನ್ನು ಮಾತ್ರ ಓಡಿಸಿಕೊಳ್ಳಬಹುದು ಅಥವಾ ಬಾಯಿಗೆಬಂದಂತೆ ಟೋಲ್ ಶುಲ್ಕಗಳನ್ನು ಕೇಳಬಹುದು. ಅಲ್ಲದೇ ರಾಜ್ಯ ಸರ್ಕಾರದ ಒಡೆತನದಲ್ಲಿರುವ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಗಳನ್ನು ಗುತ್ತಿಗೆ ಮೂಲಕ ತಮ್ಮ ವಶಕ್ಕೆ ಪಡೆದು ಅಲ್ಲಿ ತಮ್ಮ ಬಸ್‌ಗಳನ್ನು ನಿಲ್ಲಿಸಿಕೊಳ್ಳುವ ಅವಕಾಶವನ್ನೂ ಈ ಮಸೂದೆ ಖಾಸಗಿಯವರಿಗೆ ದಯಪಾಲಿಸಲಿದೆ.

ಈಗಾಗಲೇ ರಾಜ್ಯದ ವಿವಿಧ ಭಾಗಗಳಲ್ಲಿ ಚಾಲಕರು ಹಾಗೂ ಸಣ್ಣ ಬಂಡವಾಳ ತೊಡಗಿಸಿ ಜೀವನ ನಡೆಸುತ್ತಿರುವ ಟ್ಯಾಕ್ಸಿ, ಮಿನಿ ಗೂಡ್ಸ್, ಆಟೋರಿಕ್ಷಾ, ಟಂಟಂ, ಮ್ಯಾಕ್ಸಿಕ್ಯಾಬ್ ಮಾಲೀಕರು ಈ ಮಸೂದೆ ವಿಷಯ ತಿಳಿದು ಕಂಗಾಲಾಗಿದ್ದಾರೆ. ಇವರೆಲ್ಲಾ ಒಂದುಗೂಡಿ ಅಲ್ಲಲ್ಲಿ ಸಮ್ಮೇಳನ ನಡೆಸಿ ಜಾಗೃತಿ ಮೂಡಿಸುವ ಕೆಲಸದಲ್ಲಿ ತೊಡಗಿದ್ದಾರೆ. ಅದರ ಭಾಗವಾಗಿ ಏಪ್ರಿಲ್ 9ರಂದು ಹುಬ್ಬಳ್ಳಿಯಲ್ಲೂ ಅಂತಹದ್ದೊಂದು ಜಿಲ್ಲಾ ಪ್ರತಿಭಟನೆ ನಡೆಯಿತು. ಇದರಲ್ಲಿ ಪಾಲ್ಗೊಂಡಿದ್ದ ಪ್ರೊ. ಕೆ.ಎಸ್. ಶರ್ಮಾ, ಹೆಚ್.ವಿ. ಅನಂತಸುಬ್ಬರಾವ್, ಕೆಎಸ್‌ಆರ್‌ಟಿಸಿ ರಾಜ್ಯ ಉಪಾಧ್ಯಕ್ಷ ಲೋಹಿತ ನಾಯ್ಕರು ಏಪ್ರಿಲ್ 30ರಂದು ರಾಷ್ಟ್ರವ್ಯಾಪಿ ನಡೆಸಲಾಗುವ ಸಾರಿಗೆ ಬಂದ್ ಚಳವಳಿಗೆ ಆಟೊಚಾಲಕರು, ಮ್ಯಾಕ್ಸಿಕ್ಯಾಬ್, ಮಿನಿಗೂಡ್ಸ್ ಟ್ಯಾಕ್ಸಿ ಮೊದಲಾದ ಅಸಂಘಟಿತ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದ್ದಾರೆ.

ಅಭಿವೃದ್ಧಿಯ ಸೋಗಿನಲ್ಲಿ ಮೋದಿ ನೇತೃತ್ವದ ಸರ್ಕಾರದ 'ಖಾಸಗೀಕರಣ'ದ ಈ ಅಭಿಯಾನವನ್ನು ಜನ ಒಕ್ಕೊರಲಿನಿಂದ ಪ್ರತಿಭಟಿಸದೇ ಹೋದರೆ, ಮುಂದೊಂದು ದಿನ ಇಡೀ ದೇಶ ಅಂಬಾನಿಗಳ ಮನೆಯಲ್ಲಿ ಜೀತ ಮಾಡಬೇಕಾದ ಪರಿಸ್ಥಿತಿ ಬಂದರೂ ಅಚ್ಚರಿಯಿಲ್ಲ, ಈಗಾಗಲೇ ಬಡ ರೈತರ ಜಮೀನನ್ನು ಜಬರ್ದಸ್ತಿನಿಂದ ಕಿತ್ತುಕೊಳ್ಳಲು ಭೂಸ್ವಾಧೀನ ಮಸೂದೆ ಹೊರಡಿಸಿರುವ ಮೋದಿ ಹಂತಹಂತವಾಗಿ ಖಾಸಗೀಕರಣದ ಅಭಿಯಾನವನ್ನು ಜಾರಿಗೊಳಿಸಲಿದ್ದಾನೆ. ಅಂದಹಾಗೆ, ಕೆಲ ದಿನಗಳ ಹಿಂದೆ ರೈಲ್ವೇ ನಿಲ್ದಾಣಗಳ ನಿರ್ವಹಣೆಯನ್ನೂ ಖಾಸಗಿಯವರಿಗೆ ಒಪ್ಪಿಸುತ್ತೇನೆ ಅಂತ ಮೋದಿ ಬಡಬಡಿಸಿದ್ದು ನಿಮಗೆ ನೆನಪಿರಬಹುದು.....

■ ಹುಬ್ಬಳ್ಳಿಯಾಂವ

ಪ್ರೊ.ಕೆ.ಎಸ್.ಭಗವಾನ್



ಭಗವಾನರೇ ನೀವು ಕೇಳಿ ದಯ ಮಾಡಿ
ಎಂದಿಗೂ ಸತ್ಯವನು ಹೇಳಲೇಬೇಡಿ
ಸತ್ಯವನು ಹೇಳುತ್ತ ಬಂದವರಿಗೆಲ್ಲ
ಕೂರಿಗಳು ಸುರಲೀತ ಬಿಟ್ಟಿದ್ದೆ ಇಲ್ಲ

ಈ ಆಶ್ವಾಸನೆಗಳು
ಖಂಡಿತವು ಬಡತನದ ತೊಲಗಿಸುವೆ ಬೇಗ
ಸತ್ಯವಿದು ಸ್ವರ್ಗದೊಳು ಕಾದಿಡುವೆ ಜಾಗ
ಮೊದಲನೆಯದು ನೋಡಿ ಏಳು ದಶಕಗಳದ್ದು
ಎರಡನೆಯದು ಬರೇ ತಲೆತಲಾಂತರದ್ದು

ಯೇ ಹನುಮಾ.....!
ಸ್ವಾರಸ್ಯಕರವಾದ ಆ ತನ್ನ ಜನುಮ
ಪಾದಸೇವೆಯ ಮಾಡಿ ವ್ಯರ್ಥಿಸಿದ ಹನುಮ
ಬ್ರಹ್ಮಚಾರಿಯು ಎಂಬ ಒಣ ಬಿರುದು ಕೊಟ್ಟು
ಮುಗಿಸಿದರು ಆವನಾಸೆ ಆಕಾಂಕ್ಷೆಗಳನ್ನೆಲ್ಲ ಸುಟ್ಟು

ರಕ್ಕಸರು?
ರಕ್ಕಸರು ಎಂಬವರು ಎಲ್ಲಿಯೂ ಕೂಡ
ಹಿಂದಕ್ಕೆ ಇರಲಿಲ್ಲ ಸಂದೇಹ ಬೇಡ
ಆಳಾಗಲೊಪ್ಪದಿಹ ದ್ರಾವಿಡಗೆ ಅಂದು
ಈ ಶಬ್ದ ಬಳಸಿದರು ದ್ರಾವಿಡರು ಬಂದು

ಮಾತೃದೇವೋ ಭವ
ಮಾತೃ ದೇವೋ ಭವ ಆರಾಧಿಸುವೆ ನಿತ್ಯ
ಅತಿಥಿ ದೇವೋ ಭವ ಸತ್ಯ ಅಗತ್ಯ
ಬುದ್ಧ ಬಸವ ವಿವೇಕಾನಂದರು ಬರಲು
[illegible]

■ [illegible]



'ಗಾಂಧಿ ನಿಜಕ್ಕೂ ಮಹಾತ್ಮರೇ?'

ಎಂಬ ಅಂಬೇಡ್ಕರರ ಪ್ರಶ್ನೆ, ಮತ್ತವರ ಉತ್ತರ

ಗಾಂಧಿ ನಿಜಕ್ಕೂ ಮಹಾತ್ಮರೇ? ಬಾಬಾಸಾಹೇಬ್ ಅಂಬೇಡ್ಕರರು ಕೇಳಿದ ನೇರ ಪ್ರಶ್ನೆ ಇದು ಎನ್ನಬಹುದು. ಯಾಕೆಂದರೆ ಇಂತಹ ಪ್ರಶ್ನಾ ರೂಪದ **Is Gandhi a Mahathma?** ಎಂಬ ಲೇಖನವನ್ನು ಬಾಬಾ ಸಾಹೇಬರು 1938ರಲ್ಲಿ 'ಚಿತ್ರಾ' ಎಂಬ ಮರಾಠಿ ಪತ್ರಿಕೆಯ ದೀಪಾವಳಿ ವಿಶೇಷಾಂಕಕ್ಕೆ ಬರೆದಿದ್ದಾರೆ ಮತ್ತು ಆ ಲೇಖನದ ಒರಿಜಿನಲ್ ಇಂಗ್ಲಿಷ್ ರೂಪ ಭಾರತ ಸರ್ಕಾರ ಈಚೆಗೆ ಪ್ರಕಟಿಸಿರುವ (2014) 'ಅಂಬೇಡ್ಕರ್ ಬರಹಗಳು (ಇಂಗ್ಲಿಷ್), ಸಂಪುಟ 17, ಭಾಗ 2' ರಲ್ಲಿ ಮರು ಮುದ್ರಣ ಕೂಡ ಕಂಡಿದೆ. ಸತ್ಯವನ್ನು ಹೀಗೆ ಪೀಠಿಕೆಯಲ್ಲೇ ಸ್ಪಷ್ಟಪಡಿಸ ಬೇಕಾಗಿದೆ. ಕಾರಣ ಕೆಲವರು ಇದನ್ನು ಪೂರ್ವಾಗ್ರಹಪೀಡಿತ ಅಥವಾ ಸ್ವಪ್ರೇರಿತ ಎಂದು ಭಾವಿಸಿಬಿಡುವ ಅಪಾಯವಿದೆ.

ಹಾಗಿದ್ದರೆ ಅಂಬೇಡ್ಕರ್ ಏನು ಹೇಳುತ್ತಾರೆ? ಮೊದಲಿಗೆ ಅವರು ಪ್ರಾರಂಭಿಸುವುದು **Is Gandhi a Mahathma? I am sick of this question** ಅಂದರೆ 'ಗಾಂಧಿ ನಿಜಕ್ಕೂ ಮಹಾತ್ಮರೇ? ಈ ಪ್ರಶ್ನೆಯೇ ನನಗೆ ವಾಕರಿಕೆ ತರಿಸುತ್ತದೆ' ಎಂದು. ಅಂಬೇಡ್ಕರರಿಗೇಕೆ ಈ ಪ್ರಶ್ನೆ ವಾಕರಿಕೆ ತರಿಸುತ್ತದೆ? ಅವರು ಎರಡು ಕಾರಣಗಳನ್ನು ನೀಡುತ್ತಾರೆ. ಅದರಲ್ಲಿ ಮೊದಲನೆಯದು "ಕಾರಣ ಕೇಳುವ ಗುಣ ಮತ್ತು ಬೌದ್ಧಿಕತೆ ಬದಲಿಗೆ ಮಹಾತ್ಮರು ಕುರುಡುನಂಬಿಕೆ ಬಿತ್ತುತ್ತಿದ್ದಾರೆ." ಹಾಗೆಯೇ ಎರಡನೆಯದು "ವಾಸ್ತವವಾಗಿ ಮಹಾತ್ಮ ಎಂಬ ಈ ಪದಕ್ಕೆ ಜನಸಾಮಾನ್ಯರು ತಿಳಿದುಕೊಂಡಿರುವ ಅರ್ಥವಾದರೂ ಏನು?" ಎಂಬುದು.

ನಿಜ, ಅಂಬೇಡ್ಕರರ ಈ ಪ್ರಶ್ನೆಗಳು ಮತ್ತವರ ವಿಶ್ಲೇಷಣೆಗಳು ಕೆಲವರಿಗೆ **arrogant** ಎನಿಸಬಹುದು. ಆದರೆ ಅಂಬೇಡ್ಕರರು ಗಾಂಧೀಜಿಯವರ ಸಮಕಾಲೀನರು. ಸಮಕಾಲೀನರಿಗೆ ತಮ್ಮ ಕಾಲದ ವ್ಯಕ್ತಿಗಳನ್ನು ಪ್ರಶ್ನಿಸುವ, ವರ್ತನೆಗಳನ್ನು ಆಕ್ಷೇಪಿಸುವ ಅರ್ಹತೆ ಇದ್ದೇ ಇರುತ್ತದೆ. ಅದರಲ್ಲೂ ಜ್ಞಾನದಲ್ಲಿ, ಶೈಕ್ಷಣಿಕ ಅರ್ಹತೆಯಲ್ಲಿ ಅಂಬೇಡ್ಕರರು ಗಾಂಧೀಜಿಯವರಿಗಿಂತ ಉನ್ನತಮಟ್ಟದಲ್ಲಿದ್ದಾಗ ಇಂತಹ 'ಮಹಾತ್ಮ' ಎಂಬ ಟೈಟಲ್ಲನ್ನು ಪ್ರಶ್ನಿಸುವ ಸಹಜತೆ ಮತ್ತು ಸಾಮರ್ಥ್ಯ ಅವರಿಗೆ ಖಂಡಿತ ಬಂದೇಬರುತ್ತದೆ. ಅಂದಹಾಗೆ ಆ ಕಾಲದ ಆ ಹೊತ್ತಿನ ಅಂಬೇಡ್ಕರರ ಅಂತಹ ಅನಿಸಿಕೆ, ವಿವರಣೆ ಈಗ ಏಕೆ? ಅದು ಆ ಕಾಲದ ಆ ಸಂದರ್ಭದ್ದು ಎಂದು ಕೆಲವರು ಆಕ್ಷೇಪ ವ್ಯಕ್ತಪಡಿಸಬಹುದು ವಿಶೇಷವಾಗಿ ಗಾಂಧಿವಾದಿಗಳು. ಆದರೆ ಇತಿಹಾಸದ ಪ್ರಶ್ನೆಗಳು, ಅದಕ್ಕೆ ಉತ್ತರ, ನಡೆದ ಚರ್ಚೆ ನಮಗೆ ಬೆಳಕಾಗುತ್ತವೆ, ಸರಿತಪ್ಪುಗಳ ಪ್ರಕಲ್ಪನೆ ಮೂಡಿಸುತ್ತವೆ. ಮತ್ತೂ ವಾಸ್ತವವೆಂದರೆ 'ಗಾಂಧಿ ನಿಜಕ್ಕೂ ಮಹಾತ್ಮರೇ?' ಎಂಬ ಈ ಪ್ರಶ್ನೆಯನ್ನು ಅಂಬೇಡ್ಕರರೇನು ತಮಗೆ ತಾವೇ ಹಾಕಿಕೊಂಡದ್ದಲ್ಲ, ಆದರೆ ಆ ಕಾಲದ ವರ್ತಮಾನದ ಸುದ್ದಿ ಸೃಷ್ಟಿಯಂತೆ ಗಾಂಧೀಜಿಯವರನ್ನು ಎಲ್ಲರೂ ಮಹಾತ್ಮ, ಮಹಾತ್ಮ ಎನ್ನತೊಡಗಿದಾಗ ಅಂದಿನ ಮಾಧ್ಯಮ ಲೋಕ, ವಿಶೇಷವಾಗಿ ಪತ್ರಕರ್ತರು ಜಿಜ್ಞಾಸೆಗೊಳಗಾಗಿದ್ದರು ಮತ್ತು ಅಂತಹ ಜಿಜ್ಞಾಸೆಯ ಪ್ರಶ್ನೆಯಲ್ಲಿಯೇ 'ಚಿತ್ರಾ' ಎಂಬ ಆ ಮರಾಠಿ ಪತ್ರಿಕೆಯ ಸಂಪಾದಕರು ಇದಕ್ಕೆ ಅಂಬೇಡ್ಕರರ ಉತ್ತರ ಏನಿರಬಹುದು ಎಂದು ಕುತೂಹಲಗೊಂಡು ಮತ್ತು ಅಂತಹ ಕುತೂಹಲವನ್ನು ತಮ್ಮ ಪತ್ರಿಕೆಯ ದೀಪಾವಳಿ ವಿಶೇಷಾಂಕದಲ್ಲಿ ಪ್ರಕಟಿಸುವ ಉತ್ಸುಕತೆ ತೋರಿ ಸದರಿ ಈ ಸಂಬಂಧ ಲೇಖನವೊಂದನ್ನು ಬರೆದುಕೊಡುವಂತೆ ಅವರು ಅಂಬೇಡ್ಕರರ ದುಂಬಾಲು ಬಿದ್ದಿದ್ದರು. ಸಂಪಾದಕರ ಅಂತಹ ಒತ್ತಡವನ್ನು ಪ್ರಸ್ತಾಪಿಸುತ್ತಾ ಅಂಬೇಡ್ಕರರು "ಈ ಕಾರಣಕ್ಕಾಗಿ ನಾನು (ಗಾಂಧಿ ನಿಜಕ್ಕೂ ಮಹಾತ್ಮರೇ?) ಈ ಪ್ರಶ್ನೆಗೆ ಪ್ರಾಮಾಣಿಕವಾಗಿ ಉತ್ತರಿಸಲು ನಿರ್ಧರಿಸಿದ್ದೇನೆ" ಎನ್ನುತ್ತಾ ಜನಸಾಮಾನ್ಯರು 'ಮಹಾತ್ಮ' ಎಂಬ ಈ ಪದಕ್ಕೆ ತಿಳಿದುಕೊಂಡಿರುವ ಅರ್ಥವಾದರೂ ಏನು? ಎಂಬ ಪ್ರಶ್ನೆಗೆ ಉತ್ತರಿಸಲಾರಂಭಿಸುತ್ತಾರೆ.

ಅವರು ಹೇಳುವುದೇನೆಂದರೆ "ಸಾಮಾನ್ಯ ಹಿಂದೂವೊಬ್ಬನ ಪ್ರಕಾರ ಹೇಳುವುದಾದರೆ ವ್ಯಕ್ತಿಯೋರ್ವ ಮಹಾತ್ಮ ಪಟ್ಟಕ್ಕೆ ಅರ್ಹತೆ ಗಳಿಸಲು ಮೂರು ಅಂಶಗಳನ್ನು ಹೊಂದಿರಬೇಕು. ಅವು ಆತನ ಬಟ್ಟೆ, ಆತನ ಗುಣ ಮತ್ತು ಆತನ ನಿರ್ದಿಷ್ಟ ಸಿದ್ಧಾಂತ. ಈ ಹಿನ್ನೆಲೆಯಲ್ಲಿ ಮಹಾತ್ಮರು ಯಾರು ಎಂದು ತೀರ್ಮಾನಿಸಲು ಈ ಅಂಶಗಳನ್ನು ಆಧಾರವಾಗಿ ತೆಗೆದುಕೊಳ್ಳುವುದಾದರೆ ತಿಳಿಗೇಡಿ ಮತ್ತು ತಮ್ಮ ಏಳಿಗೆಗಾಗಿ ಇತರರತ್ತ ನೋಡುವ ಅವಿದ್ಯಾವಂತ ಜನರ ದೃಷ್ಟಿಯಲ್ಲಿ ಖಂಡಿತ ಮೋಹನದಾಸ ಕರಮಚಂದ ಗಾಂಧಿಯವರು ಮಹಾತ್ಮರಾಗುತ್ತಾರೆ. ಈ ರೀತಿ ವೇಷ ಬದಲಿಸಿ ಮಹಾತ್ಮರುಗಳಾಗುವುದು ಭಾರತದಲ್ಲಿ ಯಾರಿಗೇ ಆಗಲಿ ಬಹಳ ಸುಲಭ. ಇದು ಹೇಗೆಂದರೆ ನೀವೊಂದು ವೇಳೆ ಅತಿವಿಶಿಷ್ಟವಾದ ಶ್ರೇಷ್ಠ ಕೆಲಸವನ್ನು ಸಾಮಾನ್ಯ ವೇಷ ಧರಿಸಿ ಸಾಮಾನ್ಯ ಜೀವನ ನಡೆಸುತ್ತಾ ಮಾಡಿದೆರೆಂದಿಟ್ಟುಕೊಳ್ಳಿ ಯಾರೂ ಕೂಡ ನಿಮ್ಮನ್ನು ಗಮನಿಸುವುದಿಲ್ಲ! ಆದರೆ ಅದೇ, ವ್ಯಕ್ತಿಯೊಬ್ಬ ಸಾಮಾನ್ಯ ರೀತಿಯಲ್ಲಿ ವರ್ತಿಸದೆ ವಿಚಿತ್ರ ಹಾವಭಾವಗಳನ್ನು ಪ್ರದರ್ಶಿಸುತ್ತಿದ್ದರೆ ಮತ್ತು ತನ್ನ ಗುಣದಲ್ಲಿ ಅಸಹಜತೆಯನ್ನು ತೋರಿಸುತ್ತಿದ್ದರೆ ಆತ ಸಂತನಾಗುತ್ತಾನೆ, ಮಹಾತ್ಮನಾಗುತ್ತಾನೆ. ಒಟ್ಟಾರೆ ನೀವೊಂದು ಸೂಟ್ ಅಥವಾ ಸಾಮಾನ್ಯ ಡ್ರೆಸ್ ಧರಿಸಿ ಏನಾದರೂ ಮಾಡುತ್ತಿದ್ದರೆ ಜನ ನಿಮ್ಮತ್ತ ಕಣ್ಣೆತ್ತಿಯೂ ನೋಡಲು ಇಚ್ಛಿಸುವುದಿಲ್ಲ, ಆದರೆ ಅದೇ ವ್ಯಕ್ತಿಯೊಬ್ಬ ಬಟ್ಟೆ ಬಿಚ್ಚಿ ನಗ್ನನಾಗಿ ಓಡುತ್ತಿದ್ದರೆ, ಉದ್ದನೆಯ ಕೂದಲು ಬಿಟ್ಟು ಜನರನ್ನು ಬೈಯುತ್ತಿದ್ದರೆ, ಚರಂಡಿಯ ಕೊಳಕು



ನೀರು ಕುಡಿಯುತ್ತಿದ್ದರೆ ಜನ ಅವನ ಪಾದಕ್ಕೆರಗುತ್ತಾರೆ! ಅವನನ್ನು ಪೂಜಿಸಲಾರಂಭಿಸುತ್ತಾರೆ. ಈ ನಿಟ್ಟಿನಲ್ಲಿ ಇಂತಹ ಪರಿಸ್ಥಿತಿಯಲ್ಲಿ ಗಾಂಧಿ ಭಾರತದಲ್ಲಿ ಮಹಾತ್ಮರಾದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ".

ಆಶ್ಚರ್ಯವಾಯಿತೇ ಅಂಬೇಡ್ಕರರ ವಿವರಣೆ? ಮುಂದುವರಿದು ಅವರು ಹೇಳುವುದ ಕೇಳಿ "ಇಂತಹದ್ದೇನಾದರೂ ಬೇರೇ ನಾಗರಿಕ ದೇಶಗಳಲ್ಲಿ ನಡೆದಿದ್ದರೆ ಜನ ಅಂತಹವರನ್ನು ನೋಡಿ ನಗುತ್ತಿದ್ದರು". ಅಂದಹಾಗೆ ಗಾಂಧೀಜಿಯವರ ಇಂತಹ ಮಹಾತ್ಮತನಕ್ಕೆ ಜನ ಕೊಡುವ ವಿವರಣೆ ಅವರ 'ಸತ್ಯ' ಮತ್ತು 'ಅಹಿಂಸೆ'. ಪ್ರಶ್ನೆಯೇನೆಂದರೆ ಇವು (ಸತ್ಯ ಮತ್ತು ಅಹಿಂಸೆ) ಗಾಂಧೀಜಿಯವರ ಒರಿಜಿನಲ್ ಸಿದ್ಧಾಂತಗಳೇ? ಎಂಬುದು. ಇದಕ್ಕೆ ಅಂಬೇಡ್ಕರರು ಕೊಡುವ ವಿವರಣೆ ನೋಡಿ "ಸಾಮಾನ್ಯ ನೋಡುಗನೊಬ್ಬನಿಗೆ ಗಾಂಧೀಜಿಯವರ ಬೋಧನೆಗಳು ತುಂಬಾ ಸಿಹಿಯೆನಿಸಬಹುದು, ಆಪ್ಯಾಯವೆನಿಸಬಹುದು. ಸತ್ಯ ಮತ್ತು ಅಹಿಂಸೆ ಪವಿತ್ರ ತತ್ವಗಳು. ಆ ಕಾರಣದಿಂದ ಗಾಂಧಿ ಸತ್ಯ ಮತ್ತು ಅಹಿಂಸೆಗಳನ್ನು ತಾನು ಬೋಧಿಸುತ್ತೇನೆಂದು ಘೋಷಿಸಿಕೊಂಡಿರುವುದರಿಂದ ಮತ್ತು ಜನ ಅದನ್ನು ಬಹಳ ಇಷ್ಟ ಪಟ್ಟಿರುವುದರಿಂದ ಅವರು ಅವರ ಸುತ್ತ ಸಹಸ್ರ ಸಂಖ್ಯೆಯಲ್ಲಿ ಗುಂಪುಗೂಡುತ್ತಿದ್ದಾರೆ. ಆದರೆ ನನಗೆ ಅರ್ಥವಾಗದ್ದೆಂದರೆ ಜನ ಯಾಕೆ ಹೀಗೆ ಅಂತ? ಯಾಕೆಂದರೆ ಸಹಸ್ರ ವರ್ಷಗಳ ಹಿಂದೆ ಸತ್ಯ ಮತ್ತು ಅಹಿಂಸೆಯ ಈ ಸಂದೇಶಗಳನ್ನು ಇಡೀ ಜಗತ್ತಿಗೇ ನೀಡಿದ್ದು ಭಗವಾನ್ ಬುದ್ಧ ಎಂಬುದು ವಾಸ್ತವವಲ್ಲವೆ? ಈ ನಿಟ್ಟಿನಲ್ಲಿ ಈ ವಿಷಯದ ಬಗೆಗಿನ (ಸತ್ಯ ಮತ್ತು ಅಹಿಂಸೆ) ಮೂಲ ಕ್ರೆಡಿಟ್‌ಅನ್ನು ತಿಳಿಗೇಡಿ ಮೂರ್ಖರು ಅಥವಾ ಜನ್ಮತಃ ಬುದ್ಧಿಗೇಡಿಗಳನ್ನು ಹೊರತುಪಡಿಸಿ ಮತ್ತಾರೂ ಕೂಡ ಗಾಂಧಿಯವರಿಗೆ ನೀಡಲಾರರು. ಹಾಗೆ ಹೇಳುವುದಾದರೆ ಮಾನವನ ನಾಗರಿಕತೆ ರಕ್ಷಿಸಲು ಸತ್ಯ ಮತ್ತು ಅಹಿಂಸೆ ಅತ್ಯಗತ್ಯ ಎಂಬ ಘೋಷಣೆಯಲ್ಲಿ ಹೊಸದೇನು ಇಲ್ಲ ಮತ್ತು ನಾನು ಮೊದಲೇ ಹೇಳಿದಂತೆಯೇ ಈ ವಿಷಯಗಳನ್ನು ಸಹಸ್ರ ವರ್ಷಗಳ ಹಿಂದೆಯೇ ಬೋಧಿಸಿದ್ದು ಭಗವಾನ್ ಬುದ್ಧ. ಸತ್ಯ ಮತ್ತು ಅಹಿಂಸೆಯ ಪ್ರಯೋಗದಿಂದ ಒದಗಬಹುದಾದ ಜ್ವಲಂತ ಸಮಸ್ಯೆಗಳ ಬಗ್ಗೆ ಗಾಂಧೀಜಿಯವರೇನಾದರೂ ಬೆಳಕು ಚೆಲ್ಲಿದ್ದಿದ್ದರೆ ಅವರ ಮಹಾತ್ಮತನಕ್ಕೆ ಮತ್ತಷ್ಟು ಹೊಳಪು ಬರುತ್ತಿತ್ತು, ಜಗತ್ತು ಅವರಿಗೆ ಸದಾ ಕೃತಜ್ಞವಾಗಿರುತ್ತಿತ್ತು. ಜಗತ್ತು ಇಂದು ಎರಡು ಒಗಟುಗಳಿಗೆ ಪರಿಹಾರವನ್ನು ಕುತೂಹಲದಿಂದ ಕಾಯುತ್ತಿದೆ. ಅವುಗಳನ್ನು ಹೆಸರಿಸುವುದಾದರೆ 'ಸತ್ಯ'ದಂತಹ ಪವಿತ್ರ ತತ್ವವನ್ನು ಎತ್ತಿಹಿಡಿಯುವುದು ಹೇಗೆ ಮತ್ತು ಯಾವ ಸಂದರ್ಭದಲ್ಲಿ 'ಹಿಂಸೆಯನ್ನು' ಸರಿಯಾದ ಕ್ರಿಯೆ ಎಂದು ನಿರ್ಧರಿಸಬಹುದು? ಎಂಬುದು. ಅಂದಹಾಗೆ ಗಾಂಧಿ (ಸತ್ಯ ಮತ್ತು ಅಹಿಂಸೆಯ) ಇಂತಹ ಜಟಿಲ ಪ್ರಶ್ನೆಗಳಿಗೆ ಉತ್ತರಿಸಿದ್ದಾರೆಯೇ?" ಅಂಬೇಡ್ಕರ್ ಕೇಳುತ್ತಾ ಹೋಗುತ್ತಾರೆ. ಹಾಗೆಯೇ ಅವುಗಳ ಮೂಲ ಪ್ರತಿಪಾದಕನಾದ ಭಗವಾನ್ ಬುದ್ಧ "ಸತ್ಯ ಮತ್ತು ಅಹಿಂಸೆಗೆ ನಮ್ಮ ನಿಲುವು ಆಶಾವಾದದ್ದಾಗಿರಬೇಕು" ಎಂದು ಹೇಳಿದ್ದನ್ನು ಕೂಡ ಅವರು ದಾಖಲಿಸುತ್ತಾರೆ. ಒಟ್ಟಾರೆ ಅಂಬೇಡ್ಕರರ ಪ್ರಕಾರ "ಸತ್ಯ ಮತ್ತು ಅಹಿಂಸೆಯ **original patent** (ಮೂಲ ಹಕ್ಕು) ಬುದ್ಧನಿಗೆ ಸಲ್ಲುತ್ತದೆ."

ಹಾಗಿದ್ದರೆ ಸತ್ಯ ಮತ್ತು ಅಹಿಂಸೆ ಬುದ್ಧನದ್ದು ಎಂದಾದರೆ ಗಾಂಧಿ ಏನು ಮಾಡಿದರು? ಇದಕ್ಕೆ ಅಂಬೇಡ್ಕರರು ಹೇಳುವುದ ನೋಡಿ "ಗಾಂಧೀಜಿಯವರ ಪ್ರವಚನಗಳನ್ನು, ಮತ್ತವರು ಬೋಧಿಸಿದ ಅಂಶಗಳನ್ನು ಗಂಭೀರವಾಗಿ ಅಧ್ಯಯನ ಮಾಡಿದರೆ ನಮಗೆ ಸಿಗುವ ಉತ್ತರವೆಂದರೆ ಅವರು ಬೇರೆಯವರ ಬಂಡವಾಳದಲ್ಲಿ ವ್ಯಾಪಾರ ಮಾಡುತ್ತಾರೆ" ಎಂಬುದು! ಬೇರೆಯವರ ಬಂಡವಾಳದಲ್ಲಿ ವ್ಯಾಪಾರ ಮಾಡುವುದು? ಹಾಗಿದ್ದರೆ ಗಾಂಧೀಜಿಯವರದ್ದು ಎಂತಹ ವ್ಯಕ್ತಿತ್ವ? ಮುಂದುವರಿದು ಅಂಬೇಡ್ಕರರು ಹೇಳುವುದ ನೋಡಿ "ಗಾಂಧೀಜಿಯವರ ಗುಣವನ್ನು ನಾನು ಗಂಭೀರವಾಗಿ ಅಧ್ಯಯನ ಮಾಡಿದಾಗ ನನಗೆ ಪರಿಪೂರ್ಣವಾಗಿ ಅರಿವಿಗೆ ಬಂದದ್ದೆಂದರೆ ಅವರ ಗುಣದಲ್ಲಿ ವಿಷಯಗಂಭೀರತೆ ಅಥವಾ ಪ್ರಾಮಾಣಿಕತೆಗಿಂತ ಕಪಟತನವೇ ಹೆಚ್ಚಿದೆ ಎಂಬುದು. ನನಗನಿಸಿದಂತೆ ನನ್ನ ದೃಷ್ಟಿಯಲ್ಲಿ ಅವರ ಕ್ರಿಯೆಗಳನ್ನು ನಕಲಿ ನಾಣ್ಯಗಳಿಗೆ ಹೋಲಿಸಬಹುದು. ಅವರ ವಿನಯಶೀಲತೆಯನ್ನು ಇಂಗ್ಲಿಷ್ ಕಾದಂಬರಿ 'ಡೇವಿಡ್ ಕಾಪರ್‌ಫೀಲ್ಡ್'ನಲ್ಲಿ ಕಂಡುಬರುವ **politeness of urea heap** (ಯೂರಿಯಾ ಬೆಳೆಯ ಕೃತಕವಿನಯಶೀಲತೆಗೆ) ಹೋಲಿಸಬಹುದು. ತಮ್ಮ ಸಹಜ ಧೂರ್ತ ಬುದ್ಧಿ ಮತ್ತು ಮೋಸಮಾಡುವ ಗುಣದಿಂದಾಗಿ ಅವರು ತಮ್ಮನ್ನು ತಾವೇ ಮಂಚೂಣಿಯಲ್ಲಿ ಇಟ್ಟುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ನಿಜ ಹೇಳಬೇಕೆಂದರೆ ತನ್ನ ಸಾಮರ್ಥ್ಯದಲ್ಲಿ ನಂಬಿಕೆಯಿರುವ ಯಾವುದೇ ವ್ಯಕ್ತಿ ಜೀವನದ ಸಹಜ ವಾಸ್ತವಗಳನ್ನು ನೇರವಾಗಿ ಮತ್ತು ಪೌರುಷತನದಿಂದ ಎದುರಿಸುತ್ತಾನೆ. ಅಂತಹ ವ್ಯಕ್ತಿಗೆ ತನ್ನ ಅಂಗಿಯ ತೋಳಿನ ಸಂದಿಯಲ್ಲಿ ಕತ್ತಿಯನ್ನು ಅಡಗಿಸಿಟ್ಟುಕೊಳ್ಳುವ ಅಗತ್ಯ ಕಂಡುಬರುವುದಿಲ್ಲ. ಇದು ಹೇಗೆಂದರೆ ನೆಪೋಲಿಯನ್ ಸದಾ ನೇರವಾಗಿ, ಮುಂದಿನಿಂದ ದಾಳಿಮಾಡುತ್ತಿದ್ದ. ವಿಶ್ವಾಸಘಾತದಲ್ಲಿ ಆತನಿಗೆ ನಂಬಿಕೆಯಿರಲಿಲ್ಲ ಮತ್ತು ಆ ಕಾರಣದಿಂದ ಆತ ಎಂದಿಗೂ ಹಿಂದಿನಿಂದ ದಾಳಿಮಾಡಿದವನಲ್ಲ. ಈ ನಿಟ್ಟಿನಲ್ಲಿ ವಿಶ್ವಾಸಘಾತುಕತನ ಮತ್ತು ವಂಚನೆ ದುರ್ಬಲ ಮನಸ್ಸಿನವರ ಆಯುಧಗಳು, ಗಾಂಧಿ ಸದಾ ಈ ಆಯುಧಗಳನ್ನು ಬಳಸಿದ್ದಾರೆ."

ವಂಚನೆ... ವಿಶ್ವಾಸಘಾತುಕತನ... ಯೂರಿಯಾ ಕೃತಕ ರಸಗೊಬ್ಬರದಂತಹ ಬೆಳೆಯ ಕೃತಕ ವಿನಯಶೀಲತೆ... ಹೀಗೆ ಸಾಗುತ್ತದೆ ಅಂಬೇಡ್ಕರರಿಂದ ಗಾಂಧಿಯವರ ಗುಣ ನಿರೂಪಣೆ. ಹಾಗಿದ್ದರೆ ಗಾಂಧಿಯವರು ಯಾರನ್ನು ವಂಚಿಸಿದರು? ಉದಾಹರಣೆಗೆ ದುಂಡುಮೇಜಿನ ಸಮ್ಮೇಳನದಂತಹ ಅಂತಾರಾಷ್ಟ್ರೀಯ ಸಮ್ಮೇಳನ ಮತ್ತು ತತ್ಪರಿಣಾಮ ಮೂಡಿಬಂದ ಪೂನಾ ಒಪ್ಪಂದದ ಪ್ರಕರಣಗಳನ್ನು ಗಮನಿಸುವುದಾದರೆ ಗಾಂಧೀಜಿಯವರು ದುಂಡುಮೇಜಿನ ಸಭೆಯಲ್ಲಿ ತಾನೇ ಅಸ್ಪೃಶ್ಯರ ನಿಜವಾದ ಪ್ರತಿನಿಧಿ ಎಂದು ಹೇಳಿದರು. ಆ ಮೂಲಕ ಅವರು ಇಬ್ಬರನ್ನು ಅಂದರೆ ಒಂದು ವ್ಯಕ್ತಿ ಮತ್ತು ಅವರ ಹಿಂದೆ ಇದ್ದ ಒಂದು ಸಮುದಾಯ ಈರ್ವರನ್ನು ವಂಚಿಸುವ ಸಂಚು ನಡೆಸಿದರು. ವ್ಯಕ್ತಿ ಅಂದರೆ ಅಂಬೇಡ್ಕರ್. ಅಂದರೆ ತಾನೇ ನಿಜವಾದ ಅಸ್ಪೃಶ್ಯರ ಪ್ರತಿನಿಧಿ ಅಂದರೆ ಅಲ್ಲಿ ಅಂಬೇಡ್ಕರ್ ಅಪ್ರಸ್ತುತ ಎಂಬಂತೆ, ಇನ್ನು ಅಂಬೇಡ್ಕರ್ ಅಪ್ರಸ್ತುತವಾದರೆ ಅವರು ಎತ್ತುವ ಬೇಡಿಕೆಗಳು, ಹೇಳಿಕೆಗಳು ಅಪ್ರಸ್ತುತ! ತಾನು ಹೇಳಿದ್ದೇ ಸರಿ ಮತ್ತು ತನ್ನ ಹೇಳಿಕೆಗಳ ಪ್ರಕಾರ ಬ್ರಿಟಿಷ್ ಸರ್ಕಾರ ಅಸ್ಪೃಶ್ಯರಿಗೆ ಏನನ್ನೂ ನೀಡಬಾರದು, ಮತ್ತು ಹಾಗೆ ನೀಡುವ ಜವಾಬ್ದಾರಿಯನ್ನು ಹಿಂದೂಗಳಿಗೆ ಬಿಡಬೇಕು! (ಹಿಂದೂಗಳಿಗೆ ನೀಡಬೇಕು, ಇದಕ್ಕೆ ಈಗಿನ ಉದಾಹರಣೆಯೊಂದನ್ನು ನೀಡುವುದಾದರೆ ರಾಜ್ಯದಲ್ಲಿ ಹಿಂದೂಗಳ ವತಿಯಿಂದ ನಡೆಯುತ್ತಿರುವ ಸರ್ಕಾರಿ ಅನುದಾನಿತ ಲಕ್ಷಾಂತರ ಶಿಕ್ಷಣ ಸಂಸ್ಥೆಗಳಿವೆ. ನಿಮಗೆ ನೆನಪಿರಲಿ, ಈ ಸಂಸ್ಥೆಗಳು ತಾವು ನಡೆಸುತ್ತಿರುವ ಶಾಲೆಗಳಲ್ಲಿ, ಕಾಲೇಜುಗಳಲ್ಲಿ ಪರಿಶಿಷ್ಟರಿಗೆ ಸಂವಿಧಾನಬದ್ಧ ಮೀಸಲಾತಿ ನೀಡಬೇಕು. ಆದರೆ ಮೋಸವೆಂದರೆ ಹಾಗೆ ಸಹಜ ರೋಸ್ಟರ್ ಪದ್ಧತಿಯ ಹುದ್ದೆಗಳ ಮೀಸಲಾತಿಯನ್ನು ಈ ಅನುದಾನಿತ ಹಿಂದೂ ಶಿಕ್ಷಣಸಂಸ್ಥೆಗಳು ಪರಿಶಿಷ್ಟರಿಗೆ ನೀಡಿಯೇ ಇಲ್ಲ!) ಪ್ರಶ್ನೆಯೇನೆಂದರೆ ಅಂದು ಗಾಂಧಿಯವರು ಬ್ರಿಟಿಷರ ಮುಂದೆ ಹೇಳಿದ ಹಾಗೆ ಅಸ್ಪೃಶ್ಯರಿಗೆ ಅನುಕೂಲ ನೀಡುವ ಸಂಪೂರ್ಣ ಜವಾಬ್ದಾರಿಯನ್ನು ಹಿಂದೂಗಳಿಗೆ ಬಿಟ್ಟಿದ್ದರೆ? ಅಂಬೇಡ್ಕರ್ ಮೋಸವೆನ್ನುವುದು, ವಂಚನೆಯೆನ್ನುವುದು ಈ ಕಾರಣಕ್ಕೇನೆ!

ಹೀಗೆ ಒಂದು ಜನಾಂಗವನ್ನು ಸಾಮೂಹಿಕವಾಗಿ ವಂಚಿಸುವ ಗಾಂಧಿಯವರ ಹೇಳಿಕೆಯ ಪರಿಯೊಂದನ್ನು ಗಮನಿಸುವುದಾದರೆ, ಗಾಂಧಿಯವರು ಹೇಳಿದ್ದು "ಅಸ್ಪೃಶ್ಯರಿಗೆ ಪ್ರತ್ಯೇಕ ಅನುಕೂಲ ನೀಡುವುದರಿಂದ ಹಿಂದೂ ಧರ್ಮದಲ್ಲಿ ಒಡಕು ಉಂಟಾಗುತ್ತದೆ". ಇದು ಹೇಗೆಂದರೆ "ಹೌದಲ್ಲವೆ, ಗಾಂಧಿಯವರು ಹೇಳುವುದು? ಪ್ರತ್ಯೇಕ? ಇದರಿಂದ ಹಿಂದೂ ಧರ್ಮ ಒಡೆದುಹೋಗುತ್ತದೆಯಲ್ಲವೆ?" ಎಂದು ಎಲ್ಲರೂ ತಲೆದೂಗುವಂತೆ! ವಾಸ್ತವವೆಂದರೆ ಇಂತಹ ತಲೆದೂಗುವಿಕೆಯನ್ನೇ, ಕಸಿಯಲ್ಪಡುವ ಅಸ್ಪೃಶ್ಯರ ಹಕ್ಕುಗಳ ಗಾಂಧಿಯವರ ಇಂತಹ ನಡೆಯನ್ನೆ ವಂಚನೆ, ವಿಶ್ವಾಸಘಾತುಕತನ, ಮೋಸಗೊಳಿಸುವ ಪ್ರಕ್ರಿಯೆ ಎಂದು ಅಂಬೇಡ್ಕರರು ಕರೆದದ್ದು.

ಮುಂದುವರಿದು ಅಂಬೇಡ್ಕರರು ಗಾಂಧಿಯವರ ಇಂತಹ ವಂಚನೆಯ ಘಟನೆಗಳ ಮತ್ತಷ್ಟನ್ನು ದಾಖಲಿಸುತ್ತಾರೆ. ಅದೆಂದರೆ ಹಲವು ವರ್ಷಗಳ ಕಾಲ ಗಾಂಧಿ ತಾನು ಮಂದಗಾಮಿ ನಾಯಕ ಗೋಪಾಲಕೃಷ್ಣ ಗೋಖಲೆಯವರ ಅನುಯಾಯಿ ಎಂದು ಘೋಷಿಸಿಕೊಂಡಿದ್ದರು. ಆದರೆ ಇದ್ದಕ್ಕಿದ್ದಂತೆ ಅದೇ ಗಾಂಧಿ ಒಂದು ದಿನ ಕಾಂಗ್ರೆಸ್ ತೀವ್ರಗಾಮಿ ನಾಯಕ ಬಾಲಗಂಗಾಧರ ತಿಲಕ್‌ರನ್ನು ಹೊಗಳಲು ಆರಂಭಿಸಿದ್ದರು! ತದನಂತರ ಅವರು ತಿಲಕರನ್ನೂ ದ್ವೇಷಿಸಲಾರಂಭಿಸಿದ್ದರು. ಈ ಸಂದರ್ಭದಲ್ಲಿ ಅವರಿಗೆ ಸ್ವರಾಜ್ಯ ನಿಧಿಗಾಗಿ 10 ಲಕ್ಷ ಸಂಗ್ರಹಿಸುವ ಜವಾಬ್ದಾರಿ ಒದಗಿಬಂತು, ಅಲ್ಲದೆ ತಾವು ದ್ವೇಷಿಸುತ್ತಿದ್ದ ಅದೇ ಬಾಲಗಂಗಾಧರ ತಿಲಕರ ಹೆಸರನ್ನು ಆ ಸಮಯದಲ್ಲಿ ಬಳಸದಿದ್ದರೆ 10 ಲಕ್ಷ ಸಂಗ್ರಹಿಸಲು ಸಾಧ್ಯವಾಗುವುದಿಲ್ಲ ಎಂಬ ಗುಟ್ಟು ಕೂಡ ಅವರಿಗೆ ತಿಳಿದುಹೋಯಿತು! ತಡಮಾಡದೇ ಸಾಮಾನ್ಯ ಕ್ಷುಲ್ಲಕ ರಾಜಕಾರಣಿಯಂತೆ ಗಾಂಧಿಯವರು ಹಣದ ಆಸೆಗಾಗಿ ಆ ನಿಧಿಗೆ 'ತಿಲಕ್ ಸ್ವರಾಜ್ಯ ನಿಧಿ' ಎಂದು ಹೆಸರಿಟ್ಟರು! ಹಾಗೇ 10 ಲಕ್ಷ ಸಂಗ್ರಹಿಸಿದರೂ ಕೂಡ! ಒಟ್ಟಾರೆ ಅಂಬೇಡ್ಕರರು ಉಲ್ಲೇಖಿಸುವ ಈ ದೃಷ್ಟಾಂತದಲ್ಲಿ ನಾವು ಗಾಂಧಿಯವರ 'ವೇಷ ಬದಲಿಸುವ ವ್ಯಾಪಾರಿ ಬುದ್ಧಿ'ಯನ್ನು ಢಾಳಾಗಿ ಕಾಣಬಹುದು.

ಇಲ್ಲಿ ಅಂಬೇಡ್ಕರರು ಉಲ್ಲೇಖಿಸುವ ಎರಡನೇ ಘಟನೆ ಕ್ರಿಶ್ಚಿಯನ್ ಧರ್ಮಕ್ಕೆ ಸಂಬಂಧಪಟ್ಟಿದ್ದು. ಅಂಬೇಡ್ಕರರ ಭಾಷೆಯಲ್ಲೇ ಹೇಳುವುದಾದರೆ "ಗಾಂಧಿ ಕ್ರಿಶ್ಚಿಯನ್ ಧರ್ಮದ ಉಗ್ರ ವಿರೋಧಿಯಾಗಿದ್ದರೂ 'ಪಾಶ್ಚಿಮಾತ್ಯ ಪ್ರಪಂಚವನ್ನು ಮೆಚ್ಚಿಸಲು' ಆಗಾಗ ಬಿಕ್ಕಟ್ಟಿನ ಸಮಯದಲ್ಲಿ ಅವರು ಬೈಬಲ್‌ನ ಉಲ್ಲೇಖಗಳನ್ನು ಬಳಸುತ್ತಿದ್ದರು" ಎಂಬುದು! ಇನ್ನು ದುಂಡು ಮೇಜಿನ ಸಭೆಯ ಸಂದರ್ಭವೊಂದನ್ನೂ ಸ್ವತಃ ಅಂಬೇಡ್ಕರರೇ ಇಲ್ಲಿ ದಾಖಲಿಸುತ್ತಾರೆ. ಅದನ್ನು ಯಥಾವತ್ ನೀಡುವುದಾದರೆ "ದುಂಡುಮೇಜಿನ ಸಭೆಯ ಸಂದರ್ಭದಲ್ಲಿ ಅವರು (ಗಾಂಧಿ) ಜನತೆಗೆ ವಾಗ್ದಾನ ನೀಡಿದ್ದೇನೆಂದರೆ ಶೋಷಿತ ವರ್ಗಗಳು ಮಂಡಿಸುವ ಯಾವುದೇ ಬೇಡಿಕೆಗಳ ವಿರುದ್ಧವೂ ನಾನು ದನಿ ಎತ್ತುವುದಿಲ್ಲ ಎಂದು. ಆದರೆ ಶೋಷಿತ ವರ್ಗಗಳ ಜನರ ಪ್ರತಿನಿಧಿಗಳು ಬೇಡಿಕೆ ಮಂಡಿಸಿದ ತತ್‌ಕ್ಷಣವೇ ಅದೇ ಗಾಂಧೀಜಿ ಜನತೆಗೆ ತಾನು ನೀಡಿದ ವಾಗ್ದಾನ ಮರೆತರು. ಇದನ್ನು ನಾನು ಶೋಷಿತ ವರ್ಗಗಳಿಗೆ ಸೇರಿದ

ರಿಗೆ ಗಾಂಧಿ ಮಾಡಿದ ವಿಶ್ವಾಸದ್ರೋಹ ಎನ್ನುತ್ತೇನೆ. ಯಾಕೆಂದರೆ (ಅದೇ ದುಂಡುಮೇಜಿನ ಸಭೆಯ ಆದೇ ಸಮಯದಲ್ಲಿ) ಮುಸ್ಲಿಮರ ಬಳಿಗೆ ತೆರಳಿದ ಗಾಂಧಿ ಮುಸ್ಲಿಮರ ಬೇಡಿಕೆಗಳನ್ನು ನಾನು ಬೆಂಬಲಿಸುತ್ತೇನೆ. ಆದರೆ ಅದಕ್ಕೆ ಪ್ರತಿಯಾಗಿ ನೀವು (ಮುಸ್ಲಿಮರು) ದುರ್ಬಲ ವರ್ಗಗಳವರ ಪ್ರತಿನಿಧಿಗಳು ಮಂಡಿಸುವ ಬೇಡಿಕೆಗಳನ್ನು ವಿರೋಧಿಸಬೇಕು ಎಂದು ಹೇಳುತ್ತಾರೆ" ಎನ್ನುತ್ತಾ, ಅಂಬೇಡ್ಕರರು ಈ ಸಂದರ್ಭದಲ್ಲಿ **Even a scoundrel would not have done this** (ಓರ್ವ ದುಷ್ಟ ಕೂಡ ಹೀಗೆ ಮಾಡಲಾರ) ಎಂಬ ವಾಕ್ಯ ಬಳಕೆ ಮಾಡುತ್ತಾ **This is only one instance of Gandhi's treachery** (ಈ ಪ್ರಕರಣ ಗಾಂಧಿಯವರ ವಿಶ್ವಾಸಘಾತುಕತನಕ್ಕೆ ಕೇವಲ ಒಂದು ನಿದರ್ಶನವಷ್ಟೆ) ಎನ್ನುತ್ತಾರೆ. (ಅಂಬೇಡ್ಕರ್ ಬರಹಗಳು, ಇಂಗ್ಲಿಷ್ 117, ಭಾಗ.2, ಪು.68)

ಖಂಡಿತ, ಅಂಬೇಡ್ಕರರ ವಾಕ್ಯ ಬಳಕೆ ಅತಿ ಎನಿಸಬಹುದು. ಆದರೆ ಒಂದು ಜನಾಂಗದ (ಅಸ್ಪೃಶ್ಯರ) ವಿರುದ್ಧ ಇನ್ನೊಂದು ಜನಾಂಗವನ್ನು (ಮುಸ್ಲಿಮರು) ಎತ್ತಿಕಟ್ಟಿದ್ದು ಮತ್ತು ನಾವು ನಿಮ್ಮನ್ನು ಬೆಂಬಲಿಸಬೇಕಾದರೆ ನೀವು ಅವರನ್ನು ವಿರೋಧಿಸಬೇಕು" ಎಂದು ಗಾಂಧಿ ಬ್ಲಾಕ್‌ಮೇಲ್ ಮಾಡಿದ್ದು 'ಪ್ರಾಮಾಣಿಕತೆ'ಯ ಪರಿಯಾಗುತ್ತದೆಯೇ? ಹಾಗೆಯೇ ಭಾರತದಲ್ಲಿ ತಾನು ಅಸ್ಪೃಶ್ಯರ ಬೇಡಿಕೆಗಳ ವಿರುದ್ಧ ಮಾತನಾಡುವುದಿಲ್ಲ ಎಂಬ ಆಶ್ವಾಸನೆಯ ಮಾತುಗಳನ್ನಾಡಿ ತಮ್ಮ ಆ ಆಶ್ವಾಸನೆಗೆ ವಿರುದ್ಧವಾಗಿ ಅದೇ ಅಸ್ಪೃಶ್ಯರ ಬೇಡಿಕೆಗಳ ವಿರುದ್ಧ ಗಾಂಧಿ ಮಾತನಾಡಿದ್ದು, ಪ್ರಬಲವಾಗಿ ವಿರೋಧಿಸಿದ್ದು ಅದು ಅವರ ಬಹಿರಂಗ ಸುಳ್ಳಿನ ಹೇಳಿಕೆಯಾಗುತ್ತದೆಯಲ್ಲವೆ? ಮತ್ತು ಹಾಗೇ ಅದು ಗಾಂಧಿ ಅಸ್ಪೃಶ್ಯರಿಗೆ ಎಸಗಿದ ವಿಶ್ವಾಸಘಾತುಕತನಕ್ಕೆ ಸ್ಪಷ್ಟ ನಿದರ್ಶನವಾಗುತ್ತದೆಯಲ್ಲವೆ?

ಆಶ್ಚರ್ಯವೆಂದರೆ ದುಂಡುಮೇಜಿನ ಸಭೆಯಲ್ಲಿ ಅಸ್ಪೃಶ್ಯರ ಬೇಡಿಕೆಗಳನ್ನು ವಿರೋಧಿಸಿ ಮುಸ್ಲಿಮರ ಬೇಡಿಕೆಗಳನ್ನು ಬೆಂಬಲಿಸುವ ಗಾಂಧಿ ಮತ್ತೊಂದು ಪ್ರಮುಖ ಸಂದರ್ಭದಲ್ಲಿ ಮುಸ್ಲಿಮರ ಬೇಡಿಕೆಗಳನ್ನೂ ವಿರೋಧಿಸುತ್ತಾರೆ! ಅಂಬೇಡ್ಕರರು ಪ್ರಸ್ತಾಪಿಸುವ ಆ ಘಟನೆಯ ಸಾರವನ್ನು ನೀಡುವುದಾದರೆ, ಅದೆ ಕಾಂಗ್ರೆಸ್ ಸಮಾವೇಶದ ಸಮಯವೊಂದರಲ್ಲಿ ಜವಾಹರಲಾಲ್ ನೆಹರೂರವರ ತಂದೆ ಮೋತಿಲಾಲ್ ನೆಹರೂರವರು ತಯಾರಿಸಿದ್ದ ವರದಿಯೊಂದು ಮಂಡನೆಯಾಗಿತ್ತು, ಆ ವರದಿ 'ನೆಹರೂ ಸಮಿತಿ ವರದಿ' ಎಂದೇ ಪ್ರಸಿದ್ಧ. ಆ ಸಮಾವೇಶದಲ್ಲಿ ಆ ವರದಿ ಮಂಡನೆಯಾಗುತ್ತಲೇ ಆ ವರದಿಗೆ ಸಂಬಂಧಪಟ್ಟ ಕೆಲವು ತಿದ್ದುಪಡಿಗಳನ್ನು ಸ್ವತಃ ತಾವೇ ವಿರೋಧಿಸದ ಗಾಂಧಿ ತಮ್ಮ ಪರವಾಗಿ ಜಯಕರ್ ಎಂಬುವವರನ್ನು ಬಾಡಿಗೆಗೆ ಪಡೆದು ಛೂಬಿಡುತ್ತಾರೆ! ಅಂದಹಾಗೆ ಆ ತಿದ್ದುಪಡಿಗಳು ಯಾರಿಗೆ ಸಂಬಂಧಪಟ್ಟವಾಗಿದ್ದವೆಂದರೆ ಮುಸ್ಲಿಮರಿಗೆ! ಮತ್ತು ಆ ತಿದ್ದುಪಡಿಗಳನ್ನು ತನ್ನ ಸಮುದಾಯದ ಪರವಾಗಿ ಅಂಗೀಕರಿಸುವಂತೆ ಮತ್ತು ಅವುಗಳನ್ನು ಸಲಹೆಮಾಡಿದ್ದು ಅಂದಿನ ಮುಸ್ಲಿಂ ಸಮುದಾಯದ ಪ್ರಖ್ಯಾತೀತ ನಾಯಕ ಮಹಮ್ಮದಾಲಿ ಜಿನ್ನಾ! ಹಾಗಿದ್ದರೆ ಯಾಕೆ ಗಾಂಧೀಜಿ ಅಂತಹ ತಿದ್ದುಪಡಿಗಳನ್ನು ವಿರೋಧಿಸಿದರು? ಖಂಡಿತ, ಆ ತಿದ್ದುಪಡಿಗಳ ಮೂಲಕ ಮುಸ್ಲಿಮರ ಹಲವು ಪ್ರಮುಖ ಬೇಡಿಕೆಗಳು ಈಡೇರುತ್ತಿತ್ತು! ಆದರೆ ಎಲ್ಲಿ ಮುಸ್ಲಿಮರಿಗೆ ಅವರ ಎಲ್ಲಾ ಹಕ್ಕುಗಳು ದೊರಕಿಬಿಡುತ್ತದೋ ಎಂದು ಯೋಚಿಸಿದ ಗಾಂಧೀಜಿಯವರು ತನ್ನ ಶಿಷ್ಯರನ್ನು ಅಂತಹ ಐತಿಹಾಸಿಕ ಮುಸ್ಲಿಂ ಪರವಾದ ತಿದ್ದುಪಡಿಗಳ ವಿರುದ್ಧ ಛೂಬಿಟ್ಟಿದ್ದರು ಮತ್ತು ಅವು ಬಿದ್ದುಹೋಗುವ ಹಾಗೆ ನೋಡಿಕೊಂಡರು! ಅಂದಹಾಗೆ ಅಂಬೇಡ್ಕರರ ಪ್ರಕಾರ 'ನೆಹರೂ ಸಮಿತಿ ವರದಿ'ಗೆ ಸೂಚಿಸಿದ್ದ ಆ ತಿದ್ದುಪಡಿಗಳೇನಾದರೂ ಅಂದೇ ಅಂಗೀಕಾರಗೊಂಡಿದ್ದರೆ ಇಂದಿಗೂ ಉಗ್ರರೂಪದಲ್ಲಿರುವ 'ಹಿಂದೂ-ಮುಸ್ಲಿಂ ದ್ವೇಷ' ಅಂದೇ ಕೊನೆಯಾಗಿರುತ್ತಿತ್ತು! ಈ ನಿಟ್ಟಿನಲ್ಲಿ ಅಂಬೇಡ್ಕರರ ಆ ವಾಕ್ಯವನ್ನಿಲ್ಲಿ ಯಥಾವತ್ ದಾಖಲಿಸುವುದಾದರೆ **Hindu-Moslem hostility is the result of deceitful action on the part of Gandhi** (ಗಾಂಧಿಯವರ ಕಡೆಯಿಂದ ಆದ ಮೋಸಗಾರಿಕೆಯ ಕೃತ್ಯದ ಪರಿಣಾಮವೇ ಹಿಂದೂ-ಮುಸ್ಲಿಂ ದ್ವೇಷ). ಹಾಗೆ ಹೇಳುತ್ತಾ ಅಂಬೇಡ್ಕರರು "ಮುಸ್ಲಿಮರು ಮತ್ತು ಅಸ್ಪೃಶ್ಯರ ಹಿತೈಷಿ ಎಂದು ಯಾರು ಪರಿಗಣಿಸಲ್ಪಟ್ಟಿದ್ದರೋ ಮತ್ತು ಅವರ ಏಳ್ಗೆಯಲ್ಲಿ ತಾನು ಚಾಂಪಿಯನ್ ಎಂದು ಯಾರು ಹೇಳಿಕೊಂಡಿದ್ದರೋ ಅದೇ ವ್ಯಕ್ತಿ ಆ ಸಮುದಾಯಗಳ ಜನರ ಮೂಲ ಆಶಯಕ್ಕೆ ವಿಶ್ವಾದ್ರೋಹವೆಸಗಿದರು. ಇದು ನಿಜಕ್ಕೂ ನನಗೆ ತೀವ್ರ ನೋವುಂಟುಮಾಡುವಂತಹದ್ದು. ಈ ಸಂದರ್ಭಕ್ಕೆ ತಕ್ಕಂತೆ ಹಳೆಯದೊಂದು ಗಾದೆ ಇದೆ, 'ಬಗಲ್ ಮೇ ಚೂರಿ, ಮೂಹ್ ಮೇ ರಾಮ್' (ಬಾಯಲ್ಲಿ ದೇವರ ಹೆಸರು, ಕಂಕುಳಲ್ಲಿ ಕತ್ತಿ). ಈ ನಿಟ್ಟಿನಲ್ಲಿ ಅಂತಹ ವ್ಯಕ್ತಿಯನ್ನು ನಾವು 'ಮಹಾತ್ಮ' ಎಂದು ಕರೆಯುವುದಾದರೆ ಖಂಡಿತ **By all means call Gandhi a Mahatma.** ನನ್ನ ಪ್ರಕಾರ ಅವರು ಕೇವಲ ಮೋಹನದಾಸ ಕರಮಚಂದ ಗಾಂಧಿಯಷ್ಟೆ."

"ರಾಜಕಾರಣ ಇಂದು ತನ್ನ ಶೀಲ ಕಳೆದುಕೊಂಡು ಬೆತ್ತಲೆಯಾಗಿದೆ. ಈ ದಿಸೆಯಲ್ಲಿ ಭಾರತದ ರಾಜಕಾರಣದಲ್ಲಿ ವ್ಯಾಪಾರೀಕರಣವನ್ನು introduce ಮಾಡಿದವರು ಮತ್ತು ರಾಜಕಾರಣದಲ್ಲಿರಬಹುದಾದ ನೈತಿಕತೆಯನ್ನು ನಾಶಮಾಡಿದವರಲ್ಲಿ ಪ್ರಮುಖ ಜವಾಬ್ದಾರರು ಗಾಂಧಿ" ಎನ್ನುತ್ತಾ, ಮಹಾತ್ಮರ ವಿರುದ್ಧದ ತನ್ನ ಈ ಹೋರಾಟ ಅಷ್ಟು ಸುಲಭದಲ್ಲ ಎಂಬುದನ್ನೂ ಪ್ರಸ್ತಾಪಿಸುತ್ತಾ ಅಂಬೇಡ್ಕರರು "ಭಾರತದ ಜನಸಂಖ್ಯೆಯ ಬಹುತೇಕರು ಅನಾಗರಿಕ, ಅಶಿಕ್ಷಿತ ಮತ್ತು ಅರಿವಿಲ್ಲದವರು. ಇದು ಜನತೆಯ ತಪ್ಪಲ್ಲ, ಸಮಾಜದ ಅನುಕೂಲ ಪಡೆದ ಕೆಲವು ಜನ ಉದ್ದೇಶಪೂರ್ವಕವಾಗಿ ಜನಸಮೂಹವನ್ನು ತಿಳಿಗೇಡಿಗಳಂತೆ, ಅಶಿಕ್ಷಿತರಂತೆ ಇಟ್ಟಿದ್ದಾರೆ. ಪರಿಣಾಮ, (ಇಂತಹವರ ನಡುವೆ) ಕೇವಲ ವೈಚಾರಿಕತೆ ಮತ್ತು ತಾರ್ಕಿಕ ಬಲಗಳಿಂದಷ್ಟೆ ಮಹಾತ್ಮರ ವಿರುದ್ಧ ಹೋರಾಡುವುದು ಅಸಾಧ್ಯ, ಈ ಹಿನ್ನೆಲೆಯಲ್ಲಿ ಈ ಹೋರಾಟ ಬೌದ್ಧಿಕತೆ ಮತ್ತು ಮಾನಸಿಕ ಕಲ್ಪನೆ ಹಾಗೂ ಸವಾಲುಗಳ ನಡುವಿನದ್ದು" ಎನ್ನುತ್ತಾರೆ. ಆ ಮೂಲಕ ಅಂಬೇಡ್ಕರರು ತಾವು ಮಾಡುತ್ತಿರುವುದು ಎಂತಹ ಹೋರಾಟ ಎಂಬುದರ ಸೂಕ್ಷ್ಮತೆಯನ್ನು ತಿಳಿಸುತ್ತಾರೆ. ಹೌದು, ಅಂಬೇಡ್ಕರರ ಈ ಹೋರಾಟ ಮತ್ತು ಅಂತಹ ಹೋರಾಟದ ಮಾದರಿಯ ಈ ಲೇಖನ ಗಾಂಧೀಜಿಯವರ ನೈಜ ಮುಖವನ್ನು ಬಯಲಿಗೆಳೆಯುತ್ತದೆ. ಹಾಗಂತ ಅಂಬೇಡ್ಕರರೇನು ಗಾಂಧೀಜಿಯವರ ವೈಯಕ್ತಿಕ ವಿಷಯಗಳನ್ನಿಲ್ಲಿ ಪ್ರಸ್ತಾಪಿಸಿಲ್ಲ, ಆದರೆ ಮಹಾತ್ಮ ಎನಿಸಿಕೊಳ್ಳುವವರೊಬ್ಬ ಮುಸ್ಲಿಮರು ಮತ್ತು ಅಸ್ಪೃಶ್ಯರು ಎಂಬ ಎರಡು ಬೃಹತ್ ಸಮುದಾಯಗಳನ್ನು ವಂಚಿಸಲು ಹೆಣೆದ ಸಂಚು ಅದಕ್ಕಾಗಿ ಅವರು ಹಿಡಿದ ಅಡ್ಡದಾರಿಗಳು... ಅವರ ಬಹಿರಂಗ ಸುಳ್ಳುಗಳು... ಖಂಡಿತ **Is Gandhi a Mahatma?** ಎಂಬ ಪ್ರಶ್ನೆಯನ್ನು ನಮಗೆ ನಾವೇ ಹಾಕಿಕೊಳ್ಳುವಂತೆ ಮಾಡುತ್ತದೆ.

■ ರಘೋತ್ತಮ ಹೊ.ಬ

ಅಧಿಕಾರವೆಂಬ ನಾಯಿತೇಜ

ಹರಗಣ ಪಂಕ್ತಿಯ ನಡುವೆ ಕುಳ್ಳಿರ್ದು
ನಾನು ಒಡೆತನದ ನಾಯಿತೇಜವ ಹೊತ್ತುಕೊಂಡು
ಮಡದಿಯೆನ್ನಗಲೊಳಗೆ ಸಕಲದೇವಾನ್ನವ
ಒಡೆಯರಿಂದಲೂ ಮಿಗಿಲಾಗಿ ಇಕ್ಕಲು, ತೆಗೆದಿರಿಸಿದೆನು.
ಈ ಪರಿಯ ಆಯ ಕಣ್ಗೆ ತೋರಲು ಕಿಲ್ಬಿಷವಾದವು.
ಕರುಣಿ ಚನ್ನಬಸವಣ್ಣಾ ಮರೆದು ಕೊಂಡೆನಾದಡೆ,
ಒಡೆಯ ಕೂಡಲಸಂಗಯ್ಯಾ ಕೆಡಹಿ ನರಕದಲ್ಲಿಕ್ಕುವ.

– ಬಸವಣ್ಣನವರು

ಬಸವಣ್ಣನವರ ಈ ವಚನ ಪ್ರಭುತ್ವದ ಒಡೆಯರಾರು ಎಂಬುದನ್ನು ಸೂಚಿಸುವ ವಚನವಾಗಿದೆ. ಪ್ರಜೆಗಳನ್ನು ಕಡೆಗಣಿಸುವ ಪ್ರಭುತ್ವವು ಹಿಂಸೆಯ ಮೇಲೆ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡಿರುತ್ತದೆ. ಈ ಕಡೆಗಣಿಸುವ ಕ್ರಿಯೆ ಸರ್ವಾಧಿಕಾರದ ಹೆಸರಿನಲ್ಲಷ್ಟೇ ಅಲ್ಲದೆ ಹಿಂದೂತ್ವದ, ಇಸ್ಲಾಮಿನ, ಪ್ರಜಾಪ್ರಭುತ್ವದ, ಸಮಾಜವಾದದ ಮತ್ತು ಕಮ್ಯೂನಿಸಂನ ಹೆಸರಿನಲ್ಲಿ ಕೂಡ ನಡೆಯಬಹುದು. ಪ್ರಜಾಹಿತ ಪ್ರಧಾನವಾದ ಪ್ರಭುತ್ವವನ್ನು ರಕ್ಷಿಸುವ ಕ್ರಮವನ್ನು ಬಸವಣ್ಣನವರು ಈ ವಚನದ ಮೂಲಕ ಮಾನವಕುಲಕ್ಕೆ ಅರುಹಿದ್ದಾರೆ. ಸದಾಕಾಲ ಆಳುವವರ್ಗಕ್ಕೆ ಮಾರ್ಗದರ್ಶಿಯಾದ ಈ ವಚನವನ್ನು ಅವರು ಅತ್ಯಂತ ಚಿಕ್ಕ ಘಟನೆಯ ಮೂಲಕ ರಚಿಸಿದ್ದಾರೆ.

ನಿಜವಾದ ಜನಪ್ರತಿನಿಧಿಯ ಲಕ್ಷಣ ಯಾವುದು? ಪ್ರಭುತ್ವದ ಒಡೆಯರಾರು? ಪ್ರಜೆಗಳ ಪ್ರತಿನಿಧಿಗಳು ಪ್ರಜೆಗಳ ಜೊತೆ ವ್ಯವಹರಿಸುವ ಕ್ರಮ ಯಾವುದು? ಪ್ರಭುತ್ವದ ಚುಕ್ಕಾಣಿ ಹಿಡಿದವರು ಹೇಗೆ ಎಚ್ಚರದಿಂದ ಇರಬೇಕು? ಯಾಕೆ ಅವರು ನಿರ್ಭಿಡೆಯಿಂದ ವರ್ತಿಸಬೇಕು? ತಮಗೆ ಒದಗಿಬರುವ ಅವಕಾಶ ಪ್ರಜಾಪ್ರಭುತ್ವಕ್ಕೆ ಪೂರಕವಾಗಿದೆಯೊ ಇಲ್ಲವೋ? ಎಂಬುದನ್ನು ಹೇಗೆ ಗುರುತಿಸಬೇಕು? ಎಂಬ ಪ್ರಶ್ನೆಗಳಿಗೆ ಈ ವಚನಗಳಲ್ಲಿ ಉತ್ತರವಿದೆ. ನಮ್ಮ ರಾಜಕಾರಣಿಗಳು ಮತ್ತು ಧರ್ಮಕಾರಣಿಗಳಿಗೆ ಈ ವಚನ ಎಚ್ಚರಿಕೆ ಗಂಟೆ ಕೂಡ ಆಗಿದೆ.

ಬಸವಣ್ಣನವರು ಈ ವಚನದಲ್ಲಿ 'ಒಡೆಯರು' ಎಂಬ ಪದಪ್ರಯೋಗ ಮಾಡಿದ್ದಾರೆ. ಒಡೆಯ ಎಂದರೆ ದೇವರು, ರಾಜ, ಶ್ರೀಮಂತ, ಮಾಲೀಕ ಮುಂತಾದ ಅರ್ಥಗಳಿವೆ. ಆದರೆ ಬಸವಣ್ಣನವರು 'ಒಡೆತನ' ಪದವನ್ನು ಪ್ರಭುತ್ವಕ್ಕೆ ಮತ್ತು 'ಒಡೆಯರು' ಪದವನ್ನು ಜನಸಾಮಾನ್ಯರಿಗೆ ಬಳಸಿದ್ದು ತರ್ಕಬದ್ಧವಾಗಿದೆ. ಬಸವಣ್ಣನವರ ದೃಷ್ಟಿಯಲ್ಲಿ 'ಒಡೆಯರು' ಎಂದರೆ ಶ್ರೀಸಾಮಾನ್ಯರು, ಶರಣರು ಮತ್ತು ಇಷ್ಟಲಿಂಗತತ್ತ್ವವೆಂಬ ಸರ್ವಸಮತ್ವದ ವಚನತತ್ತ್ವವನ್ನು ಜನಮನದಲ್ಲಿ ಬಿತ್ತುವವರು. ಈ ಒಡೆಯರಿಗೂ ಒಡೆತನಕ್ಕೂ ಅಜಗಜಾಂತರವಿದೆ. ಈ ಒಡೆಯರು ಒಡೆತನವನ್ನು ಹೊಂದಿಲ್ಲ, ರಾಜರಾದವರು ಒಡೆತನವನ್ನು ಹೊಂದಿದ್ದಾರೆ. ಪ್ರಭುತ್ವವೆಂಬ ಆ ಒಡೆತನದ ನೌಕರಶಾಹಿಯ ಪ್ರತೀಕವಾದ ತಮ್ಮ ಪ್ರಧಾನಮಂತ್ರಿ ಪದವಿಯನ್ನು 'ನಾಯಿತೇಜ' ಎಂದು ಕರೆದು ತಾವು ಅದನ್ನು ನೆಚ್ಚಿಕೊಂಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಜನಸಮುದಾಯ ಕೂಡ ವ್ಯಕ್ತಿಗಳ ಪದವಿಯ ಮೂಲಕ ಅವರನ್ನು ಅಳೆಯಬಾರದು ಎಂಬ ಸೂಚನೆಯನ್ನು ಬಸವಣ್ಣನವರು ಈ ವಚನದ ಮೂಲಕ ನೀಡಿದ್ದಾರೆ.



ಬಸವಣ್ಣನವರು ಕಲ್ಯಾಣದ ಪ್ರಧಾನಿಯಾಗಿದ್ದರೂ ಶರಣಸಂಕುಲದ ಪಂಕ್ತಿಯಲ್ಲೇ ಪ್ರಸಾದ ಸ್ವೀಕರಿಸುವ ಮೂಲಕ ಪಂಕ್ತಿಭೇದವನ್ನು ಅಳಿಸಿಹಾಕಿದ ಮೂಲಪುರುಷರಾಗಿದ್ದಾರೆ. ಬಸವಧರ್ಮದ ಪರಿಪಾಲಕರೆಂದು ಹೇಳಿಕೊಳ್ಳುವ ಸ್ವಾಮಿಗಳಾಗಲಿ ಲಿಂಗಾಯತ ರಾಜಕಾರಣಿಗಳಾಗಲಿ ಈ ಪರಿಯಲ್ಲಿ ಬಸವಣ್ಣನವರನ್ನು ಅನುಸರಿಸುತ್ತಿರುವುದು ಕಣ್ಣಿಗೆ ಬಿದ್ದಿಲ್ಲ ಎಂದೇ ಹೇಳಬೇಕಾದ ಪರಿಸ್ಥಿತಿ ಇದೆ. ಬಸವಣ್ಣನವರ ಮೂರ್ತಿಗಾಗಿ ಮತ್ತು ಆ ಮೂಲಕ ಕೀರ್ತಿಗಾಗಿ ಹಂಬಲಿಸುವ ಸ್ವಾಮಿಗಳು ಹಾಗೂ ಅಂಥವರಿಗೆ, ಜನರ ಸಂಪತ್ತಾದ ರಾಜ್ಯದ ಬೊಕ್ಕಸದಿಂದ ಕೋಟಿಗಟ್ಟಲೆ ಹಣ ಸುರಿಯುವ ರಾಜಕಾರಣಿಗಳು ಸ್ವಲ್ಪ ಬಸವಣ್ಣನವರ ಆದರ್ಶಗಳ ಕಡೆಗೆ ಗಮನ ಹರಿಸುವುದು ಆವಶ್ಯಕತೆಯಾಗಿದೆ.

ಜನರಿಗೆ ಎಲ್ಲ ತೆರನಾದ ಬೂಟಾಟಿಕೆಗಳು ಅರ್ಥವಾಗುತ್ತಿವೆ. 'ಜನರ ವೋಟಿಗಾಗಿ ಸ್ವಾಮಿಗಳಿಗೆ ಮತ್ತು ವಿವಿಧ ಧರ್ಮಗಳ ಧರ್ಮಾಧಿಕಾರಿಗಳಿಗೆ ನೋಟು' ಎಂಬ ದುರಂತ ಸ್ಥಿತಿಯನ್ನು ನಮ್ಮ ರಾಜಕೀಯ ನಾಯಕರು ತಲುಪಿದ್ದಾರೆ. ಎಳ್ಳಷ್ಟು ಎಚ್ಚರಿಕೆ ಇಲ್ಲದೆ 'ನಾಯಿತೇಜ'ಕ್ಕಾಗಿ ಹಂಬಲಿಸುತ್ತಿದ್ದಾರೆ.

ಬಸವಣ್ಣನವರು ಕೇವಲ ಮಾನವಧರ್ಮದ ಸ್ಥಾಪಕರಾಗಿರಲಿಲ್ಲ, ಅವರು ರಾಜನೀತಿಜ್ಞರೂ ಆಗಿದ್ದರು. ಆಡಳಿತದ ಚುಕ್ಕಾಣಿ ಹಿಡಿದ ಪ್ರಧಾನಿಯೂ ಆಗಿದ್ದರು. ಆದರೆ ಅವರ ಆದರ್ಶಗಳು ಕಟ್ಟಕಡೆಯ ಮನುಷ್ಯರ ಕಡೆಗೆ ಅವರನ್ನು ಒಯ್ದು ನಿಲ್ಲಿಸಿದ್ದವು. ಬಸವಣ್ಣ ಎಂದರೆ ಕಟ್ಟಕಡೆಯ ಮನುಷ್ಯರನ್ನು ಮೊಟ್ಟ ಮೊದಲು ಗುರುತಿಸುವ ಮಹೋನ್ನತ ಮಾನವ ಎಂಬುದು ಜಗಜ್ಜಾಹೀರವಾಗಿದೆ. ಆದರೂ ಬಸವಣ್ಣನವರ ಹೆಸರಿನಲ್ಲಿ ಬದುಕುವ ಅನೇಕ ಸ್ವಾಮಿಗಳಿಗೆ ಮತ್ತು ರಾಜಕಾರಣಿಗಳಿಗೆ ಬಸವಣ್ಣನವರ ಆದರ್ಶಗಳೇಕೆ ಅರ್ಥವಾಗುತ್ತಿಲ್ಲ? ಎಂಬುದು ಇಂದು ಪ್ರಶ್ನೆಯಾಗಿ ಉಳಿದಿಲ್ಲ, ಬಸವಣ್ಣನವರ ನಮೂನೆ ನಮೂನೆಯ ಚಿತ್ರಗಳಿಗೆ ಮತ್ತು ಮೂರ್ತಿಗಳಿಗೆ ಮಾರುಹೋದವರಿಗೆ ಬಸವಣ್ಣನವರ ವ್ಯಕ್ತಿತ್ವದ ಅರಿವಾಗಿಲ್ಲವೆಂದಲ್ಲ, ಅರಿವಾದರೂ ಅರಿವಾಗದವರಂತೆ ಬದುಕುವುದೇ ಅವರ ಚಾಣಾಕ್ಷ ನೀತಿಯಾಗಿದೆ.

ಬಸವಧರ್ಮ ಮಠೀಯ ಸಂಸ್ಕೃತಿಗೆ ಅತೀತವಾಗಿದೆ. ಈ ಧರ್ಮದಲ್ಲಿ ಮಠಗಳಿಲ್ಲ, ಸ್ವಾಮಿಗಳಿಲ್ಲ, ಇವೆಲ್ಲ ಬಸವಣ್ಣನವರ ಕಾಲಾನಂತರ ಸೇರಿದವು. ಇಲ್ಲಿ ದೇವರೊಬ್ಬನೇ ಸ್ವಾಮಿ. 'ಸ್ವಾಮಿ ನೀನು, ಶಾಶ್ವತ ನೀನು' ಎಂದು ಬಸವಣ್ಣನವರು ತಿಳಿಸಿದ್ದಾರೆ. ಆದರೆ ಬಸವಣ್ಣನವರ ಹೆಸರಿನಿಂದ ಅಸ್ತಿತ್ವಕ್ಕೆ ಬಂದ ಮಠಗಳ ಸ್ವಾಮಿಗಳನೇಕರು ಬಸವ ತತ್ತ್ವಕ್ಕೆ ವಿರುದ್ಧವಾದ ಪಂಚಾಂಗ ಹೇಳುವುದರ ಮೂಲಕ ಮತ್ತು ರಾಜಕಾರಣಿಗಳನ್ನು ಒಲೈಸುವುದರ ಮೂಲಕ ಬದುಕುತ್ತಿದ್ದೇವೆ ಎಂದು ಭಾವಿಸಿದ್ದಾರೆ. ರಾಜ್ಯದಲ್ಲಿ ಪಂಚಾಂಗವಿಲ್ಲದ ಮತ್ತು ರಾಜಕಾರಣಿಗಳನ್ನು ಒಲೈಸದ ಮಠಗಳು ಬೆರಳೆಣಿಕೆಯಷ್ಟು ಇರಬಹುದು.

ವಿಭೂತಿ ಮರೆತು ಕುಂಕುಮ ಹಚ್ಚಿಕೊಂಡು ಹೋಮಹವನಗಳಿಗೆ ಹಣ ಖರ್ಚು ಮಾಡುತ್ತ ಕಾಶ್ಮೀರದಿಂದ ಕನ್ಯಾಕುಮಾರಿವರೆಗಿನ ಗುಡಿಗುಂಡಾರಗಳಿಗೆ ಅಧಿಕಾರ ಉಳಿಸಿಕೊಳ್ಳುವ ಭ್ರಮೆಯಿಂದ ದಣಿವರಿಯದೆ ಓಡಾಡುತ್ತಿದ್ದ ಮಾಜಿ ಮುಖ್ಯಮಂತ್ರಿಯೊಬ್ಬರಿಗೆ ಯಾವ ಲಿಂಗಾಯತ ಮಠಾಧೀಶರೂ 'ಇದು ನಮ್ಮ ಬಸವಧರ್ಮದ ಸಂಸ್ಕಾರವಲ್ಲ' ಎಂದು ಹೇಳುವ ಧೈರ್ಯ ತೋರಲಿಲ್ಲ, ಏಕೆಂದರೆ ಬರಬಹುದಾದ ಕೋಟಿ ಕೋಟಿ ರೂಪಾಯಿಗೆ ಸಂಚಕಾರ ಬಂದರೆ ಅದನ್ನು ಭರಿಸುವವರಾರು ಎಂಬ ಲೆಕ್ಕಾಚಾರ ಅವರದು.

ಆದರೆ ಬಸವಣ್ಣನವರ ಆತ್ಮಗೌರವ, ಪ್ರಾಮಾಣಿಕತೆ ಮತ್ತು ಜನಸಮುದಾಯವನ್ನು ಪ್ರೀತಿಸುವ ಕ್ರಮ ಅನುಕರಣೀಯವಾಗಿದೆ. ಶರಣಸಂಕುಲದ ಶ್ರೀಸಾಮಾನ್ಯರ ಜೊತೆ ಬಸವಣ್ಣನವರು ಪ್ರಸಾದ ಸ್ವೀಕರಿಸುವ ವೇಳೆ ಮಡದಿ ಒಂದಿಷ್ಟು ಹೆಚ್ಚಿನ ಪ್ರಸಾದವನ್ನು ಉಣಬಡಿಸುತ್ತಾಳೆ. ಪ್ರಧಾನಿ ಪಟ್ಟವೆಂಬ 'ನಾಯಿತೇಜ'ದಿಂದಾಗಿ ತಮ್ಮ ಊಟದ ತಟ್ಟೆಯಲ್ಲಿ, ಪಂಕ್ತಿಯಲ್ಲಿ ಕುಳಿತ ಬೇರೆಯವರಿಗಿಂತ ಹೆಚ್ಚಿನ ಪ್ರಸಾದ ನೀಡಲಾಗಿದೆ ಎಂಬುದು ಅವರ ಗಮನಕ್ಕೆ ಬಂದ ತಕ್ಷಣ ಅವರು ಆ ಹೆಚ್ಚಿನದನ್ನು ತೆಗೆದಿಡುತ್ತಾರೆ. ಬದುಕಿನ ಎಲ್ಲ ಕ್ಷಣಗಳಲ್ಲಿ 'ಸರ್ವರಿಗೂ ಸಮಪಾಲು' ಎಂಬುದರ ಬಗ್ಗೆ ಅವರು ಎಷ್ಟೊಂದು ಎಚ್ಚರಿಕೆ ವಹಿಸಿದ್ದರು ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಒಂದು ವೇಳೆ ಹೀಗೆ ಎಚ್ಚರಿಕೆ ವಹಿಸದಿದ್ದರೆ ಕೂಡಲಸಂಗಮದೇವ ಎಂಬ ತಮ್ಮ ಸೈದ್ಧಾಂತಿಕ ದೇವರು ಮೆಚ್ಚುವುದಿಲ್ಲ ಎಂದು ದಾಕ್ಷಿಣ್ಯಪರರಲ್ಲದ ನ್ಯಾಯನಿಷ್ಠುರಿಯಾದ ಬಸವಣ್ಣನವರು ತೀಕ್ಷ್ಣವಾಗಿ ನುಡಿಯುತ್ತಾರೆ.

ಜನಸಮುದಾಯದ ಬಗೆಗಿನ ಅವರ ಪ್ರೇಮಭಾವ ಕೌಟುಂಬಿಕ ಪ್ರೇಮಭಾವವನ್ನೂ ಮೀರಿಸುವಂಥದ್ದಾಗಿತ್ತು, ಅಧಿಕಾರದ ಬಗೆಗಿನ ಮೋಹ ಅವರನ್ನೆಂದೂ ಕಾಡಲಿಲ್ಲ, ಆದ್ದರಿಂದಲೇ ಅವರಿಗೆ ಆ ಅಧಿಕಾರ ನಾಯಿತೇಜವಾಗಿ ಕಂಡಿತು. ಕಷ್ಟದಲ್ಲಿರುವವರು, ಅಸಹನೀಯ ಬದುಕನ್ನು ಬದುಕುತ್ತಿರುವವರು, ಅಸಹಾಯಕರು ಅವರಿಗೆ ತಾಯಿ, ತಂದೆಗಳಾಗಿದ್ದರು. ಅಂಥವರೆ ಅವರಿಗೆ 'ಒಡೆಯರು'ಗಳಾಗಿದ್ದರು. ಆ ಮೂಲಕ ಪ್ರಜಾಪ್ರಭುತ್ವದ ನಿಜವಾದ ಒಡೆಯರು ಯಾರು ಎಂಬುದನ್ನು ಅವರು ತಮ್ಮ ಕರ್ತವ್ಯಪಾಲನೆ ಮೂಲಕ ಸೂಚಿಸಿದ್ದಾರೆ. ದುರ್ಬಲರ ಸಬಲೀಕರಣವೇ ಅಧಿಕಾರದ ಗುರಿಯಾಗಿರಬೇಕು ಎಂಬುದರಲ್ಲಿ ಅವರು ಅಚಲ ವಿಶ್ವಾಸವನ್ನು ಹೊಂದಿದ್ದರು.

"ಗುಮ್ಮಡಿಯಂತಪ್ಪ ತಾಯಿ ನೋಡೆನಗೆ,
ಕಲಕೇತನಂತಪ್ಪ ತಂದೆ ನೋಡೆನಗೆ,
ಮೋಟನಂತಪ್ಪ ಗಂಡ ನೋಡೆನಗೆ,
ಮರಗಾಲಲಟ್ಟಟ್ಟಿ ಸದೆದ ನೋಡಯ್ಯಾ,
ಇಂದೆನ್ನ ಒಕ್ಕತನ ಹೋದಡೆ ಹೋಗಲಿ
ಮರಗಾಲ ಬಿಟ್ಟಡೆ, ಸಂಗಾ ನಿಮ್ಮಾಣೆ."

ಎಂದು ಬಸವಣ್ಣನವರು ಇನ್ನೊಂದು ವಚನದಲ್ಲಿ ತಿಳಿಸಿದ್ದಾರೆ.

ಮೆಕವೆಲ್ಲಿಯ (1469-1527) 'ಮಾಡರ್ನ್ ಪ್ರಿನ್ಸ್' ಜನರಲ್ಲಿ ಆತ್ಮವಿಶ್ವಾಸ ತುಂಬಿ, ಅವರನ್ನು ಸಂಘಟಿಸಿ, ಅವರ ಆಶಯಗಳನ್ನು ಸಾಮೂಹಿಕ ನಿರ್ಧಾರಗಳಾಗುವಲ್ಲಿ ಸಹಾಯ ಮಾಡುತ್ತಾನೆ. ಆತ ಕಾಯಕಜೀವಿಗಳ ಸಾಮೂಹಿಕ ಅಭಿವ್ಯಕ್ತಿಯಾಗಿದ್ದಾನೆ. ಹೊಸ ರಾಜ್ಯ ಮತ್ತು ಸಮಾಜ ನಿರ್ಮಾಣವಾಗಬೇಕಾದರೆ ವೈಜ್ಞಾನಿಕ ಮನೋಭಾವದಿಂದ ಕೂಡಿದ ವಾದಗಳೊಂದಿಗೆ ವ್ಯವಸ್ಥಿತವಾಗಿ ಬೆಳೆಯಬೇಕೆನ್ನುತ್ತಾನೆ. ಜನಸಮುದಾಯದ ಪ್ರಜ್ಞೆಯಾಗಿ, ಧ್ವನಿಯಾಗಿ, ಜನರ ಆಶೋತ್ತರಗಳ ಪ್ರತಿನಿಧಿಯಾಗಿ ನಿಲ್ಲುತ್ತಾನೆ. 15ನೇ ಶತಮಾನದಲ್ಲಿ ಮೆಕವೆಲ್ಲಿ ಕಲ್ಪಿಸಿದ ನವೀನ ರಾಜಕುಮಾರನಿಗಿಂತ 12ನೇ ಶತಮಾನದಲ್ಲಿ ನಮ್ಮ ಹಾಗೆ ಜನಿಸಿ ನಮಗೆ ಕಲಿಸಿದ ಬಸವಣ್ಣನವರು ಮುಂದುವರಿದವರಾಗಿದ್ದಾರೆ.

ಕಲ್ಯಾಣದ ಪ್ರಧಾನಿಯಾಗಿದ್ದ ಬಸವಣ್ಣನವರಿಗೆ ಜನಹಿತ ಮಹತ್ವದ್ದಾಗಿತ್ತು. ಜನರ ಹಿತಾಸಕ್ತಿಯ ಪ್ರಕಾರ ಬಿಜ್ಜಳ ರಾಜನ ಹಿತಾಸಕ್ತಿಗಳು ಬದಲಾಗಬೇಕು ಎಂಬುದು ಅವರ ನಿಲುವಾಗಿತ್ತು, (ಈ ಕಾರಣಕ್ಕಾಗಿಯೇ ಅವರು ಕೊನೆಗೆ ಪ್ರಧಾನಿ ಪದವಿಯನ್ನೂ ತ್ಯಾಗ ಮಾಡಿದರು.) ಅಂದಿನ ಸಮಾಜದಲ್ಲಿ ತುಳಿತಕ್ಕೊಳಗಾದ ಜನರ ಜೊತೆ ಅವರು ತನುಮನಧನಗಳೊಂದಿಗೆ ಗುರುತಿಸಿಕೊಂಡರು. ಜನಸಮುದಾಯವನ್ನು ತೀವ್ರವಾಗಿ ಪ್ರೀತಿಸಿದರು. ಅವರು ಜನಸಮುದಾಯಕ್ಕೆ ಸ್ಪಂದಿಸಿದಂತೆ ಜಗತ್ತಿನ ಯಾವ ಪ್ರಧಾನಿಯೂ ಸ್ಪಂದಿಸಿಲ್ಲ!

ಅಪಮಾನಕ್ಕೊಳಗಾದವರು, ಅಂಗವಿಕಲರು, ಅಸಹಾಯಕರು ತಮ್ಮ ತಂದೆ, ತಾಯಿ ಮತ್ತು ಒಡೆಯರು ಎಂದು ಈ ವಚನದಲ್ಲಿ ಬಸವಣ್ಣನವರು ಕರೆಯುತ್ತಾರೆ. ಅವರ ಜೊತೆ ಹೀಗೆ ರಕ್ತಸಂಬಂಧ ಬೆಳೆಸಿಕೊಳ್ಳುತ್ತಾರೆ. ಮೊಲೆ ಮೂಗು ಕೊಯ್ಸಿಕೊಂಡು ಅಪಮಾನಕ್ಕೆ ಒಳಗಾದ ಜೋಗಿತಿ ತಮ್ಮ ತಾಯಿ ಎಂದು ಹೇಳುತ್ತಾರೆ. ಅಂಥ ತಾಯಂದಿರ ಕಣ್ಣೀರನ್ನು ಒರೆಸಿ ಹೊಸ ಬದುಕು ಕೊಡುವುದು ಅವರ ಮಗನಾದ ತಮ್ಮ ಕರ್ತವ್ಯ ಎಂದು ಸ್ಪಷ್ಟಪಡಿಸುತ್ತಾರೆ. ಕಲ್ಲಿನಿಂದ ಎದೆಗೆ ಬಡಿದುಕೊಂಡು ಭಿಕ್ಷೆ ಕೇಳುವ ಕಲಕೇತಯ್ಯಗಳು ತಮ್ಮ ತಂದೆ ಎಂದು ಗೌರವಿಸುತ್ತಾರೆ. ಅಂಥವರನ್ನು ದುಃಖದಿಂದ ಮೇಲೆತ್ತುವುದು ಅವರ ಮಗನಾದ ತಮ್ಮ ಕರ್ತವ್ಯ ಎಂದು ನಿರ್ಧರಿಸುತ್ತಾರೆ. ಕೈ ಇಲ್ಲದ ಅಸಹಾಯಕರು ತಮ್ಮ ಒಡೆಯ ಎಂದು ಸಾರುತ್ತಾರೆ. ಅಂಥ ಒಡೆಯರಿಗೆ ತಾವು ಅಧೀನರಾಗಿರುವುದಾಗಿ ಘೋಷಿಸುತ್ತಾರೆ. ಕಾಲಿಲ್ಲದ ಒಡೆಯರು ಮರಗಾಲಿನಿಂದ ಒದೆಯುತ್ತಾರೆ ಎಂದು ಹೇಳುವ ಮೂಲಕ ಜನರ ಅಸಹಾಯಕ ಮನಸ್ಥಿತಿಯ ವಿರಾಟ್ ಸ್ವರೂಪದ ದರ್ಶನ ಮಾಡಿಸುತ್ತಾರೆ. 'ನನ್ನ ಪ್ರಧಾನಿ ಹುದ್ದೆಯ ನಂಟುತನ ಹೋದರೂ ಹೋಗಲಿ ದೇವರೇ ಮರಗಾಲ ಬಿಡುವುದಿಲ್ಲ ನಿಮ್ಮಾಣೆ' ಎಂದು ಪ್ರತಿಜ್ಞೆ ಮಾಡುತ್ತಾರೆ. ಅಂದರೆ ತಾವು ಎಂಥವೇ ಪ್ರಸಂಗದಲ್ಲಿ ಅಸಹಾಯಕರ ಪರವಾಗಿಯೇ ಇರುವುದಾಗಿ ತಿಳಿಸುತ್ತಾರೆ.

ಬಸವಣ್ಣನವರ ಹೆಸರಿನಿಂದ ಬದುಕುವ ಸ್ವಾಮಿಗಳು ಮತ್ತು ರಾಜಕಾರಣಿಗಳು ಬಸವಣ್ಣನವರಿಂದ ಪಾಠ ಕಲಿಯುವುದು ಯಾವಾಗ?

■ ರಂಜಾನ್ ದರ್ಗಾ


ಕ್ಯಾ ಗಲೀಜಾ ಯೇ ಬೊಮನಾ....

ಓಂದು ಊರಿನಲ್ಲಿ ಒಬ್ಬ ಮೌಲ್ವಿ ಇದ್ದನಂತೆ. ಅವನ ಶರೀರ, ಶಾರೀರ ಎರಡೂ ಘನವಾಗಿತ್ತಂತೆ. ಆದರೆ ಅವನಿಗೊಂದು ಚಟ ಇತ್ತಂತೆ. ಅದು ಮಾತನಾಡುವ ಚಟ ಅಂತೆ. ಅವರಿವರ ಮೇಲೆ ಗೂಬೆ ಕೂರಿಸುವುದು ಅಂದರೆ ಬಲೇ ಉಮೇದು ಬರ್‍ತಿತ್ತಂತೆ. ಇಂತಹ ಮಾತು ಅಂದರೆ ಕೇಳುವವರ ಕಿವೀನೂ ನಿಮಿರಿಕೊಳ್ಳುತ್ತೆ ಅಲ್ವಾ. ಅದ ಕೇಳಬೇಕು ಅಂತಲೇ ಜನ ಅವನ ಸುತ್ತ ಸದಾ ನೆರೆದಿರುತ್ತಿದ್ದರಂತೆ. ಅವನ್ನ ಮೆಚ್ಚಿ 'ಕ್ಯಾ ಬೋಲ್ತಾ ಜನಾಬ್' ಅಂತ ನಿಲಯ ಕಲಾವಿದರು ಅಂದಾಗ ಅವನಿಗೆ ಹುರುಪು ಅನ್ನೋದು ಕಂಡಾಬಟ್ಟೆ ಬರುತ್ತಿತ್ತಂತೆ.

ಇಂತಹ ಮೌಲ್ವಿ ಸಾಹೇಬರು ತಮ್ಮ ಮಾಮೂಲಿ ಷಟಾಲಂ ಜೊತೆ ಹರಟೆ ಹೊಡೆಯುತ್ತಿದ್ದಾಗ ಬ್ರಾಹ್ಮಣರ ವಿಷಯ ಬಂತಂತೆ. ಅವರಿಗೆ ಆಯಕಟ್ಟಿನ ಜಾಗದಲ್ಲಿ ಹೊಡೆಯಬೇಕು ಅಂತ ಮೌಲ್ವಿ ಸಾಹೇಬರು 'ಕ್ಯಾ ಗಲೀಜಾ ಯೇ ಬೊಮ್ಮನಾ.... ಆಜ್ ನಹಾತೊ ಕಲ್ ತಕ್ ನಹಾತೇಚ್‌ನೈ' ಅಂದರಂತೆ. ಯಾರೊಬ್ಬರು 'ಅವರೇನೋ ಸರಿ... ನೀವು ಹೇಗೆ ಮುಸಲ್ಮಾನರು' ಎಂದು ಕೇಳಿದನಂತೆ. ಅದಕ್ಕೆ ಸಾಹೇಬರು 'ಹಮ್ ಮುಸಲ್ಮಾನಾ... ಜುಮ್ಮಾ ಸೆ ಜುಮ್ಮಾ... ಜುಮ್ಮಾಸೆ ಜುಮ್ಮಾ ನಹಾತೆ ಹೈ' ಎಂದು ಹೆಮ್ಮೆಯಿಂದ ಎದೆಯುಬ್ಬಿಸಿ ಹೇಳಿದರಂತೆ. ಅವರ ಧ್ವನಿ ಮುಸಲ್ಮಾನರ ಶ್ರೇಷ್ಠತೆ, ಬ್ರಾಹ್ಮಣರ ಕನಿಷ್ಠತೆಯನ್ನು ಗರ್ಭೀಕರಿಸುತ್ತಿತ್ತಂತೆ. ಶ್ರೋತೃವೃಂದ ಆ ಧ್ವನಿಯಲ್ಲಿ ಅಡಗಿರುವ ನಿಗೂಢತೆಯನ್ನೇ ಮೆಲುಕು ಹಾಕುತ್ತಿದ್ದರಂತೆ.

ವಿಷಯ ಯಾವುದೇ ಇರಲಿ. ತಾವು ತಿಳಿದಿರುವುದೇ ಸತ್ಯ ಎಂದು ಭ್ರಮೆ ಮೂಡಿಸುವ ಶಕ್ತಿ ಹಲವರಿಗಿದೆ. ತಮ್ಮ ಮಾತಿನ ಮೋಡಿಯಿಂದ ಜನರನ್ನು ಮರುಳು ಮಾಡುವ ಮಾಂತ್ರಿಕತೆ ಅವರಿಗಿದೆ. ಇದು ತಲೆಗೆ ಹೋದರೆ ಮುಗಿಯಿತು. ತಮ್ಮ ಧ್ವನಿಗೆ ತಾವೇ ವ್ಯಾಮೋಹಿಯಾಗುತ್ತಾರೆ. ತಾವೇ ಮರುಳಾಗುತ್ತಾರೆ. ಅವಕಾಶ ದೊರೆತಾಗಲೆಲ್ಲ ಮಾತನಾಡುತ್ತಾರೆ. ಅವಕಾಶ ಸಿಗದಿದ್ದರೆ ಮಾಡಿಕೊಂಡು ಮಾತನಾಡುತ್ತಾರೆ. ತಾವು ಆಡುವ ಮಾತು ಸಂದರ್ಭೋಚಿತವೋ ಅಲ್ಲವೋ ಅನ್ನುವ ಪರಿವೇ ಅಂತಹವರಿಗೆ ಇರುವುದಿಲ್ಲ. ಅವರಿಗೆ ಮಾತೇ ಪ್ರಧಾನ. ಮಿಕ್ಕೆಲ್ಲವೂ ಗೌಣ.

ಪ್ರಧಾನಿ ಮೋದಿಯನ್ನು ಗಮನಿಸಿ. ಯಾವುದೇ ರಾಷ್ಟ್ರೀಯ ಸಮಾರಂಭ ಇರಲಿ. ಅಲ್ಲಿ ಮೋದಿ ಅಮೋಘ ಭಾಷಣ. ಇತರರಿಗೆ ಅವಕಾಶ ಇಲ್ಲ. ರಾಷ್ಟ್ರ ನಾಯಕರ ಹುಟ್ಟಿದ ದಿನ ಇರಲಿ ನೆನಪಿನ ದಿನ ಇರಲಿ. ಅಲ್ಲಿ



ಮೋದಿಯದ್ದೇ ಮಾತು. ಇದು ಸಾಲದು. ಅವರಿಗೆ ತೃಪ್ತಿ ಇಲ್ಲ. ಅದಕ್ಕಾಗಿ ತಿಂಗಳಿಗೊಮ್ಮೆ ಆಕಾಶವಾಣಿಯಲ್ಲಿ 'ಮನ್ ಕಿ ಬಾತ್'! ಇದರಲ್ಲಿ ಹೊಸ ಹೊಳಹು ಇದೆಯೇ ಅಂದರೆ ಅದೇ ನಾಸ್ತಿ. ಆದರೂ ಅವರು ಮಾತನಾಡಲೇಬೇಕು. ಮೋದಿ ಕಿವಿಗೆ ಇಂಪು ಎರೆಯಲೇಬೇಕು. ಇದು 'ಮನ್ ಕಿ ಬಾತ್' ಅಲ್ಲ, 'ಖಾನ್ ಕಿ ಬಾತ್'! ಮೋದಿಯ ಕಿವಿಗೆ ಇಂಪಾದ ಬಾತ್!

ಇತ್ತೀಚೆಗೆ ಮೋದಿ ಭಾಷಣ. ಯಾರಿಗೆ? ಅನಿವಾಸಿ ಭಾರತೀಯರಿಗೆ. ಮಾತಿನ ಸಾರಾಂಶ. ಹಿಂದಿನವರು 'ಸ್ಕ್ಯಾಮ್ ಭಾರತ್' ಮಾಡಿದ್ದರು. ನಾನು 'ಕ್ಲೀನ್ ಭಾರತ್' ಮಾಡುತ್ತೇನೆ!

ಇದನ್ನು ನೋಡಿದಾಗ 'ಕ್ಯಾ ಗಲೀಜಾ ಯೇ ಬೊಮ್ಮನಾ.... ನೆನಪಾಗುತ್ತೆ ಅಲ್ವಾ....

ದೇವರ ದರ್ಬಾರು

ಅವರು ಧರ್ಮಾತ್ಮರು. ದೇವರುದಿಂಡಿರು ಅಂದರೆ ಭಯ, ಭಕ್ತಿ, ದೇವಾಲಯ ನಿರ್ಮಿಸಿ ಪುನೀತರಾಗಲು ಬಯಸಿದರು. ಅದಕ್ಕೆ ನಿವೇಶನ ಬೇಕಿತ್ತು, ಅದೇ ಇರಲಿಲ್ಲ. ದೇವರೇ ದಾರಿ ತೋರಿಸಿದ. ಕೆರೆಯ-ಅಂಗಳ ವ್ಯರ್ಥವಾಗಿ ಬಿದ್ದಿತ್ತು, ಚಿನ್ನದಂತಹ ಭೂಮಿ ವೇಸ್ಟಾಗಿದೆಯಲ್ಲ ಅಂತ ಕೊರಗಿದರು. ಅಲ್ಲೇ ಒಂದು ಭಾಗ ನೋಡಿದರು. ದೇವಾಲಯ ನಿರ್ಮಾಣಕ್ಕೆ ಸೂಕ್ತ ಸ್ಥಳ ಎಂದು ನಿರ್ಧರಿಸಿದರು. ದೈವಭಕ್ತರು ನಾ ಮುಂದು ತಾ ಮುಂದು ಎಂದು ಧನ ಸಹಾಯ ಮಾಡಲು ಮುಂದಾದರು. ದೇವಾಲಯ ನಿರ್ಮಾಣ ಆಯಿತು.

ಬೆಂಗಳೂರಿನಲ್ಲಿ ಭೂಮಿಗೆ ಚಿನ್ನದ ಬೆಲೆ. ತಲೆ ಮೇಲೆ ಸೂರು ಕನಸು. ಮನೆಯಿಲ್ಲದವರ ಆರ್ತನಾದ ಅವರಿಗೆ ಕೇಳಿಸಿತು. ಕೆರೆಯ ಅಂಗಳದ ಉಳಿದ ಭಾಗದಲ್ಲಿ ನಿವೇಶನ ಮಾಡಿ ಹಂಚಿದರು. ನೋಂದಣಿ ಮಾಡಿಸಿಕೊಟ್ಟರು. ನಿವೇಶನಗಳ ಬೆಲೆ ಕೊಟ್ಟಿದ್ದರು ಎಂಬುದು ಸತ್ಯ. ಅದೆಲ್ಲ ಗೌಣ ಬಿಡಿ. ಕರೆಂಟು, ನೀರು ಎಲ್ಲವೂ ಬಂತು. ಮನೆಗಳು ಎದ್ದವು. ಕಾಂಪ್ಲೆಕ್ಸ್‌ಗಳು ಕಾಣಿಸಿದವು. ಎಲ್ಲ ಧರ್ಮಾತ್ಮರ ಕೃಪೆ.

ಕೆಲವು ವರ್ಷಗಳು ಕಳೆದವು.

ಧರ್ಮಾತ್ಮ ಬರಲಿಲ್ಲ, ಜೆಸಿಬಿ ಬಂದವು.

ನಿವೇಶನಗಳೇ ಅನಧಿಕೃತವಂತೆ. ಅಲ್ಲಿರುವ ಕಟ್ಟಡಗಳನ್ನು ಕೆಡುವಲು ಅವು ಬಂದಿವೆಯಂತೆ.

ನೂರಾರು ಮನೆಗಳು, ಹತ್ತಾರು ಕಾಂಪ್ಲೆಕ್ಸ್‌ಗಳು ಧರೆಗುರುಳಿದವು.

ದೇವಸ್ಥಾನ ಹಾಗೆಯೇ ಉಳಿಯಿತು.

ಅದರ ತಂಟೆಗೆ ಯಾರೂ ಹೋಗಲಿಲ್ಲ.

ಅನಧಿಕೃತ ಭೂಮಿಯಲ್ಲಿ ದೇವರ ದರ್ಬಾರು!

ದೇವರ ಪವಾಡ ಅಂದರೆ ಇದು!

ಜನರಿಗಾಗಿ ದೇವರು. ದೇವರಿಗಾಗಿ ಜನರಿಲ್ಲ. ಅಂತಹದ್ದರಲ್ಲಿ ಜನರಿಗಿಲ್ಲದ ವಿಶೇಷ ಸೌಲಭ್ಯ ದೇವರಿಗೇಕೆ?

ಬೇಕು ಎಂದು ಅವನು ಕೇಳಲಿಲ್ಲ.

ಅಧಿಕಾರಿಗಳೇ ವಿಶೇಷ ಸವಲತ್ತು ನೀಡಿದ್ದರು.

ಯಾಕೆ ನೀಡಿದರು?

ಭಯ ಸ್ವಾಮಿ ಭಯ!

ದೇವರು ಕೆಡುಕು ಮಾಡಾನು ಎಂಬ ಭಯ! ಮಿಗಿಲಾಗಿ ದೈವಭೀರು ಹಿಂದೂ ಮತದಾರರ ಭಯ!

ದೇವಸ್ಥಾನ ಏನು ಮಾಡುತ್ತಾರೆ?

ಮುಜರಾಯಿ ಇಲಾಖೆಗೆ ವಹಿಸುತ್ತಾರಂತೆ!

ಮೂರುನಾಲ್ಕು ಸಂಸಾರಗಳಿಗೆ ಜೀವನ ಭದ್ರವಾಯಿತು!

ಅಂದಹಾಗೆ ಧರ್ಮಾತ್ಮರೇನಾದರು?

ಹುಡುಕುತ್ತಿದ್ದಾರಂತೆ!

ಭಗವಂತನ ಪಾದವನ್ನೇನಾದರೂ ಸೇರಿದ್ದರೆ?

ಅಲ್ಲಿಯೇ ಹೋಗಿ ಹುಡುಕಬಹುದು!

ಹಿಂದೂ ಡ್ರೈವರ್ ಬೇಕು!

ಖುಷ್ವಂತ್ ಸಿಂಗ್ ಅವರ ಪ್ರಖ್ಯಾತ ಕಾದಂಬರಿ 'ಟ್ರೈನ್ ಟು ಪಾಕಿಸ್ತಾನ್'ನಲ್ಲಿ ಒಂದು ಸನ್ನಿವೇಶ ಬರುತ್ತದೆ. ಭಾರತ ವಿಭಜನೆ ಸಂದರ್ಭ. ಹಿಂದೂ ಮುಸ್ಲಿಂ ಗಲಭೆಗಳು ದೇಶಾದ್ಯಂತ ನಡೆಯುತ್ತಿರುತ್ತದೆ. ಕೋಮುದಳ್ಳುರಿ ಯಾವ ಗಳಿಗೆಯಲ್ಲಾದರೂ, ಯಾವ ಕ್ಷುಲ್ಲಕ ಕಾರಣಕ್ಕಾದರೂ ಭುಗಿಲೇಳಬಹುದಾಗಿತ್ತು. ರೈಲ್ವೆ ನಿಲ್ದಾಣಗಳಲ್ಲಿ ಕುಡಿಯುವ ನೀರಿನ ವಿಷಯಕ್ಕೂ ಉಲ್ಬಣ ಪರಿಸ್ಥಿತಿ ನಿರ್ಮಾಣವಾಗಬಹುದಿತ್ತು. ಇದನ್ನು ತಪ್ಪಿಸಲು ಎರಡು ಧರ್ಮದವರಿಗೂ ಪ್ರತ್ಯೇಕ ನೀರಿನ ವ್ಯವಸ್ಥೆ ಮಾಡಲಾಗಿತ್ತು. ಅವನ್ನು ಗುರುತಿಸಲು 'ಹಿಂದೂ ನೀರು', 'ಮುಸಲ್ಮಾನ ನೀರು' ಎಂದು ನೀರಿನ ತೊಟ್ಟಿಯ ಮೇಲೆ ಬರೆಯಲಾಗಿತ್ತು!

ಈಗ ಪರಿಸ್ಥಿತಿ ಭಿನ್ನ ಆಗಿದೆಯೆ?

ಓಲಾ ಕ್ಯಾಬ್ ಸರ್ವೀಸ್‌ಗೆ ಒಂದು ಫೋನ್ ಕರೆ ಬಂತು. ಕ್ಯಾಬ್ ಕಳುಹಿಸಲು ಬಂದಿದ್ದ ಕರೆ ಅದು. ಕರೆಯಲ್ಲಿದ್ದ ಒಂದು ನಿಬಂಧನೆ ಎಂದರೆ-ಡ್ರೈವರ್ ಹಿಂದೂ ಆಗಿರಬೇಕು!

ಧರ್ಮಕ್ಕೂ ಕ್ಯಾಬ್ ಡ್ರೈವರ್‌ಗೂ ಏನು ಸಂಬಂಧ? ಅವರೇನು ಡ್ರೈವರ್ ರಕ್ತ ಸಂಬಂಧ ಬೆಳೆಸಲು ಕೇಳುತ್ತಿದ್ದಾರಾ?

'ಇದೇನ್ರಿ ಈ ವಿಚಿತ್ರ ಷರತ್ತು ನಿಮ್ದು' ಅಂತ ಕೇಳಿದ್ದಕ್ಕೆ ಬಂದ ಉತ್ತರ- 'ಡ್ರೈವರ್ ಆಯ್ಕೆ ಗ್ರಾಹಕನ ಹಕ್ಕು!'

ಓಲಾ ಸರ್ವೀಸ್‌ನವರು ಇದಕ್ಕೆ ಸಮ್ಮತಿಸಲಿಲ್ಲ ಸರಿ. ಹೀಗೆ ಮುಂದುವರೆದರೆ ಕಾರು ತಯಾರು ಮಾಡಿದೋರೂ ಹಿಂದೂಗಳಾಗಿರಬೇಕು, ಪೆಟ್ರೋಲ್ 'ಹಿಂದೂ ಪೆಟ್ರೋಲ್ ಬಂಕ್'ನಲ್ಲೇ ಹಾಕಿಸಬೇಕು.... ಇದಕ್ಕೆ ಕೊನೆ ಎಂಬುದು ಇದೆಯಾ....

ಭಾಜಪ ದಲಿತ ಪ್ರೀತಿ

ಅಂಬೇಡ್ಕರ್ ಒಂದು ನೂರ ಇಪ್ಪತ್ತು ಐದನೆ ವರ್ಷಕ್ಕೆ ಕಾಲಿಟ್ಟರು.

ಈ ವರ್ಷವನ್ನು ಅದ್ದೂರಿಯಾಗಿ ಆಚರಿಸಲು ಆರೆಸ್ಸೆಸ್, ಭಾಜಪ ತಯಾರಿ ನಡೆಸುತ್ತಿದೆಯಂತೆ.

ಅಂಬೇಡ್ಕರ್ ಅವರ ಒಂದು ನೂರ ಇಪ್ಪತ್ತೈದನೆ ಜನ್ಮದಿನದಂದು ಪ್ರಧಾನಿ ಎಲ್ಲಿದ್ದರು?

ವಿದೇಶದಲ್ಲಿ!

■ ಎಚ್ಚೆಲ್ಕೆ

ಮಾನವಹಕ್ಕು ಹೋರಾಟಗಾರರೆಲ್ಲ ಪಂಚತಾರಾ ಹೋರಾಟಗಾರರಂತೆ!

ಪ್ರಧಾನಿ ಮೋದಿಗೆ ಮೊದಲಿನಿಂದಲೂ ಅನ್ಯಾಯಕ್ಕೊಳಗಾದ ಅಲ್ಪಸಂಖ್ಯಾತರು, ಆದಿವಾಸಿಗಳು, ದಲಿತರು ಮುಂತಾದ ದಮನಿತರ ಪರವಾಗಿ ಹೋರಾಟ ಮಾಡುತ್ತಿರುವ ವ್ಯಕ್ತಿಗಳು ಹಾಗೂ ಸಂಘಟನೆಗಳನ್ನು ಕಂಡರಾಗದು. ಕಳ್ಳನ ಮನಸ್ಸು ಹುಳ್ಳಹುಳ್ಳಗೆ ಅಂತಾರಲ್ಲ, ಹಾಗೆ. ಹೀಗೆ ಹೊಟ್ಟೆಯೊಳಗೆ ತೊಳಸುತ್ತಲೆ ಇದ್ದ ಅಸಮಾಧಾನವನ್ನೆಲ್ಲ ಹೊರಹಾಕುವ ಅವಕಾಶವೊಂದು ಇತ್ತೀಚೆಗೆ ಸಿಕ್ಕಿಯೇಬಿಟ್ಟಿದೆ! ಮೊನ್ನೆ ಏಪ್ರಿಲ್ 5ರ ಭಾನುವಾರ ನವದೆಹಲಿಯಲ್ಲಿ ಮುಖ್ಯಮಂತ್ರಿಗಳು ಮತ್ತು ಸರ್ವೋಚ್ಚ ಹಾಗೂ ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರ ಸಮ್ಮೇಳನವನ್ನು ಉದ್ಘಾಟಿಸುವ ವೇಳೆ ಆತನ ಬಾಯಿಯಿಂದ ಪಂಚತಾರಾ ಹೋರಾಟಗಾರರು ಬಂದೂಕು ಹಿಡಿದವರಂತೆ ನ್ಯಾಯಾಂಗವನ್ನು ಬೆದರಿಸಿ ತಮಗೆ ಬೇಕಾದ ತೀರ್ಪು ಬರೆಸಿಕೊಳ್ಳುತ್ತಿದ್ದಾರೆ ಎಂಬರ್ಥದ ಮಾತುಗಳು ಹೊರಬಿದ್ದಿವೆ.

ಅಂದು ಮೋದಿ "ಪಂಚತಾರಾ ಹೋರಾಟಗಾರರಿಗೆ ಜಾಮೀನು ನೀಡುವ ವಿಷಯ" ಪ್ರಸ್ತಾಪಿಸಿರುವುದು ತೀಸ್ತಾ ಸೆಟಲ್ವಾಡ್ ಮತ್ತು ಜಾವೆದ್ ಆನಂದ್ ದಂಪತಿಯನ್ನು ಉದ್ದೇಶಿಸಿ ಎಂಬುದರಲ್ಲಿ ಅನುಮಾನವಿಲ್ಲ. ಮುಂದುವರಿದು ಆತ "ಪಂಚತಾರಾ ಹೋರಾಟಗಾರರು ಭೀತಿ ಮೂಡಿಸುವ ಮೂಲಕ ನ್ಯಾಯಾಂಗವನ್ನು ನಿರ್ದಿಷ್ಟ ಮಾರ್ಗದಲ್ಲಿ ಓಡಿಸುತ್ತಿದ್ದಾರೆ......... 'ನ್ಯಾಯಾಧೀಶರು' ಪಂಚತಾರಾ ಹೋರಾಟಗಾರರಿಂದ ಪಡೆದ ಗ್ರಹಿಕೆಯ ಆಧಾರದಲ್ಲಿ ತೀರ್ಪು ನೀಡುವ ಬಗ್ಗೆ ಎಚ್ಚರಿಕೆ ವಹಿಸಬೇಕು...... ನ್ಯಾಯಾಂಗ ಇಂದು ಹತ್ತು ವರ್ಷಗಳ ಹಿಂದೆ ಇದ್ದಷ್ಟು ನಿರ್ಭೀತವಾಗಿಲ್ಲ..... ನ್ಯಾಯಾಂಗ ನಿರ್ದಿಷ್ಟ ದಿಕ್ಕಿನಲ್ಲಿ ಚಲಿಸುವಂತೆ ಮಾಡುತ್ತಿರುವವರು ಹೋರಾಟಗಾರರಲ್ಲವೇ?...... ನ್ಯಾಯಾಧೀಶರು ಕಾನೂನು ಮತ್ತು ಸಂವಿಧಾನಗಳಿಗೆ ಅನುಗುಣವಾಗಿ ನ್ಯಾಯದಾನ ಮಾಡುವ ವೇಳೆ ಇದಕ್ಕೆ ಹೋರಾಟಗಾರರು ಹೇಗೆ ಪ್ರತಿಕ್ರಿಯಿಸಬಹುದು ಎಂಬ ಭಯದೊಂದಿಗೆ ಮಾಡುತ್ತಾರೆ" ಎಂದೆಲ್ಲ ಬಡಬಡಿಸಿದ್ದಾನೆ.

ಹೀಗೆ ಭಯದ ನೆರಳಲ್ಲಿ ಪಕ್ಷಪಾತೀಯವಾಗಿ ಕೆಲಸ ಮಾಡುವ ಆರೋಪ ಹೊರಿಸಿ ನ್ಯಾಯಾಂಗಕ್ಕೆ ಅವಮಾನ ಮಾಡುವುದರೊಂದಿಗೆ ನ್ಯಾಯಾಧೀಶರಿಗೇ ಬುದ್ಧಿ ಹೇಳುವ ಈ ಉದ್ಧಟತನ ಇದೆಯಲ್ಲ, ಇದು ಅಲ್ಪತನ, ಧೂರ್ತತನದ ಪ್ರತೀಕವಲ್ಲದೆ ಬೇರೇನೂ ಅಲ್ಲ.



ಲಕ್ಷಗಟ್ಟಲೆ ಬೆಲೆಬಾಳುವ ಸೂಟು ತೊಟ್ಟು ಪಂಚತಾರಾ ಕಾರ್ಪೋರೇಟು ಧಣಿಗಳ ತಾಳಕ್ಕೆ ತಕ್ಕಂತೆ ಕುಣಿಯುವ ವ್ಯಕ್ತಿಯೊಬ್ಬ ಕೋಮುವಾದ, ಅನ್ಯಾಯಗಳಿಗೆ ತುತ್ತಾದ ದಮನಿತರ ಹಕ್ಕುಗಳಿಗಾಗಿ ನ್ಯಾಯಾಂಗ ಹೋರಾಟ ಮಾಡುತ್ತಿರುವವವರನ್ನು ಪಂಚತಾರಾ ಆಕ್ಟಿವಿಸ್ಟುಗಳೆಂದು ಹೀಯಾಳಿಸುತ್ತಿರುವುದು ನಿಜಕ್ಕೂ ತಮಾಷೆಯಾಗಿದೆ.


ಜ್ಞಾನದ ವೃದ್ಧಿಯಿಂದ ಸಂಸ್ಕಾರ, ವಿನಯ, ವಿನಮ್ರತೆಯ ಗುಣಗಳು ತಾನೇತಾನಾಗಿ ಮೈಗೂಡುತ್ತವೆ; ಆದರೆ ಅಲ್ಪಜ್ಞಾನವು ಅಪಾಯಕಾರಿ, ಅದು ಸಂಸ್ಕೃತಿಹೀನತೆ, ಅಹಂಭಾವ, ಉದ್ಧಟತನ, ದುರಹಂಕಾರಗಳನ್ನು ಪೋಷಿಸುತ್ತದೆ ಎಂದು ನಮ್ಮ ಹಿರಿಯರು ಹೇಳಿದ್ದಾರೆ.

ಹೀಗಿರುವಾಗ ಹೆಚ್ಚೆಂದರೆ ಹೈಸ್ಕೂಲು ಮೆಟ್ಟಲು ಹತ್ತಿರಬಹುದಾದ ಓರ್ವ ಚಾಣಾಕ್ಷ ರಾಜಕಾರಣಿಯ ಬೌದ್ಧಿಕ ಮಟ್ಟವನ್ನು ಕಾನೂನುಶಾಸ್ತ್ರ ತರ್ಕಶಾಸ್ತ್ರಗಳಲ್ಲಿ ಅಗಾಧ ಪಾಂಡಿತ್ಯ ಹೊಂದಿರುವಂತಹ ನ್ಯಾಯಾಧೀಶರೊಂದಿಗೆ ತುಲನೆ ಮಾಡುವ ಪ್ರಶ್ನೆಯೆ ಉದ್ಭವಿಸುವುದಿಲ್ಲ.

ಮೋದಿಯ ಗುರಿ ನಿರ್ದಿಷ್ಟವಾಗಿ ನೆಟ್ಟಿರುವುದು ಗುಜರಾತ್ ನರಮೇಧ ಮತ್ತು ಕಾರ್ಪೋರೇಟುಗಳ ಅನ್ಯಾಯಗಳ ವಿರುದ್ಧ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಸಲ್ಲಿಸಿರುವವರ ಮೇಲೆ ಎಂಬುದು ಸ್ಪಷ್ಟವಿದೆ. ಸುಮಾರು ಮೂರು ದಶಕಗಳ ಹಿಂದೆ ಪ್ರಾರಂಭವಾಗಿರುವ ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಮಾರ್ಗ ಇಂದು ಪರಿಸರ ಹಾನಿ, ಸಾಮಾಜಿಕ ಅನ್ಯಾಯ, ಭ್ರಷ್ಟಾಚಾರಗಳನ್ನು ತಹಬಂದಿಗೆ ತರುವಲ್ಲಿ ಬಹಳಷ್ಟು ಪ್ರಯೋಜನಕಾರಿಯಾಗಿ ಪರಿಣಮಿಸಿರುವುದರಲ್ಲಿ ಎರಡು ಮಾತಿಲ್ಲ. ಶಕ್ತರು ಅಶಕ್ತರ ನೆರವಿಗೆ ಬರಲು ಸಾಧ್ಯವಾಗಿರುವುದೆ ಅದರಿಂದಾಗಿ. ಅಂತೆಯೆ ಹಲವಾರು ಸರಕಾರೇತರ ಸಂಘಸಂಸ್ಥೆಗಳು ಮತ್ತು ಹೋರಾಟಗಾರರು ಧ್ವನಿಯಿಲ್ಲದ ದಮನಿತ ಸಮುದಾಯಗಳ ಧ್ವನಿಯಾಗಿ ಅನೇಕ ಸಾರ್ವಜನಿಕ ಹಿತಾಸಕ್ತಿ ದಾವೆಗಳನ್ನು ಹೂಡಿದ್ದಾರೆ. ಇವುಗಳ ಪೈಕಿ ಹೆಚ್ಚಿನ ದಾವೆಗಳನ್ನು ಕಾರ್ಪೋರೇಟು ಸಂಸ್ಥೆಗಳ ಮೇಲೆ ಹೂಡಲಾಗಿದೆ.


ನ್ಯಾ| ದತ್ತುರವರು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಇಂಥಾ ಅನೇಕ ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಇರುವುದನ್ನು ಗಮನಿಸಿದ್ದಾರೆ. ತರುವಾಯ ಈ ಪ್ರಕರಣಗಳ ವಿಚಾರಣೆಗೆಂದೇ ಕಳೆದ ಡಿಸೆಂಬರ್ 12ರಂದು ಪ್ರತ್ಯೇಕ ಸಾಮಾಜಿಕ ನ್ಯಾಯ ಪೀಠವೊಂದನ್ನು ಸ್ಥಾಪಿಸಿದ್ದಾರೆ. ಇವೆಲ್ಲ ಬೆಳವಣಿಗೆಗಳು ಕಾರ್ಪೋರೇಟು ಕುಳಗಳ ಕಣ್ಮಣಿ ಮೋದಿಯ ನಿದ್ದೆಗೆಡಿಸಿರುವುದರಲ್ಲಿ ಸಂಶಯವಿಲ್ಲ. ಸಿಟ್ಟಿನಿಂದ ಕುದ್ದುಹೋಗಿರುವ ಆತ ಈಗಾಗಲೆ ಗ್ರೀನ್‌ಪೀಸ್‌ನಂತಹ ಕೆಲವು ನಿರ್ದಿಷ್ಟ ಎನ್‌ಜಿಓಗಳಿಗೆ ಕಿರುಕುಳ ನೀಡಲಾರಂಭಿಸಿದ್ದಾನೆ. ಈಗಾತ ಮತ್ತೊಂದು ಹೆಜ್ಜೆ ಮುಂದೆಹೋಗಿ ನ್ಯಾಯಾಂಗವನ್ನು ತರಾಟೆಗೆ ತೆಗೆದುಕೊಂಡಿದ್ದಾನೆ.

ಸರ್ವಾಧಿಕಾರಕ್ಕಾಗಿ ಹಂಬಲಿಸುವ ಯಾವ ಸರ್ಕಾರಕ್ಕೂ



ಸ್ವತಂತ್ರ ನ್ಯಾಯಾಂಗ ಬೇಕಾಗಿಲ್ಲ, ಅದಕ್ಕೆ ಬೇಕಿರುವುದು ವಿಧೇಯ ನ್ಯಾಯಾಂಗ. ಇದೊಂದು ಸಾರ್ವಕಾಲಿಕ ಸತ್ಯ. ಈ ಹಿನ್ನೆಲೆಯಲ್ಲಿ ನೋಡಿದಾಗ ನ್ಯಾಯಾಧೀಶರ ನೇಮಕಾತಿಯಲ್ಲಿ ಸರ್ಕಾರದ ಹಸ್ತಕ್ಷೇಪಕ್ಕೆ ಅವಕಾಶ ನೀಡುವ ನ್ಯಾಯಾಂಗ ಆಯೋಗ ವ್ಯವಸ್ಥೆಯನ್ನು ತರಾತುರಿಯಲ್ಲಿ ಜಾರಿಗೆ ತಂದಿರುವ ಉದ್ದೇಶ ಸ್ಫಟಿಕದಷ್ಟು ನಿಚ್ಚಳವಾಗಿ ಗೋಚರಿಸುತ್ತದೆ.

ಇಂಥಾ ಸನ್ನಿವೇಶದಲ್ಲಿ ಕೆಲವು ತಿಂಗಳ ಕೆಳಗೆ "....'ಮೋದಿ' ಓರ್ವ ಒಳ್ಳೆಯ ನಾಯಕ, ಒಳ್ಳೆಯ ಮನುಷ್ಯ ಮುಂದಾಲೋಚನೆಯುಳ್ಳವರಾದ ಆತ ಉತ್ತಮ ಆಡಳಿತ ನೀಡಲು ಪ್ರಯತ್ನಿಸಲಿದ್ದಾರೆ" ಎಂದು ಹೇಳಿದವರು ತಮ್ಮ ನಿಲುವನ್ನು ಪುನರ್ವಿಮರ್ಶೆಗೊಳಪಡಿಸಿ ಮೋದಿ ಸರ್ಕಾರದ ಅಪ್ರಜಾತಾಂತ್ರಿಕ ನಡೆಗಳನ್ನು ವಿಫಲಗೊಳಿಸುವರೆಂಬ ದೃಢ ವಿಶ್ವಾಸ ಜನರದಾಗಿದೆ. ■



ಯೋಗೇಶ್ ಮಾಸ್ಟರ್

ಪುರಾಣದ ಹೂರಣ


ಶಂಕರನ ರಗಳೆಗಳು

ಶೂನ್ಯ ನಗರದಲ್ಲಿ ಮೂವರು ರಾಜಕುಮಾರರು. ಅವರು ಖುಷಿಯಾಗಿ ಹೊರಹೊರಟು ಆಕಾಶದಲ್ಲಿ ಫಲಪುಷ್ಪಭರಿತವಾದ ಮಹಾವೃಕ್ಷಗಳ ಅರಣ್ಯದಲ್ಲಿ ವಿಹರಿಸಿದ ನಂತರ ಮೂರು ನದಿಗಳ ತೀರಗಳನ್ನು ತಲುಪಿದರು. ಒಂದು ನದಿಯಲ್ಲಿ ನೀರು ಪೂರ್ಣ ಇಂಗಿಹೋಗಿದೆ. ಮಿಕ್ಕೆರಡು ನದಿಗಳಲ್ಲಿ ಒಂದು ನೀರಿನ ಹನಿಯೂ ಇಲ್ಲ. ಆ ನದಿಗಳಲ್ಲಿ ಬೊಗಸೆಗಟ್ಟಳೆ ನೀರು ಕುಡಿದು ಈಜಾಡಿದ ನಂತರ ಭವಿಷ್ಯನಗರದಲ್ಲಿ ಪ್ರವೇಶಿಸಿ ಮೂವರೂ ಮೂರು ಮನೆಗಳನ್ನು ಮಾಡಿಕೊಂಡರು. ಅವುಗಳಲ್ಲಿ ಒಂದಕ್ಕೆ ಗೋಡೆಗಳಿಲ್ಲ, ಎರಡನೆಯದಕ್ಕೆ ಸ್ತಂಭಗಳಿಲ್ಲ, ಮೂರನೆಯದು ಅಸಲಿಗೆ ನಿರ್ಮಾಣವೇ ಆಗಿಲ್ಲ. ಮೂವರು ರಾಜಕುಮಾರರು ಗೋಡೆಗಳಿಲ್ಲದ ಮನೆಯನ್ನು ಪ್ರವೇಶಿಸಿ ಮೂರು ಪಾತ್ರೆಗಳನ್ನು ನೋಡಿದರು. ಅದರಲ್ಲಿ ಎರಡು ಚೂರುಚೂರಾದವು. ಮೂರನೆಯದು ಹಿಡಿ ಕಡಿಮೆಯಾಗಿ, ಮೂರು ಹಿಡಿ ಅಕ್ಕಿಯೊಂದಿಗೆ ಅನ್ನವನ್ನು ಮಾಡಲು, ಬಾಯಿಲ್ಲದ ಬ್ರಾಹ್ಮಣರು ಬಂದು ಹೊಟ್ಟೆ ತುಂಬಾ ಉಂಡರು.


ಯೋಗವಾಸಿಷ್ಠದಲ್ಲಿನ ಬಾಲಕೋಪಾಖ್ಯಾನ ಇದು. ಇದರ ವೇದಾಂತಾರ್ಥದಲ್ಲಿ ಪ್ರವೇಶಿಸದೇ ನಮ್ಮ ಮಾಮೂಲು ಲೋಕಾರೂಢಿಯಂತೆ ಅರ್ಥೈಸಿಕೊಂಡರೆ ಇದಕ್ಕೆ ತಲೆ ಬಾಲ ಇಲ್ಲ ಎನಿಸುವುದು ಸಹಜ. ಹುಟ್ಟದವನು ಎಂದರೇನು? ಆಕಾಶದಲ್ಲಿನ ಅರಣ್ಯದಲ್ಲಿ ವಿಹರಿಸಿ, ನೀರಿಲ್ಲದ ನದಿಯಲ್ಲಿ ಈಜಾಡುವುದೆಂದರೇನು? ಗೋಡೆಗಳಿಲ್ಲದ ಮನೆಯನ್ನು ಪ್ರವೇಶಿಸಿ ಪುಡಿಯಾಗಿರುವ ಪಾತ್ರೆಯಲ್ಲಿ ಅನ್ನವನ್ನು ಮಾಡಿ, ಬಾಯಿಲ್ಲದವರಿಗೆ ತಿನ್ನಿಸುವುದೆಂದರೇನು? ನಾನ್ಸೆನ್ಸ್!! ಎಂದು ಹೊಡೆದು ಹಾಕಬೇಕೆನಿಸುತ್ತದೆ. ನಾವು ಓದಿಕೊಂಡಿರುವ ಭಾರತ ದೇಶದ ಚರಿತ್ರೆಯೂ ವಿಶ್ವಸನೀಯತೆಯಲ್ಲಿ ಈ ಕಥೆಗೆ ಒಡಹುಟ್ಟಿದ್ದೇ!

ನಾವು ಹೇಳಿಕೊಳ್ಳುತ್ತಿರುವ ಚರಿತ್ರೆಯಲ್ಲಿಯೂ ಹುಟ್ಟದವನೂ, ತಾಯಿಯ ಹೊಟ್ಟೆಯಲ್ಲಿ ಇರದವನೂ ದೇಶ ಸಂಚಾರ ಮಾಡಬಲ್ಲ, ಭೂಮಿಗೆ ಬಾರದೆಯೇ ದೂರ ಪ್ರದೇಶದಲ್ಲಿ ನೆಲಸಿ ಮತ ಪ್ರಚಾರ ಮಾಡಬಲ್ಲ, ತಾನು ಹುಟ್ಟಲಿಕ್ಕೆ ಸಾವಿರ ವರ್ಷಗಳ ಮುನ್ನವೇ ತನ್ನ ಹೆಸರಿನಲ್ಲಿ ಗುಡಿ ಕಟ್ಟಿಸಿಕೊಂಡು ಪ್ರತಿ ದಿನವೂ ಪೂಜೆಗಳನ್ನು ಮಾಡಿಸಿಕೊಳ್ಳಲೂ ಬಲ್ಲ!

ಛೇ ಛೇ! ಎಂದಿಗೂ ಸಾಧ್ಯವಿಲ್ಲ! ಆ ರೀತಿ ಎಲ್ಲಿ ನಡೆದಿದೆ ತೋರಿಸು ಅನ್ನುವಿರಾ? ಆದಿ ಶಂಕರರ ಚರಿತ್ರೆಯನ್ನು ಒಂದು ಸಲ ಅವಲೋಕಿಸಿ!











ಆದಿ ಶಂಕರ

ಆದಿ ಶಂಕರಾಚಾರ್ಯರನ್ನು ಕ್ರಿಸ್ತಪೂರ್ವದಲ್ಲಿ ಹುಟ್ಟಿಸುವರೆಷ್ಟೋ ಮಂದಿ, ಕ್ರಿಸ್ತಶಕದಲ್ಲಿ ಹುಟ್ಟಿಸುವರೆಷ್ಟೋ ಮಂದಿ, ಆತನಿಗೆ ಹಳತರ ಹೊಳಪನ್ನಿಟ್ಟು ಪುರಾತನನೆನಿಸುವುದಕ್ಕೆ ಒಂದೆಡೆ ಪ್ರಯತ್ನಿಸಿದರೆ, ಮತ್ತೆ ಕೆಲವರು ಇನ್ನೂ ಕೆಳಕ್ಕೆ ತಳ್ಳುತ್ತಾರೆ. ಶಂಕರನ ಹುಟ್ಟಿಗೆ ಮತ್ತು ವಯಸ್ಸಿಗೆ ಸಂಬಂಧಪಟ್ಟಂತೆ ಉಂಟಾಗಿರುವಂತಹ ವಿವಾದಗಳಿಗೆ ಸಂಬಂಧಪಟ್ಟಂತೆ ಆಂಧ್ರದ ತೆಲುಗಿನ ಲೇಖಕರಾದ ಎಂ.ವಿ.ಆರ್.ಶಾಸ್ತ್ರಿಯವರು ಬರೆದಿರುವಂತಹ 'ಆದಿ ಶಂಕರಾಚಾರ್ಯರು-5ನೇ ಶತಮಾನದವರು' ಎಂಬ ಲೇಖನದಲ್ಲಿ ವಿವರಿಸುತ್ತಾರೆ. ಅದನ್ನು ಕನ್ನಡಕ್ಕೆ ಬಾಬು ಕೃಷ್ಣಮೂರ್ತಿ ಅನುವಾದ ಮಾಡಿದ್ದು, ಈ ಲೇಖನವನ್ನು ನನ್ನ ಗಮನಕ್ಕೆ ತಂದಿದ್ದು ಕೋಲಾರದ ಮಿತ್ರರಾದ ಲೋಕೇಶ್‌ರವರು.

ಹೌದು, ವೀರಶೈವ ಪಂಚಪೀಠದ ಆಚಾರ್ಯರನ್ನು ಕೇಳಿದರೆ, ಶಂಕರನ ಹುಟ್ಟನ್ನು ಪುರಾಣದ ಯುಗಕ್ಕೂ, ರಾಮಾಯಣದ ಕಾಲಕ್ಕೂ ಎಳೆದುಕೊಂಡು ಹೋಗಬಲ್ಲರು. ಏಕೆಂದರೆ, ರೇಣುಕಾಚಾರ್ಯರೇ ಶಂಕರನಿಗೆ ಚಂದ್ರಮೌಳೀಶ್ವರ ಲಿಂಗವನ್ನು ದಯಪಾಲಿಸಿದ್ದು!

ಹುಟ್ಟದೇ ಇರುವವರಿಂದ ಧರ್ಮಪ್ರಚಾರ ಮಾಡಿಸಿ, ಅವರ ಛಾಯಾಬಿಂಬಗಳಲ್ಲಿ ಮಠಗಳನ್ನು ಸ್ಥಾಪಿಸಿ ದರ್ಬಾರುಗಳನ್ನು ಮಾಡಿಸುವುದು ಏನೂ ಅಪರಿಚಿತವೇನಲ್ಲ ಅನೇಕ ಮಠಗಳಿಗೆ. ತಾವೇ ಕೆಲವು ಬಗೆಯ ಭಾವಾವಿಕಾರದವರಾಗಿರುವಂತಹ ಶಾಸ್ತ್ರಿಗಳನ್ನು ಕರೆತಂದು, ಕೂರಿಸಿ, ಅನುಕೂಲಸಿಂಧು ಸ್ವಾಮೀಜಿಗಳು ಗುರುಪೀಠಗಳ ಪರಂಪರೆಯನ್ನು ಬರೆಸುತ್ತಾರೆ. ಹಾಗೆ ಬರೆಸುವಾಗ ಮೂಲಕ್ಕೆ ಯಾರದ್ದಾದರೂ ಪ್ರಸಿದ್ಧರಾದ ಮತ್ತು ಸತ್ವಶಾಲಿಯಾದ ಗುರುಗಳ ಮೂಲವೊಂದನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ಹಾಗೆ ಗುರುತಿಸಿಕೊಂಡು ತಮ್ಮಯವರೆಗೂ ಎಳೆದು ತರುವಾಗ ಪರಂಪರೆಯ ಮಾರ್ಗಮಧ್ಯದಲ್ಲಿ ಹಲವರನ್ನು ಹುಟ್ಟಿಸಿ ಮುಗಿಸಿ ಪರಂಪರೆಯ ಕೊಂಡಿಗಳನ್ನು ಸೃಷ್ಟಿಸಬೇಕಾಗುತ್ತದೆ. ಇಂತಹ ಅದೆಷ್ಟೋ ಗ್ರಂಥಗಳು, ಸುಳ್ಳು ಸಾಕ್ಷಿಗಳು ಶ್ರೀ ಶ್ರೀ ಶ್ರೀ ಜಗದ್ಗುರುಗಳ ದರ್ಬಾರುಗಳಲ್ಲಿ ನಡೆದುಹೋಗುತ್ತವೆ.

ಹಾಗಾಗಿಯೇ ನೀರಿಲ್ಲದ ನದಿಯಲ್ಲಿ ಈಜಾಡುವುದು, ಗೋಡೆಗಳಿಲ್ಲದ ಮನೆಯನ್ನು ಪ್ರವೇಶಿಸುವುದು, ಬಾಯಿಲ್ಲದ ಬ್ರಾಹ್ಮಣರು ಉಣ್ಣುವುದು; ಈ ಎಲ್ಲವೂ ಆದಿಶಂಕರರ ಹುಟ್ಟಿನ ಗುಟ್ಟಿಗೆ ಮಾತ್ರ ಸಂಬಂಧಿಸಿದ್ದಲ್ಲ, ಶಂಕರಾಚಾರ್ಯರ ಪರಂಪರೆಯಲ್ಲಿ ಬಂದಿರುವ ಇತರ ಆಚಾರ್ಯರ ಬಗ್ಗೆಯೂ ಕೂಡ ಎಂಬುದು ಕೆಲವರ ಗುಮಾನಿ. ಮೂಲದಲ್ಲಿ ಮಠಗಳು ಎಂಬುವು ಏನಾಗಿದ್ದವು? ಅವುಗಳಲ್ಲಿ ಯಾವ ಬಗೆಯ ಕೃತ್ಯಗಳು ನಡೆಯುತ್ತಿದ್ದವು? ಅವುಗಳ ಚರಿತ್ರೆಯ ಚಾರಿತ್ರ್ಯವನ್ನು ಉಳಿಸಿಕೊಳ್ಳಲು ಯಾವ ಯಾವ ರೀತಿಯ ರಹಸ್ಯಗಳನ್ನು ಕಾಪಾಡಬೇಕಾಯಿತು: ಇತ್ಯಾದಿಗಳನ್ನು ಹೇಳುವುದಕ್ಕೆ ಸಂಶೋಧಕರು ಇದ್ದಾರೆ. ಅವರು ಅದನ್ನು ಮಾಡುತ್ತಿದ್ದಾರೆ.

ಆದರೆ, ಮೊದಲಿಗೆ ಹುಟ್ಟೇ ಸಮಸ್ಯೆಯಾದ್ದರಿಂದ ಅದರ ಕಡೆಗೇ ಕೊಂಚ ಗಮನ ಕೊಡೋಣ.

ಎಂ.ವಿ.ಆರ್.ಶಾಸ್ತ್ರಿಯವರು ತಮ್ಮ 'ಆದಿ ಶಂಕರಾಚಾರ್ಯ -5ನೇ ಶತಮಾನದವನು' ಎಂಬ ಕೃತಿಯಲ್ಲಿ ಹೀಗೆ ಮುಂದುವರಿಯುತ್ತಾರೆ.

ಮ್ಯಾಕ್ಸ್ ಮುಲ್ಲರ್‌ರಂತಹ ಪಾಶ್ಚಾತ್ಯ ಬೃಹಸ್ಪತಿಗಳು ಆದಿಶಂಕರರು ಕ್ರಿಸ್ತಶಕ 788ರಲ್ಲಿ ಹುಟ್ಟಿ 820ರಲ್ಲಿ ಪರಂಧಾಮನಗೈದಿದರೆಂದು ದ್ವಂದ್ವಾತೀತವಾಗಿ ನಿರ್ಧರಿಸಿ ಬಿಟ್ಟರು. ದಾಸ್‌ಗುಪ್ತ, ರಾಧಾಕೃಷ್ಣನ್‌ರಂತಹ ಭಾರತೀಯ ವಿದ್ವಾಂಸರೂ ಅದನ್ನು ಒಪ್ಪಿಕೊಂಡರು. ಎಲ್ಲಾ ಚರಿತ್ರೆ ಗ್ರಂಥಗಳಲ್ಲೂ ಅವೇ ವರ್ಷಗಳು ಎದುರಿಲ್ಲದ ಸತ್ಯಗಳಂತೆ ಚಲಾವಣೆಯಾಗುತ್ತಿವೆ.

ಅಂದರೆ, ಈ ಮಹಾ ಚರಿತ್ರೆಕಾರರ ಮಾತಿನನ್ವಯ ಪ್ರಪಂಚವೆಲ್ಲಾ ನಂಬುತ್ತಿರುವಂತೆ ಕ್ರಿಸ್ತಶಕ 788ಕ್ಕೆ ಮೊದಲು ಆದಿ ಶಂಕರಾಚಾರ್ಯರು ಹುಟ್ಟಲೇ ಇಲ್ಲ. ಈ ಸಂಗತಿಯನ್ನು ಗಮನದಲ್ಲಿರಿಸಿಕೊಂಡು, ಈಗ - ಹೆಚ್ಚೂ ಕಡಿಮೆ ಪ್ರಾಮಾಣಿಕ ಚರಿತ್ರೆಯೆಂದು ಪಾಶ್ಚಾತ್ಯರೇ ಒಪ್ಪಿಕೊಂಡ ಕಲ್ಹಣನ ರಾಜತರಂಗಿಣಿಯನ್ನು ತೆರೆಯಿರಿ.

ಕಾಶ್ಮೀರದ ರಾಜರಲ್ಲಿ ಎಪ್ಪತ್ತನೆಯವನಾದ ಗೋಪಾದಿತ್ಯನು ಕ್ರಿಸ್ತಪೂರ್ವ 417ರಿಂದ ಅರವತ್ತು ವರ್ಷ ರಾಜ್ಯವಾಳಿದನೆಂದೂ, ಆತನೇ ಕ್ರಿಸ್ತಪೂರ್ವ 366ರಲ್ಲಿ ಶಂಕರಾಚಾರ್ಯ ದೇವಸ್ಥಾನವನ್ನು ಶ್ರೀನಗರದಲ್ಲಿ ಕಟ್ಟಿಸಿದನೆಂದೂ ರಾಜತರಂಗಿಣಿ ಹೇಳುತ್ತದೆ. ಕಣಿವೆಯಿಂದ ಸಾವಿರ ಅಡಿಗಳ ಎತ್ತರದಲ್ಲಿ ತುರ್ಕ್-ಇ-ಸುಲೇಮಾನ್ ಬೆಟ್ಟದ ಮೇಲೆ ಕಟ್ಟಿರುವ ಈ ಆಲಯವನ್ನು ಅನಂತರದ ಕಾಲದಲ್ಲಿ ಮುಸ್ಲಿಂ ರಾಜ ಜೈನುಲ್ ಅಬ್ದೀನ್ ದುರಸ್ತಿ ಮಾಡಿಸಿದನೆಂದು ಸಹ ಕಾಶ್ಮೀರ ಚರಿತ್ರೆಯಿಂದ ತಿಳಿದುಬರುತ್ತದೆ.

ನಮ್ಮ ಚರಿತ್ರಕಾರರು ಆದಿ ಶಂಕರರನ್ನು ಹುಟ್ಟಿಸಿದ್ದೇನೋ ಕ್ರಿ.ಶ 788ರಲ್ಲಿ! ಅಂದರೆ ಕ್ರಿಸ್ತಪೂರ್ವ 366ರಲ್ಲಿ ಶಂಕರಚಾರ್ಯಾಲಯ ನಿರ್ಮಾಣವಾದ ಸಾವಿರದ ನೂರ ಐವತ್ತ ನಾಲ್ಕು ವರ್ಷಗಳ ನಂತರ! ಇದನ್ನು ಅನುಸರಿಸಿ, ಮನುಷ್ಯನೊಬ್ಬ ತಾನು ಹುಟ್ಟುವುದಕ್ಕೆ ಸಾವಿರ ವರ್ಷಗಳ ಮೊದಲೇ ತನ್ನ ಹೆಸರಿನಲ್ಲಿ ಗುಡಿ ಕಟ್ಟಿಸಿಕೊಳ್ಳಬಲ್ಲನೆಂದು ತಿಳಿದುಬಂತಲ್ಲವೇ!?

ಈಗ ನೇಪಾಳ ರಾಜವಂಶಾವಳಿಯನ್ನು ತಿರುವಿ ಹಾಕಿ. ಸೂರ್ಯವಂಶದ ದೊರೆ ವೃಷದೇವ ವರ್ಮ ಪರಿಪಾಲಿಸುತ್ತಿದ್ದಾಗ ಕ್ರಿ.ಪೂ 487ರಲ್ಲಿ ದಕ್ಷಿಣದಿಂದ ಆದಿಶಂಕರರು ನೇಪಾಳಕ್ಕೆ ಬಂದು ಬೌದ್ಧ ನಂಬಿಕೆಯನ್ನು ಧ್ವಂಸ ಮಾಡಿದರೆಂದು ತಿಳಿದುಬರುತ್ತದೆ. (ದ ಇಂಡಿಯನ್ ಆ್ಯಂಟಿಕ್ವರಿ: ವಾಲ್ಯೂಂ. 13. ಪುಟ ಸಂಖ್ಯೆ: 411)

ಕ್ರಿ.ಪೂ. 487 ಎಂದರೆ, ನಮ್ಮ ಚರಿತ್ರೆಯ ಪುಸ್ತಕಗಳ ಪ್ರಕಾರ ಆದಿ ಶಂಕರರು ಇನ್ನೂ 1275 ವರ್ಷಗಳ ನಂತರ ಹುಟ್ಟುವವರೆಂದಾಗ, ಹುಟ್ಟದವನು ದೇಶಾಂತರ ಹೊರಟು ದಿಗ್ವಿಜಯ ಯಾತ್ರೆ ನಡೆಸಬಹುದೆಂದು ಇಲ್ಲಿಯವರೆಗೂ ಹೇಳಿದ್ದು ಇದರ ಅನುಸಾರವಾಗಿ ರುಜುವಾತಾಯಿತಲ್ಲವೇ?

ಹೀಗೆ ಶಾಸ್ತ್ರಿಗಳು ವಿಷಯವನ್ನು ವಿವರಿಸುತ್ತಾ ಆದಿ ಶಂಕರರು 8 ನೆಯ ಶತಮಾನದವರು ಎಂಬ ಪಾಶ್ಚಾತ್ಯ ಚರಿತ್ರೆಕಾರರ ನಿರ್ಣಯಗಳನ್ನು ತಳ್ಳಿಹಾಕುತ್ತಾರೆ. ಇವರ ಪ್ರಕಾರ ಕ್ರಿ.ಶ. 788ರಲ್ಲಿ ಹುಟ್ಟಿದ್ದು ಆದಿಶಂಕರರು ಅಲ್ಲ, ಕಂಚಿ ಪೀಠದ ಆಚಾರ್ಯರಲ್ಲಿ 38ನೆಯವರಾದ ಅಭಿನವ ಶಂಕರರು ಎಂದು.

ಅಭಿನವ ಶಂಕರ

ಆದಿಶಂಕರ ಕೇರಳದ ಕಾಲಡಿಯಲ್ಲಿ ಹುಟ್ಟಿದರೆ, ಅಭಿನವ ಶಂಕರ ಹುಟ್ಟಿದ್ದು ಚಿದಂಬರಂನಲ್ಲಿ. ಆದಿ ಶಂಕರನಂತೆ ಅಭಿನವ ಶಂಕರರೂ ದೇಶವೆಲ್ಲಾ ಸುತ್ತಿದರು. ಕಾಶ್ಮೀರಕ್ಕೂ ಹೋಗಿದ್ದರು. ಆದಿಶಂಕರ ಸತ್ತಿದ್ದು 32ನೆಯ ವಯಸ್ಸಿನಲ್ಲಿ, ಅಭಿನವ ಶಂಕರ ಸತ್ತಿದ್ದು 52ನೆಯ ವಯಸ್ಸಿನಲ್ಲಿ. ಆಗ ಕ್ರಿ.ಶ.840. ಆದರೆ, ಅವರನ್ನೇ ಆದಿಶಂಕರರು ಎಂದು ತಪ್ಪು ತಿಳಿದುಕೊಂಡು 788ಕ್ಕೆ 32 ವರ್ಷಗಳನ್ನು ಕೂಡಿಸಿ, ಕ್ರಿ.ಶ. 820ರಲ್ಲಿ ಸತ್ತರು ಎಂದು ಹೇಳುತ್ತಾರೆ.

ಆದರೆ, ಶಾಸ್ತ್ರಿಗಳ ಪ್ರಕಾರ 820ರಲ್ಲಿ ಆದಿಶಂಕರನೂ ಸಾಯಲಿಲ್ಲ, ಅಭಿನವ ಶಂಕರನೂ ಸಾಯಲಿಲ್ಲ. ಆದಿಶಂಕರ ಹಿಂದಿನ ಶತಮಾನಗಳಲ್ಲೇ ಕಾಲವಶವಾಗಿದ್ದರೆ, ಅಭಿನವ ಶಂಕರ ಕ್ರಿ.ಶ. 840ರಲ್ಲಿ ಸತ್ತಿದ್ದು, ಪಾಶ್ಚಾತ್ಯ ವಿದ್ವಾಂಸರು ನಮೂದಿಸುವಲ್ಲಿ, ದಾಖಲು ಮಾಡುವಲ್ಲಿ ಎಡವಟ್ಟು ಮಾಡಿದ್ದಾರೆ ಎಂದು ಅರ್ಥ.

ಆದಿಶಂಕರ ಹುಟ್ಟಿದ್ದು ಯಾವಾಗ?

ಶಾಸ್ತ್ರಿಗಳ ಪ್ರಕಾರ ಇದರಲ್ಲಿ ಗೊಂದಲವೇನೂ ಇಲ್ಲ. ಆತ ಹುಟ್ಟಿದ್ದು ಕ್ರಿ.ಪೂ 509ರಲ್ಲಿ, ಶಂಕರ ತನ್ನ ಹದಿನೈದನೆಯ ವಯಸ್ಸಿನಲ್ಲಿ (ಅಂದರೆ ಕ್ರಿ.ಪೂ 494) ಕುಮಾರಿಲ ಭಟ್ಟರನ್ನು ಸಂಧಿಸಿದನೆಂದೂ ತಿಳಿಯುತ್ತದೆ. ಈ ಅಂಶವು ಪ್ರಾಚೀನ ಜೈನ ಗ್ರಂಥ ಜಿನ ವಿಜಯದಲ್ಲಿ ಸ್ಪಷ್ಟಪಡಿಸಲಾಗಿದೆ.

ಇದನ್ನು ನಿರೂಪಿಸುವಂತೆ ಟಿ.ಎಸ್ ನಾರಾಯಣ ಶಾಸ್ತ್ರಿ ಎಂಬುವರು ಜಿನ ವಿಜಯವನ್ನು ಕಷ್ಟಪಟ್ಟು ಸಂಪಾದಿಸಿ, ಅದರ ಆಧಾರದ ಮೇಲೆ 1916ರಲ್ಲಿಯೇ 'ಏಜ್ ಆಫ್ ಶಂಕರ' ಎಂಬ ಗ್ರಂಥವನ್ನು ಬರೆದರು. ಹಾಗಿದ್ದರೂ ಇದನ್ನು ಮಾನ್ಯ ಮಾಡುತ್ತಿಲ್ಲ.

ಶೃಂಗೇರಿ ಮಠದ ಕಿತಾಪತಿ

ಎಂ.ವಿ.ಆರ್.ಶಾಸ್ತ್ರಿಯವರು ಬಹಳ ನೇರವಾಗಿ ಶೃಂಗೇರಿ ಮಠದವರ ಮೇಲೆ ಕಿಡಿಕಾರುತ್ತಾರೆ. ಅವರು ಕೇಳುತ್ತಾರೆ, "ಅತಿ ಪ್ರಾಚೀನ ಶಂಕರ ವಿಜಯ ಸರಿಯಲ್ಲವೆನ್ನುವವರು ಶಂಕರರ ಕಾಲಕ್ಕೆ ಪ್ರಮಾಣವಾಗಿ ಬೇರಾವುದಾದರೂ ಗ್ರಂಥವನ್ನು ತೋರಿಸುತ್ತಿದ್ದಾರಾ? ವಿವಿಧ ಕಾಲಗಳಲ್ಲಿ ಶಂಕರ ವಿಜಯದ್ ಹೆಸರಿನ ಹತ್ತಾರು ಗ್ರಂಥಗಳು ಹುಟ್ಟಿದರೂ, ಎಲ್ಲಕ್ಕಿಂತಲೂ ಹೆಚ್ಚಾಗಿ ಈಗ ಪ್ರಚಲಿತವಾಗಿರುವುದು ಮಾಧವ - ವಿದ್ಯಾರಣ್ಯರು ಬರೆದ ಶಂಕರ ದಿಗ್ವಿಜಯ. ಮೊದಲು ಪಂಚದಶಿಯನ್ನು ಬರೆದ ವಿದ್ಯಾರಣ್ಯ ಸ್ವಾಮಿಗಳೇ ಅದನ್ನು ರಚಿಸಿದರೆನ್ನುತ್ತಾರೆ. ನಿಜಕ್ಕೂ ಇದನ್ನು ಬರೆದದ್ದು 20ನೆಯ ಶತಮಾನದ ಆರಂಭದಲ್ಲೆಂದೂ, ಕುಂಭಕೋಣ ಶೃಂಗೇರಿ ಮಠಗಳ ನಡುವೆ ಮೇಲುಕೀಳುಗಳ ವಿವಾದ ಹುಟ್ಟಿಕೊಂಡಾಗ ಶೃಂಗೇರಿ ಮಠಕ್ಕೆ ಉಪಯೋಗವಾಗುವಂತೆ ಮಾಧವ ವಿದ್ಯಾರಣ್ಯರ ಹೆಸರಿನಲ್ಲಿ ತಾನೇ ಈ ಗ್ರಂಥವನ್ನು ಹುಟ್ಟುಹಾಕಿದ ಹಾಗೆ ಭಟ್ಟಶ್ರೀ ನಾರಾಯಣ ಶಾಸ್ತ್ರಿ ಎಂಬುವವರು ಹೇಳಿಕೊಂಡರೆಂದು ವೇಟೂರಿ ಪ್ರಭಾಕರ ಶಾಸ್ತ್ರಿಯವರು 1922 ರಲ್ಲಿ ಆಂಧ್ರಪತ್ರಿಕೆ ಎಂಬ ತೆಲುಗು ಪತ್ರಿಕೆಯಲ್ಲಿ ಬರೆದಿದ್ದಾರೆ.


ರಚನಕಾರರು ಯಾರೆಂಬ ಸಂಗತಿಯನ್ನು ಬದಿಗೆ ಸರಿಸಿದರೂ ಮಾಧವೀಯ ಶಂಕರ ವಿಜಯದಲ್ಲಿ ಶಂಕರರು ಯಾವ ದಿನ ಹುಟ್ಟಿದರೆಂಬ ಸಂಗತಿ ಇಲ್ಲವೇ ಇಲ್ಲ. ಹಾಗಾಗಿ ಶಂಕರನ ಹುಟ್ಟಿನ ಬಗ್ಗೆ ಹೇಳಲು ಈ ಶಂಕರ ವಿಜಯವು ಯಾವ ಮಾತ್ರವೂ ಉಪಯುಕ್ತವಲ್ಲ.

ಆದಿ ಶಂಕರರು ಕ್ರಿ.ಶ. 8ನೆಯ ಶತಮಾನದವರೆಂದು ನಂಬುತ್ತಿರುವವರು ಶೃಂಗೇರಿಯವರು ಮಾತ್ರ. ಅವರ ಅಭಿಪ್ರಾಯವೇ ನಿಜವಾದರೆ, ಅದೇ ಆದಿ ಶಂಕರರು ಸ್ಥಾಪಿಸಿದ ದ್ವಾರಕಾಪೀಠವು ಕ್ರಿ.ಪೂ 490ರಲ್ಲಿಯೇ ಹೇಗೆ ಹುಟ್ಟಿತು? ಅಂದಿನಿಂದ ಇಂದಿನವರೆಗೆ ಅವಿಚ್ಛಿನ್ನವಾಗಿ ಸಾಗಿಬಂದಿರುವ ಅಲ್ಲಿನ ಆಚಾರ್ಯ ಕಾಲಾನುಕ್ರಮವೂ ಅಲ್ಲಿನ ಪೀಠಾಧಿಪತಿಗಳ ದುರ್ಬುದ್ಧಿಯಿಂದ ಸೃಷ್ಟಿಯಾಗಿರುವುದೆಂದು ಅಂದುಕೊಳ್ಳಬೇಕೇ? ಹೋಗಲಿ, ಇತರ ಪೀಠಗಳ ದಾಖಲೆಗಳು ನಮ್ಮ ಶಕ್ಯವಲ್ಲವೆಂದೇ ಒಪ್ಪಿಕೊಳ್ಳೋಣ. ಯಥಾರ್ಥವೇನೆಂಬುದನ್ನು ನಿರ್ವಿವಾದ ವಾಗಿ ಪ್ರಕಟಿಸಲು ಶೃಂಗೇರಿ ಪೀಠದಲ್ಲಾದರೂ ಕೊನೆಯ ಪಕ್ಷ ಸ್ಪಷ್ಟವಾದ ದಾಖಲೆ ಇದೆಯೇ ಎಂದು ಪ್ರಶ್ನಿಸುವ ಶಾಸ್ತ್ರಿಗಳು 1963ರಲ್ಲಿ ಶೃಂಗೇರಿ ಪೀಠಕ್ಕೆ ಸೇರಿರುವವರು ಪ್ರಕಟಿಸಿದ ಸ್ಮೃತಿ ಕುಸುಮಾಂಜಲಿ ಸ್ಮರಣ ಸಂಚಿಕೆಯಲ್ಲಿ ಕೊಟ್ಟಿರುವ ಜಗದ್ಗುರು ಪರಂಪರೆಯಲ್ಲಿ ಶಂಕರನ ಕಾಲವನ್ನು ನಮೂದಿಸದೇ ಇರುವುದನ್ನು ತೋರಿಸುತ್ತಾರೆ.

ಈಗ ಹಲವು ಅನುಮಾನಗಳು ಹುಟ್ಟುತ್ತವೆ

ಶೃಂಗೇರಿಯವರು ಶಂಕರಾಚಾರ್ಯರೇ ಸ್ಥಾಪಿಸಿರುವ ಇತರ ಪೀಠಗಳು ಉಲ್ಲೇಖಿಸುವ ಕಾಲಾವಧಿಯನ್ನು ಒಪ್ಪದೇ ಇರುವುದಕ್ಕೆ ಕಾರಣವೇನು? ದ್ವಾರಕಾ, ಕಂಚಿ ಪೀಠಗಳು ಉಲ್ಲೇಖಿಸುವ ಕಾಲಮಾನವನ್ನು ನೋಡಿದರೆ, ಶೃಂಗೇರಿಯ ದಕ್ಷಿಣಾಮ್ನಾಯ ಪೀಠವನ್ನು ಕ್ರಿ.ಶ. 8ನೆಯ ಶತಮಾನದಲ್ಲಿ ಸ್ಥಾಪಿಸಿದ್ದಾನೆಂಬುದೇ ಸುಳ್ಳಾಗುವ ಲಕ್ಷಣಗಳು ತೋರುತ್ತಿವೆಯಲ್ಲ!!


ಆದಿ ಶಂಕರರು ಕ್ರಿ.ಪೂ. 5ನೆಯ ಶತಮಾನದಲ್ಲಿ ಕಂಚಿ ಪೀಠ ಸ್ಥಾಪಿಸಿ ಅಲ್ಲಿಯೇ ಶಿವೈಕ್ಯರಾದರೆಂದರೆ ಶೃಂಗೇರಿಯವರಿಗೆ ಕೋಪವೇಕೆ ಬರಬೇಕು? ತಮ್ಮ ಮಠದ ಪರಂಪರೆಯನ್ನು ಅಲ್ಲಿಯವರೆಗೂ ಅವರಿಗೆ ಎಳೆದುಕೊಂಡು ಹೋಗಲು ಸಾಧ್ಯವಾಗುತ್ತಿಲ್ಲವೇ? ಶಂಕರಾಚಾರ್ಯ ಶೃಂಗೇರಿಗೆ ಬಂದೇ ಇರಲಿಲ್ಲವೇ? ಪೀಠಗಳ ಏನೂ ಸ್ಥಾಪನೆಯೇ ಮಾಡಿಲ್ಲವೇ? ಎಂಬೆಲ್ಲಾ ಅನುಮಾನಗಳು ಮೂಡತೊಡಗುತ್ತವೆ. ■



ಭೂತ, ವಾಸ್ತು ಮತ್ತು ಅಮ್ಮ

ಸಾಮಾಜಿಕ ಕಾರ್ಯನಿಮಿತ್ತ ಪ್ರವಾಸದಲ್ಲಿದ್ದವನು ಮನೆಗೆ ಹಿಂತಿರುಗಿದಾಗ ಏಪ್ರಿಲ್ 22 ರ ಪತ್ರಿಕೆ ನನಗಾಗಿ ಕಾಯುತ್ತಿತ್ತು, ಹಾಗಾಗಿ ಪ್ರತಿಕ್ರಿಯೆ ಕಳಿಸಲು ವಿಳಂಬವಾಗಿದೆ. ಮೂರು ವಿಷಯಗಳ ಬಗ್ಗೆ ತನ್ನ ಅಭಿಪ್ರಾಯಗಳನ್ನು ದಾಖಲಿಸಲಿಚ್ಛಿಸುತ್ತೇನೆ.

1. ಯೋಗೇಶ್ ಮಾಸ್ಟರ್ ಅವರು, ಮೂರ್ಖರಿಗೆ ಚಾಲಾಕಿಗಳು ಅಂಟಿಸಿದ ಭೂತ(ಭಯ)ವನ್ನು ಸಮರ್ಥವಾಗಿ ಬಿಡಿಸಿ(ಟ್ಟಿ)ದ್ದಾರೆ. ಯೋಗೇಶ್ ಉಲ್ಲೇಖಿಸಿರುವ 'ನಾ ನಿನ್ನ ಬಿಡಲಾರೆ' ಚಿತ್ರದ 'ಬಿಡೆನು ನಿನ್ನ ಪಾದ' ಹಾಡಿನ ಚಿತ್ರೀಕರಣವನ್ನು ನಾನು ಕಣ್ಣಾರೆ ಕಂಡಿದ್ದೇನೆ. ಆಗ ಆದವಾನಿಯಲ್ಲಿ ಬ್ಯಾಂಕ್ ಅಧಿಕಾರಿಯಾಗಿ ಕೆಲಸ



ಮಾಡುತ್ತಿದ್ದ ನಾನು, ಶೂಟಿಂಗ್ ನೋಡಬೇಕೆಂದು ನನ್ನ ಬಂಧುವರ್ಗದ ಕೆಲ ಪುಟಾಣಿಗಳು ಇಷ್ಟಪಟ್ಟಿದ್ದರಿಂದ, ಆ ಬಾಲಸೈನ್ಯವನ್ನು ಮಂತ್ರಾಲಯಕ್ಕೆ ಕೊಂಡೊಯ್ದು ಶೂಟಿಂಗ್ ತೋರಿಸಿದ್ದೆ. ಮುಖದಲ್ಲಿ ಬೆವರು ಒಸರುವಂತೆ ಮತ್ತು ಕಣ್ಣಿಂದ ನೀರು ಇಳಿಯುವಂತೆ ನಟಿ ಲಕ್ಷ್ಮಿಯ ಮುಖಕ್ಕೆ ಮೇಕಪ್ ಮಹಿಳೆಯು ಅದೇನನ್ನೋ ಹಚ್ಚಿದ ಮರುಕ್ಷಣವೇ ನಟಿ ಲಕ್ಷ್ಮಿಯು ಹಾಡಿನ ಆರಂಭದ ಸೌಂಡ್ ಟ್ರ್ಯಾಕ್‌ಗೆ ಗದ್ಗದಿತ ಮುಖಾಭಿನಯ ನೀಡುತ್ತ ಓಡಿ ಬಂದು ರಾಘವೇಂದ್ರ ಸ್ವಾಮಿಗಳ ವೃಂದಾವನದೆದುರು ಶೋಕತಪ್ತಳಾಗಿ ನಿಂತಳು. 'ಕಟ್' ಹೇಳಿದ ನಿರ್ದೇಶಕರು ಲಕ್ಷ್ಮಿಗೆ ಅದೇನೋ ಸೂಚನೆ ನೀಡಿದರು ನೋಡಿ, ಕೂಡಲೇ ಲಕ್ಷ್ಮಿ ಭಯಂಕರ ಸಿಟ್ಟಿನಿಂದ ಬುಸುಗುಡುತ್ತ ತಮಿಳಿನಲ್ಲಿ ಇಷ್ಟುದ್ದ ಅದೇನೇನೋ ಅರಚಿದಳು! ಡೈರೆಕ್ಟರ್ ತಣ್ಣಗಾದರು! ವಿಪರ್ಯಾಸವೆಂದರೆ ಚಿತ್ರಮಂದಿರಗಳಲ್ಲಿ ಈ ಹಾಡು ನೋಡುತ್ತ ಅದೆಷ್ಟೋ ಮಹಿಳೆಯರು 'ಪರಮ ಗುರುಭಕ್ತೆ' ಲಕ್ಷ್ಮಿ ಮೇಡಮ್‌ಗೆ ಭಕ್ತಿಯಿಂದ ಕೈಮುಗಿದದ್ದು! 'ಭಕ್ತಿ' ಎಂಬುದೂ ನಮ್ಮನ್ನು 'ಭೂತ'ವಾಗಿ ಆವರಿಕೊಂಡಿದೆ!

2. ಜ್ಯೋತಿಷ್ಯ, ವಾಸ್ತು ಇವುಗಳ ಉಪದ್ವ್ಯಾಪಗಳನ್ನು ಚೆನ್ನಾಗಿ ಬಲ್ಲ ನಾನು ವಿಮರ್ಶಾ ದೃಷ್ಟಿಯಿಂದ 'ವಾಸ್ತು ಪ್ರಕಾರ' ಚಲನಚಿತ್ರವನ್ನು ನೋಡಿದೆ. ಇತ್ತ ಪೂರ್ಣ ಅಸಂಗತವೂ ಅಲ್ಲದ, ಅತ್ತ ಪೂರ್ಣ ಸಂಗತವೂ ಅಲ್ಲದ ಕಥಾ ಚೌಕಟ್ಟಿನಲ್ಲಿ ಪಾತ್ರಗಳು ಯೋಗರಾಜ ಭಟ್ಟರ (ಬೇ)ತಾಳಕ್ಕೆ ತಕ್ಕಂತೆ ಕುಣಿಯುವುದನ್ನು ಬಿಟ್ಟರೆ, 'ವಾಸ್ತು ಪ್ರಕಾರ' ಚಿತ್ರದಲ್ಲಿ, ಹೇಳಿಕೊಳ್ಳುವಂತಹದು ಏನೂ ಇಲ್ಲ. 'ವಾಸ್ತು ಶಾಸ್ತ್ರ' ಎಂಬ ಇಂದಿನ ಒಂದು ದೋಖಾ ಬಾಜಿಯ ಬಗ್ಗೆ ಜನರಲ್ಲಿ ಸೂಕ್ತ ಅರಿವು ಹುಟ್ಟಿಸುವ ಉತ್ತಮ ಅವಕಾಶವನ್ನು ಈ ಚಿತ್ರದಲ್ಲಿ ಭಟ್ಟರು ಹಾಳುಗೆಡವಿದ್ದಾರೆ (ಚಿತ್ರದಲ್ಲಿ ಜಗ್ಗೇಶ್ ಮತ್ತು ರಕ್ಷಿತ್ ಇವರು ಅನಂತ್‌ನಾಗ್‌ನ ಮನೆಯನ್ನು ಹಾಳುಗೆಡವುವಂತೆ). ಆಳ ಅಧ್ಯಯನವಿಲ್ಲದೆ ತೆಗೆದ ಈ ಸಿನಿಮಾದಲ್ಲಿ ಭಟ್ಟರು 'ವಾಸ್ತು ಶಾಸ್ತ್ರ'ದ ಬಗ್ಗೆ, ಅದ್ದಗೋಡೆಯ ಮೇಲೆ ದೀಪವಿಟ್ಟಂತೆ, ಏನೋ ಒಂದಿಷ್ಟು ಹೇಳಿ ಕೈ ತೊಳೆದುಕೊಂಡಿದ್ದಾರೆ. ದುಡ್ಡು ಕೊಟ್ಟು ಸಿನಿಮಾ ನೋಡುವ ಪ್ರೇಕ್ಷಕನಿಗೆ, ಸಿನಿಮಾ ಬಗ್ಗೆ ತನಗೆ ಅನ್ನಿಸಿದ್ದನ್ನು ಮುಕ್ತವಾಗಿ ವ್ಯಕ್ತಪಡಿಸುವ ಹಕ್ಕು ಖಂಡಿತ ಇದೆ. ಅದನ್ನು ಆಕ್ಷೇಪಿಸುವ ಹಕ್ಕು ಜಗ್ಗೇಶನಿಗೆ ಇಲ್ಲ, ಸಿನಿಮಾ ಪುಟದಲ್ಲಿ ಪತ್ರಿಕೆಯು ಜಗ್ಗೇಶನನ್ನು ಸರಿಯಾಗಿಯೇ ಜಗ್ಗಿದೆ. ಇನ್ನೂ ಸ್ಟ್ರಾಂಗಾಗಿ ಜಗ್ಗಬೇಕಿತ್ತು, ಪ್ರೇಕ್ಷಕರಿಗೆ ತಿಳಿಹೇಳುವ ಬದಲು ಜಗ್ಗೇಶ್, ವಿಚಿತ್ರ ಹಾಡುಗಳನ್ನು ಬರೆಯುವ ಮತ್ತು ಖಿಚಡಿ ಮನೋರಂಜನೆಯ ಚಿತ್ರಗಳನ್ನು (ಈಚೀಚೆಗೆ ಬರೀ ಅಂಥವನ್ನೇ) ತಯಾರಿಸುತ್ತಿರುವ ಭಟ್ಟರಿಗೆ ಕೊಂಚ ತಿಳಿಹೇಳಿದರೆ ಒಳ್ಳೆಯದಿತ್ತು.

3. ಗೌರಿ ಅವರ ಸಂಪಾದಕೀಯ ಬರಹ ನನಗೆ ತುಂಬ ತುಂಬ ಆಪ್ತವಾಯಿತು. 'ಅವ್ವ'ನ ಬಗ್ಗೆ ಲಂಕೇಶರು ಬರೆದ ಕವನ ನನ್ನ ಹೃದಯದಾಳಕ್ಕಿಳಿದಂತೆಯೇ, ಗೌರಿ ಅವರು ಅಮ್ಮನ ಬಗ್ಗೆ ಬರೆದ ಹೃದ್ಯ ಗದ್ಯ ನನ್ನ ಮನದಾಳದಲ್ಲಿ ಬೇರೂರಿದೆ. 'ತಾಯಿ' ಎಂಬ ಎರಡಕ್ಷರದ ಮಹತ್ವನ್ನು ಸರಳವೂ ಪ್ರಾಮಾಣಿಕವೂ ಆದ ಚಿತ್ರಣದ ಮೂಲಕ ತಿಳಿಸಿಕೊಟ್ಟಿದ್ದಾರೆ ಸೋದರಿ ಗೌರಿ. ಧನ್ಯವಾದ.

-ಎಚ್. ಆನಂದರಾಮ ಶಾಸ್ತ್ರಿ, ಬೆಂಗಳೂರು


ಸಿದ್ದರಾಮಯ್ಯಗೆ ಸಿಗದ ಅವಕಾಶ!!

'ಭೂಸ್ವಾಧೀನ ಮಸೂದೆ ವಿರೋಧಿಸಿ ದೆಹಲಿಯಲ್ಲಿ ನಡೆದ ಕಾಂಗ್ರೆಸ್ ಪಕ್ಷದ ಸಮಾವೇಶದಲ್ಲಿ ಭಾಗವಹಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಾತನಾಡಲು ಅವಕಾಶ ಸಿಗಲಿಲ್ಲ. ಸಭೆಯಲ್ಲಿ ಮಾತನಾಡಲು ಅವಕಾಶ ಸಿಗಬಹುದು ಎಂದೂ ಅವರು ಭಾವಿಸಿದ್ದರು ಎಂದು ಮೂಲಗಳು ತಿಳಿಸಿವೆ. ಆದರೆ ಮುಖ್ಯಮಂತ್ರಿಗಳಿಗೆ ಮಾತನಾಡಲು ಅವಕಾಶ ಸಿಗುವುದು ಹೋಗಲಿ, ಕಾರ್ಯಕ್ರಮ ನಿರೂಪಕರು ಸಿದ್ದರಾಮಯ್ಯನವರ ಹೆಸರನ್ನೂ ಹೇಳಲಿಲ್ಲ...' ಇದು ನಂದಿ ಮಾರ್ಕಿನ ಪತ್ರಿಕೆಯಲ್ಲಿ 'ಸಿದ್ದರಾಮಯ್ಯಗೆ ಸಿಗದ ಅವಕಾಶ' ಎಂಬ ಶೀರ್ಷಿಕೆಯಲ್ಲಿ ಇತ್ತೀಚೆಗೆ ಪ್ರಕಟವಾದ ಒಂದು ವರದಿ.

ಮೋದಿ ಸರಕಾರದ ಭೂಸ್ವಾಧೀನ ಮಸೂದೆಯ ವಿರುದ್ಧದ ಅಂದಿನ ಆ ಸಮಾವೇಶವನ್ನು ನೋಡಿದ ಯಾರಿಗೇ ಆದರೂ ಅಲ್ಲಿ ಸೋನಿಯಾ, ರಾಹುಲ್, ಮನಮೋಹನ ಸಿಂಗ್ ಮೊದಲಾದ ಅತ್ಯಂತ ಪ್ರಮುಖ ವ್ಯಕ್ತಿಗಳನ್ನುಳಿದು ಇತರ ಯಾರಿಗೂ ಭಾಷಣ ಮಾಡಲು ಅವಕಾಶವಿರಲಿಲ್ಲ ಎನ್ನುವುದು ಸ್ಪಷ್ಟವಾಗಿ ತಿಳಿಯುವಂತಿತ್ತು, ಅದೊಂದು ಪ್ರತಿಭಟನಾ ರ್‍ಯಾಲಿಯಾಗಿದ್ದು ಅಲ್ಲಿ ಎಲ್ಲರೂ ಭಾಷಣ ಮಾಡಿದರೆ ಅದನ್ನು ಕೇಳಿಸಿಕೊಳ್ಳುವ ವ್ಯವಧಾನ ಯಾರಿಗೂ ಇರುವುದಿಲ್ಲ ಮತ್ತು ಆ ಕಾರ್ಯಕ್ರಮದ ಮೂಲ ಉದ್ದೇಶವೇ ವಿಫಲವಾದೀತು. ಸಿದ್ದರಾಮಯ್ಯ ಅವರಿಗೆ ಹಿಂದಿ ಬರುವುದಿಲ್ಲವಾದ್ದರಿಂದ ಅಲ್ಲಿ ಅವಕಾಶ ಕೊಟ್ಟರೂ, ಹಿಂದಿ ಭಾಗದ ರೈತರೇ ಅಧಿಕವಾಗಿದ್ದ ಸಮಾವೇಶದಲ್ಲಿ ಭಾಷಣ ಮಾಡುವುದು ಅವರಿಗೆ ಸಾಧ್ಯವಾಗದ ಮಾತು ಮತ್ತು ಇಂಗ್ಲಿಷ್‌ನಲ್ಲಿ ಮಾತನಾಡಿದರೆ ಅಲ್ಲಿ ಯಾರೂ ಕೇಳಿಸಿಕೊಳ್ಳಲಾರರು (ಎ.ಕೆ.ಆಂಟನಿಯಂತಹ ಹಿರಿಯರು ಇಂಗ್ಲಿಷ್‌ನಲ್ಲಿ ಎರಡು ಮಾತನಾಡುವಾಗಲೇ ಅದು ಕಿರಿಕಿರಿ ಉಂಟುಮಾಡಿತು). ಅಲ್ಲದೆ, ಸಿದ್ದರಾಮಯ್ಯ ಅವರ ವ್ಯಕ್ತಿತ್ವ ಗೊತ್ತಿರುವ ಯಾರಿಗೇ ಆದರೂ ಅವರು ಭಾಷಣಗಳಿಗೆ ತಹತಹಿಸುವ ಚಿಲ್ಲರೆ ವ್ಯಕ್ತಿಯಲ್ಲ ಎನ್ನುವುದು ಗೊತ್ತಿರುವಂಥದ್ದೇ.

ವಸ್ತುಸ್ಥಿತಿ ಹೀಗಿರುವಾಗಲೂ 'ಸಭೆಯಲ್ಲಿ ಮಾತನಾಡಲು ಅವಕಾಶ ಸಿಗಬಹುದು ಎಂದೂ ಅವರು ಭಾವಿಸಿದ್ದರು' ಎಂದು ಮೂಲಗಳು ತಿಳಿಸಿವೆ' ಎಂಬ ಸದರಿ ವರದಿಯನ್ನು ಎಷ್ಟು ಟ್ರಕ್ ಲೋಡ್ ಉಪ್ಪಿನೊಂದಿಗೆ ಸ್ವೀಕರಿಸಬೇಕು ಎನ್ನುವುದನ್ನು ಓದುಗರೇ ನಿರ್ಧರಿಸಬೇಕು.

ಇವರ 'ಮೂಲಗಳು' ಎಂದರೆ ಯಾವುದು? ಪೂರ್ವಗ್ರಹಪೀಡಿತ ಊಹೆಯೇ ಮೂಲವೇ? ಇತ್ತೀಚೆಗೆ ಸೋನಿಯಾ ಜೊತೆಗಿನ ಸಿದ್ದರಾಮಯ್ಯ ಭೇಟಿಯ ಬಗ್ಗೆಯೂ ಇದೇ ಪತ್ರಿಕೆಯಲ್ಲಿ ಕಪೋಲಕಲ್ಪಿತ ಮತ್ತು



ಹಾಸ್ಯಾಸ್ಪದ ವರದಿ ಪ್ರಕಟವಾದದ್ದನ್ನು ಇಲ್ಲಿ ಸ್ಮರಿಸಬಹುದು.

ಅನೇಕ ವರ್ಷಗಳ ಬಳಿಕ ಮಠಮಾನ್ಯಗಳನ್ನು, ಪುರೋಹಿತಶಾಹಿಯನ್ನು ಎಲ್ಲಿ ಇಡಬೇಕೋ ಅಲ್ಲೇ ಇಟ್ಟಿರುವ ಅಪರೂಪದ ಮುಖ್ಯಮಂತ್ರಿಯೊಬ್ಬರು ಕರ್ನಾಟಕಕ್ಕೆ ದಕ್ಕಿದ್ದು, ಅವರನ್ನು ಸಹಿಸಿಕೊಳ್ಳಲು ಈ ಕ್ಷುದ್ರ ಶಕ್ತಿಗಳಿಗೆ ವಿಪರೀತ ಕಷ್ಟವಾಗುತ್ತಿರುವುದರಲ್ಲಿ ಅಚ್ಚರಿಯೇನೂ ಇಲ್ಲ, ವಸ್ತುನಿಷ್ಠತೆಯ ಪತ್ರಿಕಾ ಧರ್ಮಕ್ಕೆ ಬದ್ಧವಾಗಿರಬೇಕಿದ್ದ ಮಾಧ್ಯಮಗಳಲ್ಲೂ ಅವರ ವಿರುದ್ಧ ಎಷ್ಟೊಂದು ಶತ್ರುಗಳು ಹುಟ್ಟಿಕೊಂಡಿದ್ದಾರೆ!


-ಶ್ರೀನಿವಾಸ ಕಾರ್ಕಳ, ಮಂಗಳೂರು

ಈಗಲೂ ರಾಮಾಯಣ ಕಟ್ಟಿಕೊಂಡು ಏನಾಗಬೇಕು?

ಇತ್ತೀಚೆಗೆ ಹಾಸನದಲ್ಲಿ ನಡೆದ ಕೋಮು ಸೌಹಾರ್ದ ವೇದಿಕೆಯ ಬಹಿರಂಗ ಸಭೆಯಲ್ಲಿ ನಿಮ್ಮ ಬರುವಿಕೆಗಾಗಿ ನಾವೆಲ್ಲರೂ ಕಾತುರದಿಂದ ಕಾಯುತ್ತಿದ್ದೆವು. ನಮ್ಮ ಸಮಾಜದಲ್ಲಿ ಅದರಲ್ಲೂ ಕರ್ನಾಟಕದ ಜನರಲ್ಲಿ ನಿಮ್ಮ ಬಗ್ಗೆ, ನೀವು ಕೊಡುವ ಹೇಳಿಕೆ ಬಗ್ಗೆ ವಿಶೇಷವಾದ ಪ್ರಾಮುಖ್ಯತೆಯಿದೆ.

ಅಲ್ಲಿ ನೀವು ಭಾಷಣಕಾರ್ತಿಯಲ್ಲವೆಂದು ಹೇಳಿಕೊಂಡರೂ ನಿಮ್ಮ ಭಾಷಣಕ್ಕೆ ಜನರ ಮನದಲ್ಲಿ ಸ್ಥಾನಮಾನ ಮತ್ತು ಮನ್ನಣೆಯೂ ಇರುತ್ತದೆ ಎಂಬುದು ವಾಸ್ತವ.

ಅಂದಿನ ನಿಮ್ಮೆಲ್ಲಾ ಮಾತುಗಳು ಸಮಂಜಸವಾಗಿತ್ತು, ಕೆಲವನ್ನು ಹೊರತುಪಡಿಸಿ. ನೀವು ಲಕ್ಷ್ಮಣ ಶೂರ್ಪನಖಿಯ ಮೋಹವನ್ನು ನಿರಾಕರಿಸಿದ್ದಕ್ಕೆ, ರಾವಣ ಸೀತೆಯನ್ನು ಅಪಹರಣಮಾಡಿದ್ದು ಎಂದು ಹೇಳಿದ್ದು ಎಷ್ಟು ಸಮಂಜಸ? ಯಾರದೋ ತಂಗಿ ಪ್ರೀತಿ ನಿರಾಕರಿಸಿದರೆ ಅದರ ಸೇಡಿನ ಭಾಗವಾಗಿ ಅವರ ಹೆಂಡತಿಯನ್ನೋ, ಅಕ್ಕತಂಗಿಯರನ್ನೋ ಅಪಹರಿಸಬಹುದೆಂಬುದು ಸರಿ ಎಂಬಂತಾಗುವುದಿಲ್ಲವೆ?



ಸಮಾಜದಲ್ಲಿ ವಿಕೃತವಾಗಿ ಮಹಿಳೆಯರ ಮತ್ತು ಮಕ್ಕಳ ಮೇಲೆ ಲೈಂಗಿಕ ಅತ್ಯಾಚಾರದಂತಹ ಘಟನೆಗಳು ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಇಂತಹ ಹೇಳಿಕೆಗಳು ಅಪರಾಧಿಗಳನ್ನು ಸಮರ್ಥಿಸುವಂತಾಗುವುದಿಲ್ಲವೇ?

ಕಾಲ ಇಷ್ಟೆಲ್ಲಾ ವೈಜ್ಞಾನಿಕವಾಗಿ ಮುಂದುವರೆಯುತ್ತಿರುವ ಸಂದರ್ಭದಲ್ಲಿ ನಾವಿನ್ನೂ ಅದೇ ರಾಮಾಯಣ, ಮಹಾಭಾರತದಂತಹ ಪುರಾಣಗಳನ್ನು ಹಿಡಿದು ಎಳೆದಾಡುವುದು ಸರಿಯೇ? ನಾವು ಜನರಿಗೆ ಈಗಲಾದರು ಪುರಾಣಗಳನ್ನು ಬಿಟ್ಟು ವಾಸ್ತವಾಂಶಗಳನ್ನು ಪ್ರಜ್ಞಾಪೂರಕವಾಗಿ ಹೇಳದಿದ್ದರೆ, ಜನರು ಇಂದಲ್ಲ ನಾಳೆ ಸತ್ಯವನ್ನರಿಯುವ ಅವಕಾಶ ಇಲ್ಲದಂತೆ ಮಾಡಿದಂತಾಗುವುದಿಲ್ಲವೇ?

ಈ ಎಲ್ಲಾ ವಿಶ್ಲೇಷಣಗಳನ್ನು ಗಂಭೀರವಾಗಿ ಯೋಚಿಸುತ್ತೀರೆಂದು ತಿಳಿಯುತ್ತೇವೆ. ಮತ್ತು ಇದನ್ನು ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸುತ್ತೀರೆಂದು ನಂಬುತ್ತೇನೆ.

-ಶೀಲಾ ರಾಮನಾಥನ್, ಬೆಂಗಳೂರು

ಕಂದಾಚಾರಿ ಸ್ವಾಮಿಗಳು ಮತ್ತು ವಿಚಾರವಾದಿಗಳು

ಭಗವದ್ಗೀತೆಯಲ್ಲಿ ಬೋಧಿಸಿರುವ ಅಹಿಂಸೆ ಮತ್ತು ಜಾತಿಭೇದ ಹಾಗೂ ರಾಮಾಯಣದಲ್ಲಿಯ ಶ್ರೀ ರಾಮದೇವರ ಖಾಸಗಿ ಜೀವನದ ಬಗೆಗಿನ ತಮ್ಮ ವಿವಾದಾತ್ಮಕ ಹೇಳಿಕೆಗೆ ತಾವು ಎಂದಿಗೂ ಬದ್ಧರಾಗಿರುವುದಾಗಿ ಮೈಸೂರಿನ ವಿಚಾರವಾದಿ ಪ್ರೊ.ಭಗವಾನರು ಹೇಳಿದ ಮೇಲೆ ನಮ್ಮ ಉಡುಪಿಯ ಪೇಜಾವರಶ್ರೀಗಳು ಪ್ರೊ. ಭಗವಾನರಿಗೆ ಸವಾಲು ಎಸೆದು ಬಹಿರಂಗ ಚರ್ಚೆಯಲ್ಲಿ ಭಗವಾನರ ಎದುರೇ ಅವರು ಹೇಳಿದ್ದು ಸುಳ್ಳು ಎಂದು ಸಾಬೀತುಮಾಡಿ ತೋರಿಸುವುದಾಗಿ ಹೇಳಿಕೆ ಕೊಟ್ಟಿದ್ದರು. ಆದರೆ ಈವರೆಗೆ ಪೇಜಾವರ ಶ್ರೀಗಳು ಭಗವಾನರ ಜತೆ ಮೈಸೂರಿನಲ್ಲಿ ಚರ್ಚೆಗೆ ಹಸಿರುನಿಶಾನೆ ತೋರಿಸಿಲ್ಲ, ಕಾರಣಾಂತರಗಳಿಂದ ಪೇಜಾವರರಿಗೆ ಮೈಸೂರಿಗೆ ಹೋಗಲು ಸಾಧ್ಯವಿಲ್ಲದಿದ್ದರೆ ಉಡುಪಿಯಲ್ಲೇ ಈ ಚರ್ಚೆ ಆಗಲಿ ಎಂದು ಹೆಚ್ಚಿನ ಜನರ ಅಭಿಪ್ರಾಯ. ಇದಕ್ಕೆ ಉಡುಪಿಯ ಪ್ರೊ.ಗೋಪಾಲ ಬಿ ಶೆಟ್ಟಿ ಇವರ 'ಉಡುಪಿ ವಿಚಾರವಾದಿ ವೇದಿಕೆಯ' ಅಡಿ ಈ ಬಹಿರಂಗ ಚರ್ಚೆ ನಡೆದರೆ ಉತ್ತಮ.



ಪೇಜಾವರ ಶ್ರೀಗಳ ವತಿಯಿಂದ ರಾಮಚಂದ್ರಾಪುರ ಮಠದ ಗೋಸ್ವಾಮಿಗಳೂ ಇದ್ದರೆ ಇನ್ನೂ ಉತ್ತಮ. ಕಾರಣ ಈ ರಾಘವೇಶ್ವರ ಶ್ರೀಗಳ ಮೈಮೇಲೆ ಸ್ವತಃ ಶ್ರೀ ರಾಮಚಂದ್ರ ದೇವರೇ ಬರುತ್ತಾರೆ ಎಂಬ ಪ್ರತೀತಿ ಇರುವುದರಿಂದ ಸ್ವತಃ ಶ್ರೀ ರಾಮದೇವರ ಬಾಯಿಯಿಂದಲೇ ಅವನ ಜೀವನದ ಖಾಸಗಿ ಸಂಗತಿ ಮೂರು ಸಾವಿರ ವರ್ಷಗಳ ನಂತರವಾದರೂ ಫ್ಲಾಶ್-ಬ್ಯಾಕಿನಲ್ಲಿ ನಾವು ತಿಳಿದುಕೊಳ್ಳಬಹುದು!

ಜತೆಗೆ ರಾಮನು ತನ್ನ ವಿರುದ್ಧ ದಂಗೆಯೆದ್ದ ಬ್ರಾಹ್ಮಣರನ್ನು ಸಮಾಧಾನಿಸಲು ಅಸಹಾಯಕ ಅಮಾಯಕ ಶೂದ್ರ ತಪಸ್ವಿ ಶಂಭೂಕನನ್ನು ವಿನಾಕಾರಣ ಕೊಂದಿದ್ದು ಹೌದೋ ಅಲ್ಲವೋ ಎಂದು ರಾಮನ ಸ್ವಂತ ಬಾಯಿಯಿಂದಲೇ ನಾವು ಸತ್ಯ ತಿಳಿದುಕೊಳ್ಳಬಹುದು. ಯಾಕೆಂದರೆ ಈಗೀಗ ಕೆಲವು ವೈದಿಕಪರ ಸಾಹಿತಿಗಳು ಉತ್ತರ ರಾಮಾಯಣದ ಶಂಭೂಕ ಮೋಕ್ಷದ (ಕೊಲೆಯ) ಅಮಾನುಷ ಮನುವಾದಿ ಅಧ್ಯಾಯವನ್ನು ಕೇವಲ ನೂರಿನ್ನೂರು ವರ್ಷಗಳ ಹಿಂದೆ ಯಾರೋ ಅಧಿಕಪ್ರಸಂಗಿಗಳು ಕುತಂತ್ರದಿಂದ ಸೇರಿಸಿದ್ದು, ಅದು ಮೂಲ ವಾಲ್ಮೀಕಿ ರಾಮಾಯಣದಲ್ಲಿ ಇರಲೇ ಇಲ್ಲ ಎಂಬ ಹೊಸ (ವಿತಂಡ) ವಾದ ಮಂಡಿಸಿ ಜನರ ಹಾದಿ ತಪ್ಪಿಸುತ್ತಿದ್ದಾರೆ.

ಪ್ರೊ.ಭಗವಾನರ ಪರವಾಗಿ ಈ ಚರ್ಚೆಗೆ ನಿಡುಮಾಮಿಡಿ ಸ್ವಾಮೀಜಿಯನ್ನೂ ಆಹ್ವಾನಿಸಿದರೆ ಇನ್ನೂ ಉತ್ತಮ. ಹಿಂದೊಮ್ಮೆ ಕುಕ್ಕೆ ಸುಬ್ರಹ್ಮಣ್ಯದ ಮಡೆಸ್ನಾನದ ಬಗ್ಗೆ ಪೇಜಾವರ ಶ್ರೀಗಳ ಆಹ್ವಾನವನ್ನು ನಿಡುಮಾಮಿಡಿ ಸ್ವಾಮೀಜಿಗಳು ಸ್ವೀಕರಿಸಿ ಒಂದು ಕನ್ನಡ ಟಿವಿ ಚಾನೆಲ್ಲಿನಲ್ಲಿ ಒಂದು ಗಂಟೆ ಕಾಲ ನಡೆದ ಚರ್ಚೆಯಲ್ಲಿ ಪೇಜಾವರ ಶ್ರೀಗಳು ಮಡೆಸ್ನಾನದ ಪರವಾಗಿ ತಮ್ಮ ವಾದ ಮಂಡಿಸಲು ವಿಫಲರಾಗಿ ತೊದಲುತ್ತಿದ್ದರು. ಯಾಕೆಂದರೆ ಸ್ನಾತಕೋತ್ತರ ಪದವಿ ಪಡೆದಿರುವ ನಿಡುಮಾಮಿಡಿ ಸ್ವಾಮಿಗಳು ಕನ್ನಡ, ಇಂಗ್ಲಿಷ್ ಹಾಗೂ ಸಂಸ್ಕೃತದಲ್ಲಿ ಪ್ರಖಾಂಡ ಪಾಂಡಿತ್ಯ ಹೊಂದಿದ್ದಾರೆ. ಅಷ್ಟೇ ಅಲ್ಲ, ಅವರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ಕೇವಲ ಹಿಂದೂ ಧರ್ಮ ಮಾತ್ರವಲ್ಲ ಬೌದ್ಧ ಧರ್ಮ ಸಹಿತ ಎಲ್ಲಾ ಧರ್ಮಗಳ ಸಾರವನ್ನು ಅರೆದು ಕುಡಿದಿದ್ದಾರೆ. ಹಾಗಾಗಿ ಅವರ ಪಾಂಡಿತ್ಯದ ಎದುರು ಪೇಜಾವರ ಶ್ರೀಗಳು ಪ್ರಾಥಮಿಕ ಶಾಲೆಯ ಹುಡುಗನಂತಾಗಿದ್ದರು.

ಮಂಗಳೂರಿನ ಹೊರವಲಯದಲ್ಲಿ ಆಶ್ರಮ ಹೊಂದಿರುವ ನೊಣಯ್ಯ ಶೆಟ್ಟಿ ಎಂಬ ಹಿಂದೂತ್ವವಾದಿ ಸ್ವಾಮೀಜಿ ಸಹ ಒಂದು ಟಿವಿ ಚರ್ಚೆಯಲ್ಲಿ ಕೆಲವು ವಿಚಾರವಾದಿಗಳ ಪ್ರಶ್ನೆಗಳಿಗೆ ಉತ್ತರಿಸಲಾಗದೇ ಬೆವರಿದ್ದರು. (ಈ ವಜ್ರದೇಹಿ ನೊಣಯ್ಯ ಶೆಟ್ಟಿ ಜಾತಿಯಿಂದ ಶೂದ್ರನಾದರೂ ತಾನು ಬ್ರಾಹ್ಮಣ ಎಂದು ತೋರಿಸಲು ಬ್ರಾಹ್ಮಣರ ತುಳು ಮಾತನಾಡುತ್ತಾರೆ. ತುಳುನಾಡಿನಲ್ಲಿ ಸಾಮಾನ್ಯ ತುಳು ಹಾಗೂ ಬ್ರಾಹ್ಮಣ ತುಳು ಎಂಬ ಎರಡು ಭಾಷಾ ಪ್ರಭೇದಗಳಿವೆ. ಕೇವಲ 5% ಜನರು ಮಾತನಾಡುವ ಬ್ರಾಹ್ಮಣ ತುಳುವೆಂದರೆ ಸವರ್ಣೀಯರು ತಮ್ಮ ಮೇಲ್ಮೆ ತೋರಿಸಲು ಮಾತನಾಡುವ ಕನ್ನಡ-ಸಂಸ್ಕೃತ ಮಿಶ್ರಿತ ತುಳು).

ಕಂದಾಚಾರಿ ಹಿಂದೂತ್ವವಾದಿ ಸ್ವಾಮಿಗಳು ಯಾವಾಗಲೂ ವಿಚಾರವಾದಿಗಳೊಂದಿಗೆ ಬೌದ್ಧಿಕ ಹಾಗೂ ವೈಚಾರಿಕ ಬಹಿರಂಗ ತಾಕಲಾಟ ತಪ್ಪಿಸಿಕೊಳ್ಳುತ್ತಿರುವು ದರಲ್ಲಿ ಆಶ್ಚರ್ಯವಿಲ್ಲ. ಪುರಾಣಗಳ ವಿಶ್ಲೇಷಣಾತ್ಮಕ ಜ್ಞಾನವಿಲ್ಲದಿದ್ದರೂ ಸವಾಲು ಎಸೆದು ಪರಾರಿ ಆಗುವುದು ಬಹಳಷ್ಟು ಪ್ರಚಾರಪ್ರಿಯ ಸ್ವಾಮೀಜಿಗಳ ಹಾಗೂ ಧಾರ್ಮಿಕ ನೇತಾರರ ಹಳೆಯ ತಂತ್ರ.

-ಆರ್.ಬಿ.ಶೇಣವ, ಮಂಗಳೂರು

ಧರ್ಮಸ್ಥಳದ ಧರ್ಮ ಮತ್ತು ಅಧರ್ಮದ ಬಗ್ಗೆ

ಧರ್ಮಸ್ಥಳದವರು ಕೃಷಿಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸ ಮತ್ತು ಮಂಜುನಾಥ ಆಯುರ್ವೇದ ಆಸ್ಪತ್ರೆಯಲ್ಲಿ ಜನರಿಗೆ ನೀಡುವ ಚಿಕಿತ್ಸೆಯಲ್ಲಿ ಉತ್ತಮ ಕೆಲಸವಿದೆ. ಪ್ರಕೃತಿಯ ಮಡಿಲಲ್ಲಿ ಇರುವ ಆ ಭಾಗದ ಬಹುತೇಕ ದೇವಾಲಯಗಳು ಪ್ರವಾಸಿಗರನ್ನು ಸೆಳೆಯುವುದು ತನ್ನ ಪವಾಡದಿಂದಲ್ಲ; ಬದಲಾಗಿ ಇಲ್ಲಿನ ಪಶ್ಚಿಮಘಟ್ಟದ ಕಾಡಿನ ಸೊಬಗು. ಈ ಕಾಡುಗಳ ಮಧ್ಯೆ ಈ ದೇವಾಲಯಗಳು ಇರುವ ಕಾರಣ ಇವರಿಗೆ ಅಪಾರ ಸಂಖ್ಯೆಯ ಭಕ್ತರು ಭೇಟಿ ನೀಡುತ್ತಾರೆ. ಹಣ ಕೂಡ ಹರಿದುಬರುತ್ತದೆ.

ತಮ್ಮ ತಮ್ಮ ಮನೆಯವರನ್ನು ಸೇರಿಸಿಕೊಂಡು ಟ್ರಸ್ಟ್ ಮಾಡಿಕೊಂಡು ಹಣ ಲೂಟಿ ಮಾಡುವ ಇವರು ಅಲ್ಪ ಸ್ವಲ್ಪ ಮಟ್ಟಿಗೆ ಒಳ್ಳೆಯ ಕೆಲಸ ಮಾಡಿದ್ದಾರೆ. ಆದ್ದರಿಂದ ಇಡೀ ಭಾರತದಲ್ಲಿ ತನ್ನ ಪ್ರಭಾವ ಬೀರುವ ಮಟ್ಟಿಗೆ ಇವರು ಬೆಳೆದು ನಿಂತಿದ್ದಾರೆ.

-ಸಿ. ಶಿವಕುಮಾರ್, ತುಮಕೂರು

ಭೈರಪ್ಪನದು ಮರೆವಲ್ಲ ಅಸಹನೆ

ಡಾ.ಹಯವದನ ಉಪಾಧ್ಯಾಯರ ಅಂಬೇಡ್ಕರರ ಕುರಿತ ಲೇಖನದಲ್ಲಿ ಸಂವಿಧಾನದ ಕುರಿತು ಮಾತಾಡುವಾಗ ಅಂಬೇಡ್ಕರರ ಹೆಸರೆತ್ತದ ಭೈರಪ್ಪನವರದ್ದು ಜಾಣಮರೆವಿರಬೇಕೆಂದಿದ್ದಾರೆ. ಆದರದು ಜಾಣ ಮರೆವಲ್ಲ;



ಕೆಟ್ಟ ಅಸಹನೆ. ಒಳೆಂಟು ವರ್ಷಗಳ ಹಿಂದೆ ಪುತ್ತೂರಿಗೆ ಭೈರಪ್ಪ ಬಂದಿದ್ದಾಗ ಸಂವಿಧಾನ ಬರೆದದ್ದು ಅಂಬೇಡ್ಕರ್ ಅಲ್ಲ ಎಂದು ನೇರವಾಗಿ ಹೇಳಿದ್ದು ನನ್ನ ನೆನಪು. ಆ ಮಾತನ್ನು ಪೂರ್ತಿಯಾಗಿ ನೆನಪಿಸಿಕೊಳ್ಳಲಾಗದಿದ್ದರೂ ಅದನ್ನ ಕೇಳಿ ಶಾಕ್ ಆದ ನಾನು ನನ್ನ ಮಿತ್ರರಾದ [illegible] ರಾಜ್ ಬಿಳಿಯವರಲ್ಲಿ "ಈ ಮನುಷ್ಯ ಹೀಗೆ ಹೇಳಿದ್ದಾನಲ್ಲ, ಮಾರಾಯ್ರೇ.." ಎಂದು ಫೋನ್‌ನಲ್ಲಿ ಹೇಳಿಕೊಂಡಿದ್ದೆ.

ಅಂಬೇಡ್ಕರರಂತಹ ಹುಟ್ಟು ದಲಿತನೊಬ್ಬ [illegible] ಯೋಚಿಸುವುದನ್ನು, ಇದರ [illegible] ಸುಲಭದಲ್ಲಿ ಒಪ್ಪದು. [illegible] ಹಿಂದೆ [illegible] [illegible] ನಡೆದ [illegible] [illegible] ಸುಬ್ರಹ್ಮಣ್ಯ ರಾವ್

ಎಂಬಾತ ನೇರಾನೇರವಾಗಿ ವಿದ್ವತ್ ಜನರು ಇರುವುದು ಕೇವಲ ಬ್ರಾಹ್ಮಣರಲ್ಲಿ ಮಾತ್ರವೇ ಎಂದು ವಾದ ಮಾಡಿದ್ದ. ದಲಿತ ವರ್ಗದ ಕೆ.ಆರ್.ನಾರಾಯಣನ್ ರಾಷ್ಟ್ರಪತಿ ಯಾದಾಗ ಸಂತೋಷ್ ಕುಮಾರ್ ಗುಲ್ವಾಡಿಯಂತಹ ಹಿರಿಯರೇ ಹರಿಜನ ಬ್ರಾಹ್ಮಣ (ಬ್ರಾಹ್ಮಣನ ಬ್ರಾಂಡೆಡ್ ಶ್ರೇಷ್ಠತೆಯ ಲೆವೆಲ್ಲಿಗೆ ಮುಟ್ಟಿದಾತ) ಎಂದು ಅವರನ್ನ ಹೊಗಳಿ (?) ಸಂಪಾದಕೀಯ ಬರೆದಿದ್ದರು. ಮಹಾಕಾವ್ಯ ಬರೆದ ವಾಲ್ಮೀಕಿ ಯಃಕಶ್ಚಿತ್ ಬೇಡನಾಗಿರಲು ಸಾಧ್ಯವೇ ಇಲ್ಲ ಎಂದು 'ವಾಲ್ಮೀಕಿ ಯಾರು?' ಪುಸ್ತಕ ಬರೆದ ನಾರಾಯಣಾಚಾರ್ಯನಿಗಿದ್ದದೂ ಇದೇ ರೋಗ. ವಾಸ್ತವದಲ್ಲಿ ನೋಡಿದರೆ, ಈ ಬ್ರಾಹ್ಮಣರಿಗಿಂತ ವಿದ್ಯೆಯಲ್ಲಿ ಅಬ್ರಾಹ್ಮಣರೇ ಶ್ರೇಷ್ಠರು. ಯಾಕೆಂದರೆ ಪರಂಪರಾಗತ ವಿದ್ಯಾವಂತ ಸಂಸ್ಕಾರದಲ್ಲೇ ಇದ್ದು ಅದೇ ಪರಿಸರದಲ್ಲಿ ಬೆಳೆಯುವ ಬ್ರಾಹ್ಮಣನ ಸಾಧನೆಗಿಂತ ಏನೂ ಬೇಸ್ ಇಲ್ಲದ ಅಬ್ರಾಹ್ಮಣನ ಸಾಧನೆ (ಎಷ್ಟೋ ಕೂಲಿನಾಲಿ ಮಾಡುವ ಹೆತ್ತವರಿಗೆ ಮಗ ಯಾವ ಕ್ಲಾಸ್‌ನಲ್ಲಿದ್ದಾನೆ, ಯಾವ ಸಬ್ಜೆಕ್ಟ್ ಕಲಿಯುತ್ತಿದ್ದಾನೆ ಎಂಬ ಅರಿವೇ ಇರದು ಆದರೆ ವಿದ್ಯಾವಂತ ಅನುಕೂಲಸ್ಥರಿಗೆ ಗೈಡ್ ಮಾಡುವವರು ಅನೇಕರಿರುತ್ತಾರೆ) ಹೋಲಿಕೆಗೆ ಸಿಗದಂತದ್ದು.

-ಶಶಿ ಪುತ್ತೂರು, ದಕ

ಅಭಿವೃದ್ಧಿ ಸಹಿಸದ ಢೋಂಗಿಗಳು


'ತದಡಿ ಬಂದರು-ಢೋಂಗಿ ಪರಿಸರವಾದಿಗಳಿಗೆ ಕಪಾಳಮೋಕ್ಷ' ಎಂಬ ಲೇಖನ ಕರಾವಳಿಯ ಪರಿಸರವಾದಿಗಳ ಕರಾಳ ಮುಖ ತೆರೆದಿಟ್ಟಿದೆ (ಲಂಕೇಶ್, 15 ಏಪ್ರಿಲ್). ಕರಾವಳಿಯಲ್ಲಿ ಈ ಢೋಂಗಿ ಪರಿಸರವಾದಿಗಳು ಮಾಡಿರುವ ಕುತಂತ್ರ ಒಂದೆರಡಲ್ಲ. ಗ್ರೀನ್‌ಪೀಸ್ ಎಂಬ ಅಮೆರಿಕ ಪ್ರಾಯೋಜಿತ ಅಂತರರಾಷ್ಟ್ರೀಯ ಸಂಸ್ಥೆಯೊಂದು ಪರಿಸರ ಕಾಳಜಿಯ ನೆಪದಲ್ಲಿ ಹಿಂದುಳಿದ ರಾಷ್ಟ್ರಗಳಲ್ಲಿ ಆಗುತ್ತಿರುವ ಅಭಿವೃದ್ಧಿಗೆ ಅಡ್ಡಗಾಲು ಹಾಕುವ ಕೆಲಸ ಮಾಡುತ್ತಿದೆ. ಈ ಸಂಸ್ಥೆಗೆ ಅಮೆರಿಕದ ದೊಡ್ಡ ದೊಡ್ಡ ಬಹುರಾಷ್ಟ್ರೀಯ ಕಂಪನಿಗಳು ಬಿಲಿಯನ್‌ಗಟ್ಟಲೆ ಗುಪ್ತ ದಾನ ಕೊಡುತ್ತವೆ. ಯಾಕೆಂದರೆ ಹಿಂದುಳಿದ ರಾಷ್ಟ್ರಗಳು ನಿಜವಾಗಿ ಅಭಿವೃದ್ಧಿ ಹೊಂದಿದರೆ ಈ ಅಮೆರಿಕನ್ ಕಂಪನಿಗಳ ಉತ್ಪನ್ನಗಳನ್ನು ಆ ಹಿಂದುಳಿದ ದೇಶಗಳಲ್ಲಿ ತುಂಬಾ ಲಾಭ ಇಟ್ಟು ಮಾರಾಟ ಮಾಡಲು ಆಗುವುದಿಲ್ಲ. ಅದಕ್ಕೆ ಪರಿಸರದ ನೆಪದಲ್ಲಿ ಆ ಹಿಂದುಳಿದ ರಾಷ್ಟ್ರಗಳಲ್ಲಿ ಅಭಿವೃದ್ಧಿ ಆಗದಂತೆ ತಡೆದರೆ ತಮ್ಮ ಉತ್ಪನ್ನಗಳು ನಿರಂತರ ಮಾರಾಟವಾಗಿ ಆ ಅಮೆರಿಕನ್ ಕಂಪನಿಗಳು ತಮ್ಮ ಜೇಬು ತುಂಬಿಸುತ್ತಲೇ ಹೋಗಬಹುದು ತಾನೇ. ಅದಕ್ಕೆ ಅವರು ಭಾರತದ ಢೋಂಗಿ ಪರಿಸರವಾದಿಗಳಿಗೆ ಗ್ರೀನ್‌ಪೀಸ್ ಮುಖಾಂತರ ಕೋಟಿಗಟ್ಟಲೆ ಹಣ ಹರಿಸುತ್ತಲೇ ಹೋಗುತ್ತಾರೆ. ಶಿರಸಿಯ ಪರಿಸರವಾದಿ ಗ್ಯಾಂಗಿನ ಗುಪ್ತ ಬ್ಯಾಂಕ್ ಖಾತೆಗಳನ್ನು ಹುಡುಕಿ ತೆಗೆದು ತನಿಖೆ ನಡೆಸಿದರೆ ಅವರೆಲ್ಲರಿಗೆ ಗ್ರೀನ್‌ಪೀಸ್ ಗುಟ್ಟಾಗಿ ಕೊಟ್ಟಿರುವ ಲಕ್ಷಗಟ್ಟಲೆ ಹಣದ ಮೂಲ ಹೊರಗೆ ಬಂದು ಈ ಪರಿಸರವಾದಿಗಳೆಲ್ಲಾ ಎಂತಹ ಹೀನ ದೇಶದ್ರೋಹಿಗಳು ಎಂಬುದು ನಿಚ್ಚಳವಾಗುತ್ತದೆ.

ಗ್ರೀನ್‌ಪೀಸ್‌ನಿಂದ ಹಣ ಪಡೆಯುವುದು ಸುಲಭವಂತೆ. ಭಾರತದಲ್ಲಿ ಪರಿಸರದ ಹೆಸರಲ್ಲಿ ಒಂದು ಎನ್‌ಜಿಓ ಹುಟ್ಟು ಹಾಕಿ ಒಂದೆರಡು ಪ್ರತಿಭಟನೆಗಳನ್ನು ಆಯೋಜಿಸಿ ಅದರ ಪೇಪರ್ ಕಟ್ಟಿಂಗನ್ನು ಹಾಗೂ ಪೊಲೀಸ್ ರಿಪೋರ್ಟುಗಳನ್ನು ಗ್ರೀನ್‌ಪೀಸ್‌ಗೆ ಕಳುಹಿಸಿದರೆ ಸಾಕು ಅಲ್ಲಿಂದ ಹಣ ಹರಿದುಬರಲು ಶುರುವಾಗುತ್ತದೆ. ಇದರ ಖರ್ಚಿನ ಲೆಕ್ಕ ಅವರು ಕೇಳುವುದೇ ಇಲ್ಲವಂತೆ. ಪರಿಸರ ಕಾಳಜಿಯ ನೆಪದಲ್ಲಿ ಉತ್ತರ ಕನ್ನಡದ ಗೋಸ್ವಾಮಿಯ ಮಾಣಿಗಳಿಗೆ ಎಷ್ಟೊಂದು ಸುಲಭದಲ್ಲಿ ಲಕ್ಷಾಂತರ ಕಮಾಯಿ!

ಏಷಿಯಾದಲ್ಲಿಯೇ ಅತಿದೊಡ್ಡ ನೌಕಾನೆಲೆ ಹೊಂದಿರುವ ಕಾರವಾರಕ್ಕೆ ಯುದ್ಧದ ಆಪತ್ಕಾಲೀನ ಪರಿಸ್ಥಿತಿಯಲ್ಲಿ ಹಿನ್ನಾಡಿನಿಂದ ವೇಗವಾಗಿ ಮಿಲಿಟರಿ ಸಿಬ್ಬಂದಿ ಹಾಗೂ ವಸ್ತುಗಳನ್ನು ಸಾಗಿಸಲು ರೇಲ್ವೆ ಮಾರ್ಗವೇ ಇಲ್ಲ. ಈಗಿರುವ ಕೊಂಕಣ ರೇಲ್ವೆ ಮಾರ್ಗವು ಕರಾವಳಿಯ ತೀರದಲ್ಲಿಯೇ ಮುಂಬೈವರೆಗೆ ಸಾಗುವುದರಿಂದ ಅದು ಯುದ್ಧಕಾಲದಲ್ಲಿ ವೈರಿ ದೇಶದ ದಾಳಿಗೊಳಗಾದರೆ ಕಾರವಾರ ನೌಕಾನೆಲೆ ಇತರ ಪ್ರದೇಶದೊಂದಿಗೆ ರೈಲು ಸಂಪರ್ಕ ಕಳೆದುಕೊಂಡು ದ್ವೀಪದಂತಾಗುತ್ತದೆ. ಹಾಗಾಗಿ ನಮ್ಮ ದೇಶದ ಭದ್ರತೆಯ ದೃಷ್ಟಿಯಿಂದ ಹುಬ್ಬಳ್ಳಿ-ಅಂಕೋಲ ರೇಲ್ವೆ ಲೈನು ಅತ್ಯಂತ ಅಗತ್ಯ. ಹಾಗಾಗಿ ಪರಿಸರದ ನೆಪದಲ್ಲಿ ವಿದೇಶದಿಂದ ಹಣ ಪಡೆದು ಹುಬ್ಬಳ್ಳಿ-ಅಂಕೋಲ ರೇಲ್ವೆ ಲೈನಿಗೆ ಅಡ್ಡಗಾಲು ಹಾಕಿರುವ ಪರಿಸರವಾದಿ ಭಯೋತ್ಪಾದಕರು ಪಾಕಿಸ್ತಾನಿ ಭಯೋತ್ಪಾದಕರಿಗಿಂತ ಹೆಚ್ಚು ಅಪಾಯಕಾರಿಗಳು.

-ಹರೀಶ್ ಎಂ.ಆರ್. ಬೆಳಗಾವಿ

ತಂತ್ರಜ್ಞರಿಗೆ ಸಂಭಾವನೆ ನೀಡದ ನಿರ್ದೇಶಕ



ಕನ್ನಡ ಚಿತ್ರರಂಗದಲ್ಲಿ ಕೆಲ ನಿರ್ಮಾಪಕರು ತಂತ್ರಜ್ಞರಿಗೆ ಸಂಭಾವನೆಯನ್ನು ಕೊಡದೆ ಮೋಸ ಮಾಡಿದ್ದರ ಬಗ್ಗೆ ಕೇಳಿದ್ದೀವಿ, ನೋಡಿದ್ದೀವಿ. ಆದರೆ ಇಲ್ಲೊಬ್ಬ ಹಿರಿಯ ನಿರ್ದೇಶಕರು ತನ್ನೊಂದಿಗೆ ಕೆಲಸ ಮಾಡಿದ ತಂತ್ರಜ್ಞರಿಗಾಗಲಿ, ಕಲಾವಿದರಿಗಾಗಲಿ ನಯಾಪೈಸೆ ಸಂಭಾವನೆಯನ್ನು ಕೊಡದೆ ಇರುವುದು ಬೆಳಕಿಗೆ ಬಂದಿದೆ. ಯಾರು ಈ ಹಿರಿಯ ನಿರ್ದೇಶಕ?

'ಸುಪ್ರಭಾತ', 'ಅಮೃತವರ್ಷಿಣಿ' ತರಹದ ಕ್ಲಾಸ್ ಚಿತ್ರಗಳನ್ನು ಕೊಟ್ಟಿದ್ದ ಅತ್ಯುತ್ತಮ ತಂತ್ರಜ್ಞ ಎಂದೇ ಹೆಸರು ಮಾಡಿದ್ದ ದಿನೇಶ್ ಬಾಬು. ಆನಂತರ ಒಂದರ ಹಿಂದೆ ಒಂದರಂತೆ ಸಿನಿಮಾ ಮಾಡಲು ಶುರುಹಚ್ಚಿಕೊಂಡರು. ಅದೂ ಯಾವ ರೀತಿಯಲ್ಲಿ ಎಂದರೆ ಎಂಟು-ಹತ್ತು ದಿನಗಳಲ್ಲಿ ಒಂದೇ ಮನೆಯಲ್ಲಿ ರೀಲು ಸುತ್ತಲು ತೊಡಗಿದರು. ಆ ಮೂಲಕ ಚಿತ್ರರಂಗದಲ್ಲಿ ಹೆಸರು ಕೆಡಿಸಿಕೊಂಡರು.

ಅಷ್ಟುಹೊತ್ತಿಗೆ ಮೈ ತುಂಬ ಸಾಲ ಮಾಡಿಕೊಂಡಿದ್ದ ದಿನೇಶ್ ಬಾಬು 2-3 ವರ್ಷ ತಮ್ಮ ಮೂಲ ರಾಜ್ಯವಾದ ಕೇರಳಕ್ಕೆ ಹೋಗಿ ತಲೆಮರೆಸಿಕೊಂಡಿದ್ದರು.


ಇಂತಹ ಬಾಬುಗೆ ಇತ್ತೀಚೆಗೆ ಒಂದು ಧಾರಾವಾಹಿ ಮತ್ತು ಒಂದು ಸಿನಿಮಾವನ್ನು ನಿರ್ದೇಶಿಸಲು ಅವಕಾಶ ಸಿಕ್ಕಿತು. ಆದರೆ ಸಿಕ್ಕ ಅವಕಾಶವನ್ನು ಸರಿಯಾಗಿ ಬಳಸಿಕೊಳ್ಳದ ಬಾಬು ತಮ್ಮ ಜೊತೆಯಲ್ಲಿ ಕೆಲಸ ಮಾಡಿದ ತಂತ್ರಜ್ಞರಿಗೆ ಸಂಭಾವನೆಯನ್ನು ಕೊಡದೆ ಮತ್ತೊಮ್ಮೆ ತಮ್ಮ ಹೆಸರನ್ನು ಕೆಡಿಸಿಕೊಂಡಿದ್ದಾರೆ.

ವಿಷಯ ಇಷ್ಟೆ. ಇತ್ತೀಚೆಗಷ್ಟೇ ಅವರು ನಿರ್ದೇಶಿಸಿದ್ದ ಮತ್ತು ಸಹ ನಿರ್ಮಾಪಕರಾಗಿದ್ದ 'ಪ್ರಿಯಾಂಕ' ಚಿತ್ರ ತಂಡದವರ ಪ್ರಕಾರ ಈ ಚಿತ್ರದಲ್ಲಿ ಕೆಲಸ ಮಾಡಿದ ಬಹುತೇಕ ಕಲಾವಿದರಿಗೆ, ನಿರ್ದೇಶನ ತಂಡದ ಸದಸ್ಯರಿಗೆ, ತಂತ್ರಜ್ಞರಿಗೆ, ಚಿತ್ರೀಕರಣ ಸ್ಥಳದ ಮಾಲೀಕರಿಗೆ ಯಾರಿಗೂ ನಯಾಪೈಸೆ ಕೊಡದಿರುವುದು.

ಬಲ್ಲ ಮೂಲಗಳ ಪ್ರಕಾರ 'ಪ್ರಿಯಾಂಕ' ಚಿತ್ರದ ನಿರ್ಮಾಪಕರು ಹಣವನ್ನು ಪ್ಯಾಕೇಜ್ ರೂಪದಲ್ಲಿ ದಿನೇಶ್ ಬಾಬು ಅವರಿಗೆ ಕೊಟ್ಟಿದ್ದರಂತೆ. ಆದರೆ ಬಾಬು ಆ ಹಣವನ್ನು ಚಿತ್ರಕ್ಕಾಗಿ ದುಡಿದ ತಂತ್ರಜ್ಞರಿಗೆ ಮತ್ತು ಕಲಾವಿದರಿಗೆ ಸಂಭಾವನೆ ರೂಪದಲ್ಲಿ ಕೊಡದೆ ತಾವು ಮಾಡಿಕೊಂಡಿದ್ದ ಸಾಲವನ್ನು ತೀರಿಸಿದ್ದಾರೆ.

ಇದಕ್ಕೆ ಹೇಳೋದು 'ದೇವರು ಕೊಟ್ಟರೂ ಪೂಜಾರಿ ಕೊಡಲ್ಲ' ಅಂತ. ■

ಬಾಲಿವುಡ್‌ಗೆ ಹಾರಲಿರುವ ಮತ್ತೊಬ್ಬ ನಿರ್ದೇಶಕ




ಇದು ಗಾಳಿ ಸುದ್ದಿಯೋ ಅಥವಾ ಕನ್ನಡದ ನಿರ್ದೇಶಕರೆಲ್ಲಾ ಬಾಲಿವುಡ್‌ಗೆ ಲಗ್ಗೆ ಹಾಕಲು ಮನಸ್ಸು ಮಾಡುತ್ತಿದ್ದಾರೋ ಗೊತ್ತಿಲ್ಲ, ಇದೀಗ ನಂದ ಕಿಶೋರ್ ಸರದಿ...

ಇವರ ಮೊದಲ ಚಿತ್ರ 'ಪಟಾಯ್ಸು' ಅರ್ಧಕ್ಕೆ ನಿಂತರೂ 'ವಿಕ್ಟರಿ' ಮೂಲಕ ಭರ್ಜರಿ ಯಶಸ್ಸು ಗಳಿಸಿದ ನಂದಕಿಶೋರ್ ಆನಂತರ 'ಅಧ್ಯಕ್ಷ', 'ರನ್ನ' ಚಿತ್ರಗಳನ್ನು ಮುಗಿಸಿದರು. ಜೊತೆಗೆ 'ಕಂದಿರೀಗ' ಚಿತ್ರವನ್ನು ಕನ್ನಡಕ್ಕೆ 'ಪೊಗರು' ಹೆಸರಿನಲ್ಲಿ ತರುತ್ತಿದ್ದಾರೆ.

ಅವರು ಅದ್ಯಾವ ಚಿತ್ರವನ್ನು ಹಿಂದಿಗೆ ತೆಗೆದುಕೊಂಡು ಹೋಗುತ್ತಿದ್ದಾರೆ ಎಂಬುದೇ ಕುತೂಹಲದ ವಿಷಯ. ಕನ್ನಡದಲ್ಲಿ ನಂದಕಿಶೋರ್ ಅವರ ಮನೆ ಮುಂದೆ ನಿರ್ಮಾಪಕರು ಸಾಲುಗಟ್ಟಿ ನಿಂತಿರುವಾಗ, ಕೈತುಂಬಾ ಅವಕಾಶಗಳಿರುವಾಗ, ಅದೇಕೆ ಬಾಲಿವುಡ್ ಕದ ತಟ್ಟುವ ಸಾಹಸ ಮಾಡುತ್ತಿದ್ದಾರೆ ಎಂಬುದೇ ಅರ್ಥವಾಗುತ್ತಿಲ್ಲ. ■

ಗಣೇಶ್ ಔಟ್, ವಿಜಿ ಇನ್

ವರ್ಷದ ಹಿಂದೆ ಯೋಗರಾಜ್ ಭಟ್ ಹಿಂದಿ ಚಿತ್ರ ಮಾಡುವುದಾಗಿ ಹೇಳಿ ತಿಂಗಳುಗಟ್ಟಲೆ ಮುಂಬೈನಲ್ಲಿ ಬೀಡುಬಿಟ್ಟಿದ್ದರು. ಆಗ ಅದ್ಯಾವನೋ ಸಿಂಗನ ಹಾಕಿಕೊಂಡು ಸಿನಿಮಾ ಮಾಡುತ್ತೇನೆಂದು ಲಕ್ಷಗಟ್ಟಲೆ ದುಡ್ಡನ್ನು ಖರ್ಚು ಮಾಡಿಸಿದ್ದರು. ಕಡೆಗೆ ಕಥೆ ಸರಿ ಇಲ್ಲ ಎಂಬ ಕಾರಣಕ್ಕೆ ನಿರ್ಮಾಪಕರಾದ ಬಿ.ಸುರೇಶ್ ಮತ್ತು ಶೈಲಜ ನಾಗ್ ದಂಪತಿಗಳು ಚಿತ್ರವನ್ನು ಮಾಡದೆ ಕೈಬಿಟ್ಟರು.



ಹಿಂದಿಯಲ್ಲಿ ಆಗದಿದ್ದರೇನಂತೆ ಕನ್ನಡದಲ್ಲೇ ಮಾಡಿ ಎಂದು ಸುರೇಶ್ ಮತ್ತು ಶೈಲಜ ಅವರುಗಳು ಭಟ್ಟರಿಗೆ ತಿಳಿಸಿದ್ದರು. ಆ ಚಿತ್ರದಲ್ಲಿ ಗೋಲ್ಡನ್ ಸ್ಟಾರ್ ಗಣೇಶ್ ಅಭಿನಯಿಸಬೇಕಿತ್ತು, ಆದರೆ ಸದ್ಯದ ಸುದ್ದಿ ಪ್ರಕಾರ ಗಣೇಶ್ ಜಾಗಕ್ಕೆ ದುನಿಯಾ ವಿಜಿ ಬಂದಿದ್ದು ಚಿತ್ರ ಮುಂದಿನ ತಿಂಗಳು ಸೆಟ್ಟೇರಲಿದೆ.

ಬಲ್ಲ ಮೂಲಗಳ ಪ್ರಕಾರ 'ವಾಸ್ತು ಪ್ರಕಾರ' ಚಿತ್ರದಲ್ಲಿ ಕಥಾವಸ್ತು ಇಲ್ಲದೇ ಮಕಾಡೆ ಮಲಗಿದ್ದರಿಂದ ಭಟ್ ಚಿತ್ರದಲ್ಲಿ ನಟಿಸದಿರಲು ಗಣೇಶ್ ತೀರ್ಮಾನಿಸಿದರಂತೆ. "ಈ ಚಿತ್ರದಲ್ಲಿ ನಟಿಸಿದರೆ ನಿಮ್ಮ ವಾಸ್ತು ಹಾಳಾಗುತ್ತದೆ" ಎಂದು ಶಿಲ್ಪಾ ತನ್ನ ಪತಿ ಗಣೇಶ್‌ಗೆ ಹೇಳಿದ್ದರಿಂದ ಅವರು ಹಿಂದೆ ಸರಿದರಂತೆ.

ಪಾಪ, ಭಟ್ಟರು ಗಣೇಶ್‌ಗಾಗಿ ಒಂದು ನವಿರಾದ ಲವ್ ಸ್ಟೋರಿಯನ್ನು ರೆಡಿ ಮಾಡಿದ್ದರಂತೆ. ಆದರೆ ಗಣೇಶ್ ಚಿತ್ರದಿಂದ ಹಿಂದೆ ಸರಿದ ಹಿನ್ನೆಲೆಯಲ್ಲಿ ಆ ಕಥೆಗೆ ಭಟ್ ಸ್ವಲ್ಪ ಆಕ್ಷನ್ ಸೀಕ್ವೆನ್ಸ್‌ಗಳನ್ನು ಸೇರಿಸಿ ಅದಕ್ಕೆ ದುನಿಯಾ ವಿಜಯ್‌ನೇ ಸೂಕ್ತ ಅಂತ ಆತನನ್ನು ಸೆಲೆಕ್ಟ್ ಮಾಡಿದರಂತೆ.

ಇತ್ತೀಚೆಗೆ ಸತತ ಫ್ಲಾಪ್ ಚಿತ್ರಗಳನ್ನೇ ಕಂಡಿರುವ ವಿಜಿ ಮತ್ತು ಭಟ್ ಇಬ್ಬರ ಇಮೇಜಿಗೂ ಸೂಕ್ತವಾಗುವಂತೆ ಕತೆಯನ್ನು ತಯಾರಿಸಲಾಗಿದೆಯಂತೆ. ಅಂದರೆ ಭಟ್-ವಿಜಯ್ ಕಾಂಬಿನೇಷನ್ ಚಿತ್ರದಲ್ಲಿ ಮಾತೂ ಇದೆ, ಭರ್ಜರಿ ಆಕ್ಷನ್ ಕೂಡ ಇದೆಯಂತೆ.

ಭಟ್ಟರ ಸಿನಿಮಾಗಳು ಬರೀ ಮಾತಿಗೆ ಫೇಮಸ್ಸು. ವಿಜಯ್‌ರ ಚಿತ್ರಗಳು ಬರೀ ಹೊಡಿಬಡಿಯೋದಕ್ಕೆ ಫೇಮಸ್ಸು. ಈಗ ಈ ತದ್ವಿರುದ್ಧದ ಅದ್ಭುತಗಳು ಮೊದಲ ಬಾರಿಗೆ ಒಂದಾಗುತ್ತಿರುವುದು ಗಾಂಧಿನಗರಿಗರಿಗೆ ಹೊಸ ಅಚ್ಚರಿ. ಅಂದಹಾಗೆ ಚಿತ್ರಕ್ಕೆ 'ಮಾಸ್ತರ' ಅಥವಾ '407' ಎಂಬ ಟೈಟಲ್ ಇಡುವ ಬಗ್ಗೆ ಮಾತುಕತೆ ನಡೆಯುತ್ತಿದೆಯಂತೆ. ■

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Friday R B P LANKESH, Kannada Weekly Price Rs. 15/- 06-05-2015 RNI No. KARKAN2005

ಹಾಲಿವುಡ್‌ಗೆ ಹಾರಲಿರುವ ಗ್ರೀಕ್ ಗಾಡ್



'ಕಹೋ ನಾ ಪ್ಯಾರ್ ಹೇ' ಚಿತ್ರದ ಮೂಲಕ ಬಾಲಿವುಡ್ ಬೆಳ್ಳಿತೆರೆಗೆ ಪದಾರ್ಪಣೆ ಮಾಡಿದ ಹೃತಿಕ್ ರೋಷನ್ ತನ್ನ ಅಭಿನಯ, ಡ್ಯಾನ್ಸ್ ಮತ್ತು ಕಟ್ಟುಮಸ್ತು ದೇಹದಿಂದಾಗಿ ಕೋಟ್ಯಾಂತರ ಹುಡುಗಿಯರ ಡ್ರೀಮ್ ಬಾಯ್ ಆಗಿದ್ದಾರೆ. 'ಅಗ್ನೀಪಥ್', 'ಕ್ರಿಷ್ 3', 'ಬ್ಯಾಂಗ್ ಬ್ಯಾಂಗ್' ಸೇರಿದಂತೆ ಬ್ಯಾಕ್ ಟು ಬ್ಯಾಕ್ ಹಿಟ್ಸ್ ಕೊಡುತ್ತಲೇ ಬಂದಿರುವ ಹೃತಿಕ್ ಇದೇ ವರ್ಷ ಹಾಲಿವುಡ್ ಅಂಗಳಕ್ಕೂ ಕಾಲಿಡಲಿದ್ದಾರೆ. ಬಾಲಿವುಡ್‌ನಲ್ಲಿ 'ಗ್ರೀಕ್ ಗಾಡ್' ಅಂತಲೇ ಜನಪ್ರಿಯರಾಗಿರುವ ಹೃತಿಕ್ ಹಲವು ವರ್ಷಗಳ ಹಿಂದೆಯೇ ಹಾಲಿವುಡ್‌ಗೆ ಹಾರಬೇಕಿತ್ತು. 'ಪಿಂಕ್ ಪ್ಯಾಂಥರ್-2' ಸೇರಿದಂತೆ ಅನೇಕ ಹಾಲಿವುಡ್ ಆಫರ್‌ಗಳನ್ನ ರಿಜೆಕ್ಟ್ ಮಾಡಿದ್ದ ಹೃತಿಕ್ ಕೊನೆಗೂ ಹಾಲಿವುಡ್ ಚಿತ್ರವೊಂದನ್ನ ಒಪ್ಪಿಕೊಂಡಿದ್ದಾರೆ. "ಈ ವರ್ಷ ನನ್ನ ಹಾಲಿವುಡ್ ಸಿನಿಮಾಗೆ ಚಾಲನೆ ಸಿಗಲಿದೆ" ಅಂತ ಖುದ್ದು ಹೃತಿಕ್ ಟ್ವಿಟರ್‌ನಲ್ಲಿ ಕನ್ಫರ್ಮ್ ಮಾಡಿದ್ದಾರೆ. ಅಷ್ಟುಬಿಟ್ಟರೆ, ಹಾಲಿವುಡ್ ಚಿತ್ರದ ನಿರ್ದೇಶಕ, ಪಾತ್ರವರ್ಗ, ತಂತ್ರಜ್ಞರ ಕುರಿತು ಹೃತಿಕ್ ಹೆಚ್ಚಾಗಿ ಮಾತನಾಡಿಲ್ಲ. ಈಗ ಆಶುತೋಷ್ ಗೌರೀಕರ್ ನಿರ್ದೇಶನದ 'ಮೊಹೆಂಜೊದಾರೋ' ಚಿತ್ರದಲ್ಲಿ ಬಿಜಿಯಾಗಿರುವ ಹೃತಿಕ್, ಅದು ಕಂಪ್ಲೀಟ್ ಆದ ತಕ್ಷಣ ಹಾಲಿವುಡ್‌ಗೆ ಹಾರಲಿದ್ದಾರೆ.

ಯಾರದ್ದೋ ದುಡ್ಡಲ್ಲಿ ನಾಣಿ ಜಾತ್ರೆ

ಕೆಲವು ವರ್ಷಗಳ ಹಿಂದೆ ಬಹುಮುಖಿ ಪ್ರತಿಭೆ ಎಸ್.ನಾರಾಯಣ್ ಅವರ ನಿರ್ದೇಶನದ ಚಿತ್ರಗಳು ಸಾಲುಸಾಲಾಗಿ ಮಕಾಡೆ ಮಲಗಿದ್ದರಿಂದ



ಪ್ರೇಕ್ಷಕರ ಮೇಲೆ ಬೇಜಾರು ಮಾಡಿಕೊಂಡು ಅವರು ಚಿತ್ರರಂಗದಿಂದಲೇ ನಿವೃತ್ತಿ ಘೋಷಿಸಿದ್ದರು. ಆದರೆ ಆನಂತರ ಚಿತ್ರರಂಗದ ಗಣ್ಯರು ಮತ್ತು ಅವರ ಅಭಿಮಾನಿಗಳೂ ಒತ್ತಾಯ ಮಾಡಿದ್ದರಿಂದ (ಎಸ್. ನಾರಾಯಣ್ ಪ್ರಕಾರ) ಅವರು ಮತ್ತೆ ಚಿತ್ರರಂಗದಲ್ಲಿ ಸಕ್ರಿಯರಾಗಿದ್ದಾರೆ.

ಈಗ ವಿಷಯ ಏನಪ್ಪ ಅಂದರೆ ನಿವೃತ್ತಿ ಘೋಷಿಸಿದ ನಂತರ ನಾರಾಯಣ್ ನಿರ್ದೇಶಿಸುವ ಬಹು ನಿರೀಕ್ಷೆಯ ಚಿತ್ರ 'ದಕ್ಷ' ಈ ವಾರ ತೆರೆಗೆ ಬರಲು ಸಿದ್ಧವಾಗಿದೆ. ಜನರಿಗಾಗಿ ಸಿನಿಮಾ ಮಾಡುವ ಬದಲು ದಾಖಲೆಗಾಗಿಯೇ ಈ ಚಿತ್ರವನ್ನು ಮಾಡಿರುವ ಎಸ್.ನಾರಾಯಣ್ ಅವರನ್ನು ಈ ಬಾರಿ ಪ್ರೇಕ್ಷಕರು ಗೆಲ್ಲಿಸುತ್ತಾರೋ ಅಥವಾ ಸೋಲಿಸುತ್ತಾರೋ ನೋಡಬೇಕು.

ಒಂದು ವೇಳೆ ಚಿತ್ರ ಸೋತರೆ ಮತ್ತದೆ ನಿವೃತ್ತಿಯ ನಾಟಕವಾಡುತ್ತಾರೋ ಇಲ್ಲ ಮರಳಿ ಯತ್ನವ ಮಾಡು ಎಂದು ಮುಂದಾಗುತ್ತಾರೋ ಎಂದು ಕಾದು ನೋಡಬೇಕಿದೆ. ಇದರ ಬೆನ್ನಲ್ಲೆ ಗಾಂಧೀನಗರದಲ್ಲಿ ಮತ್ತೊಂದು ಸುದ್ದಿ ಕೇಳಿಬರುತ್ತಿದೆ. ಅದೇನೆಂದರೆ ನಾರಾಯಣ್ ಹಿಂದಿ ಚಿತ್ರಕ್ಕೆ ಆಕ್ಷನ್ ಕಟ್ ಹೇಳಲು ಸಜ್ಜಾಗಿದ್ದಾರೆ. ನಕ್ಸಲಿಸಂಗೆ ಸಂಬಂಧಿಸಿದ 'ದಕ್ಷ' ಚಿತ್ರವನ್ನು ಅವರು ಹಿಂದಿಯಲ್ಲೂ ನಿರ್ದೇಶಿಸಲಿದ್ದಾರಂತೆ. ಆದರೆ ಗಾಂಧೀನಗರದ ಪಂಡಿತರ ಪ್ರಕಾರ "ಕನ್ನಡದಲ್ಲಿ ಈ ಚಿತ್ರ ಹಿಟ್ ಆಗುತ್ತೋ ಇಲ್ಲ ಮುಳುಗುತ್ತೋ ಗೊತ್ತಿಲ್ಲ. ಆದರೆ ಈ ಚಿತ್ರವನ್ನು ಹಿಂದಿಯಲ್ಲಿ ರಿಮೇಕ್ ಮಾಡುತ್ತಿರುವ ನಿರ್ಮಾಪಕ ಈ ಕಲಾ ಸಾಮ್ರಾಟ್‌ನನ್ನು ನಂಬಿ ಮುಳುಗೋದಂತೂ ಗ್ಯಾರೆಂಟಿ". ಇದನ್ನು ನೋಡಿ ಇನ್ನೂ ಕೆಲವರು "ಇದಕ್ಕೇ ಹೇಳೋದು 'ಯಾರದೋ ದುಡ್ಡು ಎಸ್.ನಾರಾಯಣ್ ಜಾತ್ರೆ' ಅಂತ" ಎಂದು ನಗಾಡುತ್ತಿದ್ದಾರೆ.



ಯಾವುದು ಸುದೀಪ್‌ರ ಮುಂದಿನ ಚಿತ್ರ?

ಸುದೀಪ್ ಅವರ ಮುಂದಿನ ಚಿತ್ರ ಯಾವುದು ಎಂಬ ಕುತೂಹಲ ಅವರ ಅಭಿಮಾನಿಗಳಿಗೆ. ಈಗ ಆ ಪ್ರಶ್ನೆಗೆ ಉತ್ತರ ಸಿಕ್ಕಿದೆ. ಸುದೀಪ್ ಅವರ ಮುಂದಿನ ಚಿತ್ರಕ್ಕೆ 'ಕೋಟಿಗೊಬ್ಬ-2' ಎಂದು ಹೆಸರಿಡಲಾಗಿದೆ. ಆ ಮೂಲಕ ಸುದೀಪ್ ಮತ್ತೊಮ್ಮೆ ವಿಷ್ಣುವರ್ಧನ್ ಅವರ ಇನ್ನೊಂದು ಸಿನಿಮಾದ ಶೀರ್ಷಿಕೆಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಚಿತ್ರವನ್ನು ಸೂರಪ್ಪ ಬಾಬು ನಿರ್ಮಿಸುತ್ತಿದ್ದು, ತಮಿಳಿನ ಖ್ಯಾತ ನಿರ್ದೇಶಕ ಕೆ.ಎಸ್.ರವಿಕುಮಾರ್ ನಿರ್ದೇಶಿಸುತ್ತಿದ್ದಾರೆ. ಹದಿನಾಲ್ಕು ವರ್ಷಗಳ ಹಿಂದೆ ವಿಷ್ಣುವರ್ಧನ್ ಅಭಿನಯದ 'ಕೋಟಿಗೊಬ್ಬ' ಚಿತ್ರವನ್ನು ಸೂರಪ್ಪ ಬಾಬು ನಿರ್ಮಿಸಿದ್ದರು. ನಾಗಣ್ಣ ನಿರ್ದೇಶಿಸಿದ್ದ ಆ ಸಿನಿಮಾ ತಮಿಳಿನ ಸೂಪರ್ ಸ್ಟಾರ್ ರಜನಿಕಾಂತ್ ನಟಿಸಿದ್ದ ತಮಿಳು ಸಿನಿಮಾದ ರಿಮೇಕ್ ಆಗಿತ್ತು. ಕನ್ನಡದಲ್ಲಿ 'ಕೋಟಿಗೊಬ್ಬ' ಸೂಪರ್ ಡೂಪರ್ ಹಿಟ್ ಆಗಿತ್ತು. ಆನಂತರ ಸೂರಪ್ಪ ಬಾಬು ನಿರ್ಮಾಣದ ಚಿತ್ರಗಳು ಯಾಕೋ ಗೆಲ್ಲಲೇ ಇಲ್ಲ.

ಕೆ.ಎಸ್.ರವಿಕುಮಾರ್ ಈ ಚಿತ್ರವನ್ನು ನಿರ್ದೇಶಿಸುವುದು ಈ ಹಿಂದೆಯೇ ಖಚಿತ ಆಗಿತ್ತು, ಆದರೆ ಶೀರ್ಷಿಕೆ ಬಗ್ಗೆ ಗೊಂದಲಗಳಿದ್ದವು. ಈಗ ಎಲ್ಲವೂ ಪಕ್ಕಾ ಆಗಿದೆ. 'ಕೋಟಿಗೊಬ್ಬ' ಮತ್ತೊಮ್ಮೆ ಸುದೀಪ್ ಅಭಿನಯದಲ್ಲಿ ತೆರೆಯ ಮೇಲೆ ಬರುತ್ತಿದ್ದಾನೆ.

ಸಿನಿಮಾ ಸುದ್ದಿ
ಕಾರ್ತಿಕ್ ಸಿ.ಎಸ್





ರಾಘಣ್ಣನ ಹಸಿರು ಕ್ರಾಂತಿ

ಏಪ್ರಿಲ್ 24 ಬಂತೆಂದರೆ ವರನಟ ಡಾ.ರಾಜ್‌ಕುಮಾರ್ ಅಭಿಮಾನಿ... ಮತ್ತು ಕರುನಾಡಿಗೆ ತಮ್ಮ ಮನೆಯ ಹಬ್ಬದಷ್ಟೇ ಸಂಭ್ರಮ. ಏಕೆ... ಅಂದು ಡಾ. ರಾಜ್‌ಕುಮಾರ್ ಅವರ ಹುಟ್ಟುಹಬ್ಬ. ಇದರ ಅಂಗ... ರಾಜ್ ಕುಟುಂಬ ಪ್ರತಿ ವರ್ಷ ಸಮಾಜ ಸೇವಾಕಾರ್ಯದಲ್ಲಿ ತೊಡಗು... ಸಂಪ್ರದಾಯ. ಸಂಘಸಂಸ್ಥೆಗಳು, ಅಭಿಮಾನಿಗಳು ಅನ್ನದಾನ, ರಕ್ತದಾನ ತ... ಹಲವು ಕಾರ್ಯಕ್ರಮಗಳನ್ನು ಏರ್ಪಡಿಸಿ ರಾಜ್ ಹುಟ್ಟುಹಬ್ಬವನ್ನು ಆಚರಿಸು...

ಆದರೆ ಈ ಬಾರಿ ರಾಜ್ ಪುತ್ರ ರಾಘಣ್ಣ ಅಪ್ಪಾಜಿಯ ಹುಟ್ಟುಹಬ್ಬ... ವಿಶಿಷ್ಟವಾಗಿ ಆಚರಿಸಲು ಸಜ್ಜಾಗಿದ್ದಾರೆ. ಅದೇನೆಂದರೆ ಸುಮಾರು ... ಸಾವಿರ ಸಸಿಗಳನ್ನು ನೆಟ್ಟು ಹಸಿರುಕ್ರಾಂತಿಯತ್ತ ರಾಜ್ಯವನ್ನು ಸಾಗಿಸುವುದ...

ರಾಘಣ್ಣ ಇತ್ತೀಚೆಗೆ "ಅಪ್ಪಾಜಿಯವರಿಗೆ ಪರಿಸರ ಕಾಳಜಿ ಇತ್ತು... ನೆಟ್ಟು ಭೂಮಿತಾಯಿಯನ್ನು ತಂಪುಗೊಳಿಸಬೇಕೆಂದು ಅವರು ಯಾವಾಗ... ಹೇಳುತ್ತಿದ್ದರು. ಅವರ ಇಚ್ಛೆಯಂತೆ ಈ ಬಾರಿ ಗಿಡ ನೆಡುವ ಮೂಲಕ ... ಹುಟ್ಟುಹಬ್ಬವನ್ನು ಆಚರಿಸಲಿದ್ದೇವೆ" ಎಂದು ಹೇಳಿದ್ದಾರೆ.

ಈಗಾಗಲೇ ರಾಘಣ್ಣ ಈ ಅಭಿಯಾನದಲ್ಲಿ ಕಾರ್ಯಪ್ರವೃತ್ತರಾಗಿ... ಹಲವು ದಿನಗಳ ಹಿಂದೆ ಸಸಿಗಳನ್ನು ನೆಟ್ಟು ಈ ಯೋಜನೆಗೆ ಸಾಂಕೇತಿಕವಾಗಿ ಚಾಲನೆ ನೀಡಿದ್ದಾರೆ. ಇನ್ನೂ ಒಂದು ವಿಶೇಷವೆಂದರೆ ಏಪ್ರಿಲ್ 24ರಂದು ಡಾ.ರಾಜ್ ಅವರ ಸಮಾಧಿಯ ಬಳಿ ಪಾರ್ವತಮ್ಮನವರು ಎರಡು ಸಸಿಗಳನ್ನು ನೆಡಲಿದ್ದಾರೆ. ಮುಂದಿನ ವರ್ಷ ಒಂದು ಲಕ್ಷ ಸಸಿಗಳನ್ನು ನೆಡುವ ಯೋಜನೆ ರಾಘಣ್ಣನಿಗೆ ಇದೆಯಂತೆ.



ಅಪ್ಪಾಜಿಯ ಹುಟ್ಟುಹಬ್ಬಕ್ಕೆ ಶುಭಾಶಯ ಹೇಳಲು ಬರುವವರು ಗಿಡವೊಂದನ್ನು ನೆಡಲಿ ಎಂದು ತಮ್ಮ ಅಭಿಮಾನಿಗಳಲ್ಲಿ ವಿನಂತಿ ಮಾಡಿದ್ದಾರೆ. ರಾಜ್‌ಕುಮಾರ್ ... ಹೆಸರಲ್ಲಿ ಗಿಡಗಳು ಬೆಳೆದು ಹೆಮ್ಮರವಾಗಲಿ; ಇದರಿಂದ ... ಹಸಿರಾಗಿ ಜನರಿಗೂ ಅನುಕೂಲವಾಗಲಿ ಎಂಬುದು ರಾ... ಆಶಯ. ಅಷ್ಟೇ ಅಲ್ಲ, "ಇನ್ನು ಮುಂದೆ ನಾನು ಯಾ... ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾದರೆ ಗಿಡ ನೆಡಬೇಕು ಎ... ಕಂಡೀಷನ್ ಹಾಕುತ್ತೇನೆ. ... ಒಪ್ಪಿದರೆ ಮಾತ್ರ ನ... ಕಾರ್ಯಕ್ರಮಕ್ಕೆ ಬರುತ್ತೇ... ಎಂದಿದ್ದಾರೆ ರಾಘಣ್ಣ.

ಈ ಅಭಿಯಾನದಿಂದ ಬೇರೆ ನಟರಿಗೂ ರಾಘಣ್ಣ ಮಾದರಿಯಾಗಲಿ... ಒಟ್ಟಿನಲ್ಲಿ ಈ ವ... ಸಸಿ ನೆಡುವ ಮೂಲ... ವರನಟನ ಹುಟ್ಟುಹಬ್ಬವನ್ನು ಆಚರಿಸುತ್ತಿರುವುದು ಅರ್ಥಪೂರ್ಣವಾಗಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com